Regd. No. M. 3618

Licence No 31
Licensed to Post without Prepayment.

ನವಯುಗ

Vol.33 No 18

7-1-1954

ವರ್ಷ ೩೩ ವಾರ ೧೮

ಪಂಚಾಯತುಗಳ ಆಡಳಿತ

ಗ್ರಾಮ ಪಂಚಾಯತುಗಳ ಮೂಲಕ ಹಳ್ಳಿಗಳಲ್ಲಿ ಸುವ್ಯವಸ್ಥೆಯನ್ನು ನೆಲೆಗೊಳಿಸಿ ಶಾಂತಿ ಹಾಗೂ ಸುಖದಿಂದ ಜನರೆಲ್ಲ ಜೀವನ ನಡೆಸಲು ಅನುಕೂಲವಾಗುವಂತೆ ಉಚಿತವಾದ ಸೌಕರ್ಯಗಳನ್ನು ಒದಗಿಸಿ ಕೊಡುವ ಪದ್ಧತಿ ಭಾರತಕ್ಕೆ ಚಿರಪರಿಚಿತವಾಗಿರುತ್ತದೆ. ಉತ್ತಮವಾದ ರಾಜ್ಯ ಪದ್ಧತಿಯಲ್ಲಿ ಹಳ್ಳಿಗಳೇ ಪ್ರಾಮುಖ್ಯವಾದ ಘಟಕಗಳಾಗಿದ್ದು ಅಲ್ಲಿ ಕೆಲಸ ಮಾಡುವ ಗ್ರಾಮ ಪಂಚಾಯತುಗಳೇ ರಾಷ್ಟ್ರದ ನಿಜವಾದ ನೆಲಗಟ್ಟಾಗುತ್ತವೆ. ಪ್ರಜಾಪ್ರಭುತ್ವ ಪದ್ಧತಿಯನ್ನು ಸ್ಥೀಕರಿಸುವ ಭಾರತದಲ್ಲಿಕೂಡ ಆಡಳಿತದ ನಿಕೇಂದ್ರೀಕರಣವನ್ನು ಪುರಸ್ಕರಿಸುವ ಗ್ರಾಮ ಪಂಚಾಯತುಗಳು ಹೆಚ್ಚು ಹೆಚ್ಚಾಗಿ ಜನಪ್ರಿಯವಾಗುತ್ತಿರುವುದು ಸಹಜ. ಆದಲಿತದ ನರಿಷ್ಠ ಸ್ಥಾನದಲ್ಲಿರುವ ಮಹನೀಯರು ಈ ಸಂಶಯವನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಿದ್ದು, ಸ್ವಾತಂತ್ರ್ಯ ಸ್ವಾಸ್ಥ್ಯದ ಸಂಕೇತದಂತಿರುವ ಸಂಸ್ಥೆಗಳ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಂಡು, ಅವುಗಳಿಗೆ ತಕ್ಕ ಮಾರ್ಗದರ್ಶನವನ್ನು ನೀಡಲು ಪ್ರತ್ಯೇಕ ಇಲಾಖೆಯೊಂದನ್ನೆ ಸರಕಾರದಲ್ಲಿ ತೆರೆದಿರುವರು.

ಪಂಚ ವಾರ್ಷಿಕ ಯೋಜನೆಯಂಥ ರಾಷ್ಟ್ರೀಯ ಅಭಿವೃದ್ಧಿಯ ಕೆಲಸಗಳನ್ನು ಕೈಗೊಂಡು ಭಾರತದ ಏಳಿಗೆಯನ್ನು ಸಾಧಿಸಲು ಸರಕಾರವು ಪ್ರಯತ್ನಶೀಲವಾಗಿರುವ ಈ ಗಳಿಗೆಯಲ್ಲಿ-ಪ್ರತಿಯೊಂದು ಹಳ್ಳಿಯಲ್ಲೂ ಪುನಾರಚನೆಯ ಚಟುವಟಿಕೆಗಳು ನಡೆಯುವಂತೆ ನೋಡಿಕೊಳ್ಳುವುದು ಸೂಕ್ತವಾಗಿರುತ್ತದೆ. ಯೋಜನಾ ಆಯೋಗ ಜನಸದ ಅಭಿವೃದ್ಧಿಯೋಜನೆ; ರಾಷ್ಟ್ರೀಯ ವಿಕ್ಷರಣಾ ಸೌಕರ್ಯ ಮುಂತಾದವುಗಳಿಂದ ಹಳ್ಳಿಗಳಲ್ಲಿ ನವಚೈತನ್ಯ ಹಾಗೂ ಜಾಗೃತಿಗಳು ಉಂಟಾಗುವಂತೆ ಒತ್ತಾಸೆ ನೀಡಿದೆ ಇದರ ಫಲಿತಾಂಶವು ಒಳಿತನ್ನು ತರಬೇಕಾದರೆ ಹಳ್ಳಿಗಳಲ್ಲಿ ಕೆಲಸಮಾಡುವ ಗ್ರಾಮಪಂಚಾಯತುಗಳು ಅಧಿಕವೇಗದಿಂದ ತಮ್ಮ ಚಟುವಟಿಕೆಗಳನ್ನು ವಿಧಾಯಕ ಮಾರ್ಗದಲ್ಲಿ ಮುಂದೊತ್ತುವುದು ಅಗತ್ಯ. ಯೋಜನಾ ಆಯೋಗವಾಗಲಿ ಸರಕಾರವಾಗಲಿ, ಹಳ್ಳಿಗಳ ಉದ್ಧಾರದ ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ ಆ ವಿಶಿಷ್ಟ ಹಳ್ಳಿಯ ಜನರ ವಿಶ್ವಾಸವನ್ನು ಹಡೆಯುವುದಕ್ಕೇ ಸ್ಥರ ಅಲ್ಲಿ ಕೆಲಸ ಮಾಡುವ ಗ್ರಾಮ ಪಂಚಾಯತುಗಳ ನೆರವನ್ನು ಪಡೆಯುವುದು ಒಳಿತು. ಹೀಗೆ ಮಾಡಿದ ಪಕ್ಷದಲ್ಲಿ ಹಳ್ಳಿಯ ಪರಿಸ್ಥಿತಿಯನ್ನು ನಿಜಾರ್ಥದಲ್ಲಿ ಉತ್ತಮಗೊಳಿಸುವಂತೆ ಯೋಜನೆಯನ್ನು ಪರಿಷ್ಕರಿಸಲು ಅವಕಾಶ ದೊರೆಯುತ್ತದೆ; ಮತ್ತು ಆ ಯೋಜನೆಯ ವಿಷಯದಲ್ಲಿ ವಿಶೇಷವಾದ ಪ್ರಜ್ಞಾವೂ ನಡೆದು ಜನತಾ ಸಹಕಾರ ಉಚಿತ ಪ್ರಮಾಣದಲ್ಲಿ ದೊರೆಯುವ ಭರವಸೆಯುಂಟಾಗುತ್ತದೆ.

ಭಾರತದ ಐದು ಲಕ್ಷ ಹಳ್ಳಿಗಳಲ್ಲಿಯೂ ಗ್ರಾಮ ಪಂಚಾಯತುಗಳು ದಕ್ಷತೆಯಿಂದ ಕೆಲಸ ಮಾಡಿ, ಪ್ರತಿಯೊಂದು ಹಳ್ಳಿಯೂ ಆವಶ್ಯಕ ನನ್ನು ಹಾಗೂ ವಿಷಯಗಳಲ್ಲಿ ಸಂಪೂರ್ಣ ಸ್ವಾವಲಂಬಿಯಾದ ಪರಿಸ್ಥಿತಿಯನ್ನು ನಿರ್ಮಿಸಬೇಕೆಂದು ಮಹಾತ್ಮಾಗಾಂಧೀಜಿಯವರು ಪ್ರಯತ್ನಿಸಿದ್ದರು. ಈ ಗುರಿಯನ್ನು ಇಟ್ಟುಕೊಂಡು ನಮ್ಮ ಸರಕಾರಗಳು ಕೆಲಸವನ್ನು ಪ್ರಾರಂಭ ಮಾಡಿದ್ದರೂ, ಈ ಸ್ಥಳೀಯ ಸಂಸ್ಥೆಗಳಿಂದ ಅಪೇಕ್ಷಿತ ಪ್ರಮಾಣದಲ್ಲಿ ಜೆಲೋ ಫಲಿತಾಂಶಗಳು ಒದಗಿಬರುವುದು ಇನ್ನೂ ಬಾಕಿ ಇರುತ್ತದೆ. ನಮ್ಮ ಮದ್ರಾಸು ರಾಜ್ಯದಲ್ಲಿ ಈಗ ಆರು ಸಾವಿರ ಗ್ರಾಮಗಳು ಪಂಚಾಯತುಗಳು ಕೆಲಸ ಮಾಡುತಿದ್ದರೂ ಇನ್ನೂ ಒಂಭತ್ತು ಸಾವಿರ ಹಳ್ಳಿಗಳಲ್ಲಿ ಗ್ರಾಮ ಪಂಚಾಯತುಗಳ ಸ್ಥಾಪನೆಯೇ ಆಗಿಲ್ಲ. ಹಳ್ಳಿಯ ಜನರಿಗೆ ಗ್ರಾಮ ಪಂಚಾಯತುಗಳ ಕುರಿತು ಆಸ್ಥೆ ಹುಟ್ಟಿಲ್ಲವೋ ಅಥವಾ ಸರಕಾರದ ಕಡೆಯಿಂದ ಉತ್ತೇಜನ ದೊರೆತಿಲ್ಲವೋ—ಅಂತೂ ಹೆಚ್ಚಿನ ಹಳ್ಳಿಗಳು ತಾವೇ ರಚಿಸಿದ ಪಂಚಾಯತುಗಳ ಮೂಲಕ ಸ್ವಕೀಯ ಆಡಳಿತೆಯನ್ನು ನಡೆಸಿಕೊಳ್ಳುವ ಉತ್ತಮ ಸೌಲಭ್ಯದಿಂದ ವಂಚಿತವಾಗಿಯುತ್ತವೆ. ಇಂಥ ಹಳ್ಳಿಗಳಲ್ಲಿ ವಿಧಾಯಕ ಕಾರ್ಯಕರ್ತರು ಸ್ವಯಂಪ್ರೇರಣೆಯಿಂದ ಹಳ್ಳಿಯ ವರ್ಚಸ್ಸಿ ಜನರ ತಿಳುವಳಿಕೆಯನ್ನು ಜಾಗ್ರತ ಗೊಳಿಸಿ, ಪ್ರಜ ಪ್ರಭುತ್ವದ ಇಟ್ಟಗೆಗಳೆಂದು ಕರೆಯಲ್ಪಡುವ ಪಂಚಾಯತುಗಳ ನ್ಥಾಪನೆಗೆ ಪೂರಕವಾಗಬೇಕಾದುದು ಕರ್ತವ್ಯ ಗ್ರಾಮದ ಜನರಿರುವ ವಿದ್ಯಾವಂತರೂ ಅನುಭವಿಗಳೂ ಪಂಚಾಯತುಗಳು ಹಳ್ಳಿಯ ಏಳಿಗೆಯಲ್ಲಿ ನಿರ್ವಹಿಸುವ ಕೆಲಸಗಳ ಮಹತ್ವವನ್ನು ತಿಳಿದು ಕೊಳ್ಳುವಲ್ಲಿ ಉದಾಸೀನತೆ ವ್ಯಕ್ತವಾದರೆ, ಹಾಗೆ ಕಂಡುಕೊಂಡ ಉನಾಯ ಎಲ್ಲಿಯೋ ದೂರದ ಸರಕಾರೀ ಅಧಿಕಾರಿ ನೀಡಬಹುದಾದ ಸಲಹೆಗಿಂತ ಚೆನ್ನಾಗಿ ಬಲ್ಲದು ಊಜಿಗೆ ಪಂಚಾಯತುಗಳಿಗೆ ಜನರ ಸೌಕರ್ಯಕ್ಕೋಸ್ಕರ ತಕ್ಕ ಕೆಲಸಗಳನ್ನೆ ಕೈಗೊಳ್ಳಲು ಸಹಾಯಕವಾಗುವಂತೆ ಕೆಲವು ಅಧಿಕಾರಗಳೂ ಕೊಡಲ್ಪಟ್ಟಿವೆ ಹಳ್ಳಿಯಿಂದ ಸಮೀಪಾಗುವ ಭೂಕಂದಾಯದಲ್ಲಿ ಪಂಚಾಯತುಗಳಿಗೆ ಪಾಲು ದೊರೆಯುತ್ತದಲ್ಲದೆ, ಮಾರ್ಗಗಳ ರಚನೆ, ಪ್ರಾಥಮಿಕ ಶಿಕ್ಷಣದ ಪ್ರಚಾರ ಮುಂತಾದ ಸಂಗತಿಗಳಲ್ಲಿ ಸರಕಾರದ ಸಹಾಯವೂ ಸಿಗುತ್ತದೆ. ಮನೆ ತೆರಿಗೆ, ವೃತ್ತಿ ತೆರಿಗೆ ವಾಹನ ತೆರಿಗೆ ಮುಂತಾದ ವುಗಳನ್ನು ಹೊರಿಸುವಪಕ್ಕೂ ಪಂಚಾಯತು ಕಾಯಿದೆ ಅವಕಾಶ ಮಾಡಿಕೊಟ್ಟಿರುವುದರಿಂದ ಸುಧಾರಣೆ ಹಾಗೂ ಸೌಕರ್ಯಗಳಿಗೋಸ್ಕರ ಜನರಿಂದ ಹಣವನ್ನು ಸಂಗ್ರಹಿಸಿ, ಅವುಗಳ ಪದುಪಯೋಗ ಮಾಡಲು ಅವಕಾಶ ದೊರೆತಿರುತ್ತದೆ. ಈ ತೆರಿಗೆಗಳ ವಸೂಲಿಯಲ್ಲಾಗಲೀ ಲೈಸನ್ಸು ಮುಂತಾದವುಗಳನ್ನು ನೀಡುವಲ್ಲಾಗಲೀ ಪಂಚಾಯತುದಾರರು ಪಕ್ಷಪಾತವಾಗಿಯೂ ನ್ಯಾಯ ನಿಷ್ಠೆಯಿಂದಲೂ ವರ್ತಿಸಿದರೆ, ಜನಾಪತ್ಯವಾದ ಹಾಗೂ ಇತರ ರೀತಿಯ ಭಯಗಳಿಗೆ ಎಡೆ ಇರುವುದಿಲ್ಲ.

ಸರಕಾರದ ಕಡೆಯಿಂದ ಕಾನೂನಿನ ಬಲದಿಂದ ದೊರೆತ ತೆರಿಗೆ ಹೊರಿಸುವ ಅಧಿಕಾರವನ್ನು ಚಲಾಯಿಸಿ ವುದಿಲ್ಲದೆ ಚೆನ್ನಾಗಿ ಗ್ರಾಮ ಪಂಚಾಯತುಗಳು ಉದಾಸೀನವಾಗಿರುತ್ತವೆಂದೂ—ಇಂಥ ಉದಾಸೀನತೆಯಿಂದಿದ್ದರೆ, ಹಳ್ಳಿಗರು ಅಪೇಕ್ಷಿಸುವ ಸೌಕರ್ಯ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗದೆ, ಪಂಚಾಯತುಗಳ ಸ್ಥಾಪನೆಯು ಉದ್ದೇಶ ಸಫಲವಾದೀತೆಂದೂ ಮುಖ್ಯ ಮಂತ್ರಿ ರಾಜಾಜಿಯವರು ತಾವಲರು ಹೇಳುತ್ತಾರೆ. ಜನರಿಗೆ ಸುಖ ಹಾಗು ಸೌಕರ್ಯಗಳು ಬೇಕೆಂಬುದರಿಂದ ಅವುಗಳನ್ನು ಒದಗಿಸಲು ಇಂಥ ಸ್ಥಳೀಯ ಸಂಸ್ಥೆಗಳ ಸ್ಥಾಪನೆಯಾಯಿತು—ವ್ಯಕ್ತಿಗತ ಭೇದವಿಲ್ಲದೇ ಒಟ್ಟು ಹಳ್ಳಿಯ ಹಿತದೃಷ್ಟಿಯೇ ಇಲ್ಲಿ ಪ್ರಧಾನವಾಗಿರುವುದರಿಂದ, ಕೆಲವರು ತಮಗೆ ವ್ಯಕ್ತಿಗತ ಲಾಭ ತರುವ ಸುಧಾರಣೋದ್ದೇಶಗಳಿಗೆ ತೆರಿಗೆ ಸಲ್ಲಿಸುವ ವರೆಗೂ ಸಾಲಕ ನೆರವಾಗಲು ಇಷ್ಟಪಡಲಿಕ್ಕಿಲ್ಲ. ಅಂಥವರು ತಮ್ಮ ತಪ್ಪನ್ನು ತಿದ್ದಿ ಕೊಳ್ಳಬೇಕು. ಕೊಡ ತೆರಿಗೆಗಳು ದೇರ ಬೇಕಾಗಿ ಬಂದ ಸಂದರ್ಭ ಮತ್ತು ವಾತಾವರಣವನ್ನು ಹಳ್ಳಿಯ ಪ್ರಜೆಗಳು

(ಉಳಿದ ಪುಟ ನೋಡಿರಿ.)

[ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ನೂತನ ವರ್ಷದ ಶುಭಾಶಯಗಳು!

ನಾವು ನಮ್ಮ ಸಕಲ ಆಶ್ರಯದಾತರಿಗೆ, ಮಿತ್ರರಿಗೆ ಮತ್ತು ಗ್ರಾಹಕರಿಗೆ ಅವರು ನಮಗಿತ್ತ ಸರ್ವ ಪ್ರೋತ್ಸಾಹ ಸಹಕಾರಗಳಿಗಾಗಿ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅಲ್ಲದೆ ಮುಂಬೆಯೂ ಅವರ ನಿರಂತರ ಆಶ್ರಯಕ್ಕೆ ನಾವು ಸರ್ವ ವಿಧದಲ್ಲೂ ಪಾತ್ರರಾಗುವಂತೆ ಪ್ರಯತ್ನಿಸುವೆವೆಂಬ ಭರವಸೆಯನ್ನೀಯುವೆವು. ಅವರೆಲ್ಲರಿಗೂ ನೂತನ ವರ್ಷವು ಹರ್ಷ ಮತ್ತು ಪ್ರಗತಿದಾಯಕವಾಗಲಿ ಎಂಬ ನಮ್ಮ ಸೌಹಾರ್ದಪೂರ್ಣ ಹಾರೈಕೆಯನ್ನಿತ್ತೇವೆ.

The Canara Industrial & Banking Syndicate LTD.,

Estd: 1925] [Head Office: UDIPI, S. India.

ಕನ್ನಡ ಪ್ರಾಂತ ನಿರ್ಮಾಣದ ಕುರಿತು ಒತ್ತಾಯ

ಕುಮಟೆಯಲ್ಲಿ ಮೂವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಕುಮಟೆಯ ಅತ್ಯುನ್ನತ ಪ್ರದೇಶದಲ್ಲಿರುವ ಗಿಬ್ ಹೈಸ್ಕೂಲಿನ ಆವರಣದಲ್ಲಿ ರಚಿಸಲ್ಪಟ್ಟ ಭವ್ಯವಾದ ಶ್ರೀನಿವಾಸ ನಗರವೆಂಬ ಮಂಟಪದಲ್ಲಿ ಮೂವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನವು ದಶಂಬರದ ೨೬, ೨೭ ಮತ್ತು ೨೮ನೇ ದಿನಾಂಕಗಳಲ್ಲಿ ಯಶಸ್ವಿಯಾಗಿ ನಡೆಯಿತು. ಸಾಹಿತ್ಯ ಸಮ್ಮೇಳನ ಮತ್ತು ತದಂಗವಾಗಿ ನಡೆದ ಪತ್ರಿಕಾ ಗೋಷ್ಠಿ, ಯಕ್ಷಗಾನಾಟಕ ಗೋಷ್ಠಿ ಹಾಗೂ ವಿಜ್ಞಾನ ಗೋಷ್ಠಿಗಳ ನಿಯೋಜಿತಾಧ್ಯಕ್ಷರನ್ನು ಮೊನ್ನೆ ಮಂತ್ರಿಗಳಾದ ಶ್ರೀ ದ. ಪ. ಕರಮರಕರ ಹಾಗೂ ಜತ್ತಿ ಅವರೊಡನೆ ಸಂಭ್ರಮದ ಮೆರವಣಿಗೆಯಲ್ಲಿ ಕರೆದು ತಂದು, ವಿಶೇಷವರ ಹಸ್ತದಿಂದ ಧ್ವಜಾರೋಹಣ ಮಾಡಿಸುವಲ್ಲಿಂದ ಕಾರ್ಯಕ್ರಮವು ಪ್ರಾರಂಭವಾಯಿತು.

ಉತ್ತರ ಕನ್ನಡದ ವೈಶಿಷ್ಟ್ಯ

ಸ್ವಾಗತಾಧ್ಯಕ್ಷರಾದ ಶ್ರೀ ಭಾವಾಸಿ ಶಂಕರ ಮಾವಿನ ಕುರ್ವೆಯನರು ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳನ್ನು ಸ್ವಾಗತಿಸುತ್ತ "ನಮ್ಮ ಜಿಲ್ಲೆಯ ಅಪ್ಪಿತೀಯನಾದ ವಿಶೇಷವೆಂದರೆ, ನಮ್ಮ ಜನ ಮೊದಲಿಂದಲೂ ತೋರಿಸುತ್ತಾ ಬಂದ ಎರಡು ವೃತ್ತಿಗಳು—ಒಂದು, ಜನ್ಮಾನ ಜನ್ಮನೆಯ, ವಿದ್ಯಾಭಿರುಚಿಯ ಮನೋವೃತ್ತಿ; ಇನ್ನೊಂದು, ಭಾಷಾ ಭೇದಕ್ಕಾಗಿ ಬಡಿದಾಡದೆ, ಭಿನ್ನ ಭಾಷೆಗಳನ್ನು ಸಮದೃಷ್ಟಿಯಿಂದ, ಸ್ನೇಹ ದೃಷ್ಟಿಯಿಂದ ನೋಡಿ ನಡೆಸಿಕೊಂಡುಬಂದ ಪರಮತ ಸಹಿಷ್ಣುತಾ ವೃತ್ತಿ' ಎಂಬುದಾಗಿ ಉತ್ತರಕನ್ನಡ ಜಿಲ್ಲೆಯ ವೈಶಿಷ್ಟ್ಯವನ್ನು ಆನರು ಬಣ್ಣಿಸಿದರು. ಮುಂದುವರಿದು ಆನರು ಹೀಗೆಂದರು—"ನಮ್ಮ ಜಿಲ್ಲೆಯಲ್ಲಿ ಆದಿಕವಿ ಪಂಪನು ಮೆಚ್ಚಿದ ಬನವಾಸಿ ಇದೆ. ಕವೀಂದ್ರ ರವೀಂದ್ರರು ಕಂಡು ಮುಗ್ಧರಾದ ಕಾರವಾರದ ಅಶ್ರಿತಮ ಕದಲತೀರವಿದೆ. ಧಾನಣನೇ ಮೋಹಿತನಾದ ಶ್ರೀ ಗೋಕರ್ಣನ ಸಿದ್ಧ ಕ್ಷೇತ್ರವಿದೆ. ಜಗತ್ತಿಗೆ ಅದ್ಭುತ ರಸವನ್ನುಣಿಸಿ, ಬೆರಗುಗೊಳಿಸಿ, ಮರುಳು ಮಾತುವ ಜೋಗದ ಜಲಪಾತವಿದೆ, ಯಲ್ಲಾಪುರ, ಶಿಸಿ, ಸಿದ್ದಾಪುರಗಳ ಸಮೃದ್ಧವಾದ ಏಲಕ್ಕಿ ಅಡಿಕೆ, ಮೆಣಸಿನಕಾಳುಗಳ ತೋಟಗಳವೆ. ೧೫ ೧೬ನೇ ಶತಮಾನಗಳಲ್ಲಿ ಕಟ್ಟಿ ಕೆತ್ತಿ ನಿರ್ಮಿಸಿದ ಭಟ್ಕಳದ ಲಾವಣ್ಯ ಮಂದಿರಗಳಾದ ೧೫ ವೇಣ ಬಸದಿಗಳು ಇವೆ. ಈ ಕುಮಟೆಯ ನಗರವು ಅರ್ಧ ಶತಮಾನದ ಹಿಂದೆ ಕರ್ನಾಟಕದ ಅರತೆಯ ಮುಖ್ಯ ನಿರ್ಯಾತ ಕೇಂದ್ರವಾಗಿದ್ದು ಕುಮಟಾ ಕಾಟನ್ ಎಂಬ ಹೆಸರಿನಲ್ಲಿ ಇಂದು ಆದರ ಗತವೈಭವ ಉಳಿದಿದೆ ಇವೆಲ್ಲವುಗಳ ಹಿನ್ನೆಲೆಯಲ್ಲಿ ಈ ಜಿಲ್ಲೆಯ ದೀನದಲಿತ ಜೀವನದ ಘೋರ ಚಿತ್ರವೂ ಅಪಾರವಾದ ಕರುಣೆಯು ಕೋಡಿಯೂ ಕಂಡುಬರುತ್ತದೆ. ವಿಚಿತ್ರದ ಮಾತೆಂದರೆ ಜಿಲ್ಲೆಯ ದಾರುಣ ದಾರಿದ್ರ್ಯಕ್ಕೆ ಇವರ ನಿಸರ್ಗ ಸೌಂದರ್ಯವೇ ಕಾರಣ—ಮುಂಬಯಿ ರಾಜ್ಯದಲ್ಲಿ ನಮ್ಮ ಜಿಲ್ಲೆ ಆರಣ್ಯ ಸಂಪತ್ತಿಗೆ ಹೆಸರಾಗಿದ್ದು, ೧೦೦ಕ್ಕೆ ೮೫ ವಾಲಿನಷ್ಟು ಕ್ಷೇತ್ರ ಕಾಡಿನಿಂದ ತುಂಬಿದೆ ಉಳಿದಿಗ್ಗೆ ಪಾಲು ನೆಲದಲ್ಲಿ ಬಾಳಿದೇಕಾಗಿರುವ ಜಿಲ್ಲೆಯ ಜನತೆಯು ಅವಸ್ಥೆ ಅತ್ತಕಾಡು. ಇತ್ತ ಕಡಲು; ಬದುಕಲು ಬಲವಿಲ್ಲ, ಸಾಯಲು 'ಬರುವಂತಿಲ್ಲ—ಎಂಬ ರೀತಿಯಿದೆ"

ಕರಮರಕರ ಶುಭಾಶಂಸೆ

ಭಾರತ ಸರಕಾರದ ವಾಣಿಜ್ಯ ಮಂತ್ರಿ ಶ್ರೀ ದ ಪ ಕರಮರಕರರು ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ "ಮುಂದಿನ ಸಮ್ಮೇಳನವು ಅಖಂಡ ಕರ್ನಾಟಕದ ರಾಜಧಾನಿಯಲ್ಲಿ ಜರಗುವಂತಾಗಲಿ?' ಎಂದುಹಾರೈಸುವುದರ ಮೂಲಕ ಇನ್ನು ಒಂದು ಒಂದೂವರೆ ವರ್ಷದವಧಿಯಲ್ಲಿಯೇ ಕನ್ನಡ ರಾಜ್ಯ ನಿರ್ಮಾಣ ವಾಗುವುದೆಂಬ ಸಂಗತಿಯನ್ನು ಧ್ವನಿಸಿದರು. ಆವರ ಭಾಷಣದ ಮುಖ್ಯಾಂಶ ಹೀಗಿದೆ —" ಉತ್ತರ ಕನ್ನಡಜಿಲ್ಲೆ ನಿಸರ್ಗ ದೇವತೆಯ ಆಟದ ಮನೆ ಇಲ್ಲಿ ಒಮ್ಮೆ ಬಂದು ಹೋದವರೆಲ್ಲರೂ ನೆನೆವುದೆನ್ನ ಮನಂ ಬನವಾಸಿ ದೇಶಮಂ ಎಂದುಕೀಳಿಗೆ ಆದಿಕವಿ ಪಂಪನ ಮಾತು ಎಷ್ಟು ಸಾರ್ಥಕವಾದ ದೆಂದು ನೆನೆದೇ ನೆನೆಯುವರು. ಇತ್ತೀಚಿನ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲೂ ಈ ಜಿಲ್ಲೆ ತನ್ನ ಪರಾಕ್ರಮದಿಂದ ಭಾರತದ ಕೀರ್ತಿ ನುಂದಿರದಲ್ಲಿ ಸ್ಥಿರವಾದ ಸ್ಥಾನಪಡೆದಿದೆ. ಕರ್ನಾಟಕದ ಸಂಕ್ರಮಣಾವಸ್ಥೆಯ ಈಗಿನ ಆಯಕಟ್ಟಿನ ಸಮಯದಲ್ಲಿ ಇಲ್ಲಿ ಸಮ್ಮೇಲನ ಜರಗುವುದು ಅತ್ಯಂತ ಸಮಂಜಸವಾದುದು. ನಾವೀಗ ಅನೇಕ ಶತಮಾನಗಳಿಂದಹರಿದು ಹೋದ ಕನ್ನಡ ನಾಡು ಪುನಃ ಒಟ್ಟಾಗುವ ಪರ್ವ ಕಾಲದಲ್ಲಿದ್ದೇವೆ. ಹಾಗಿರುವುದರಿಂದ ಸಾಹಿತ್ಯದ ಬೆಳವಣಿಗೆಯ ಕಾರ್ಯವನ್ನು ಹುಮ್ಮಸ್ಸಿನಿಂದ ನಾವು ಮಾಡಬೇಕು ಹಿರಿಯ ಸಂಸ್ಥೆಗಳು ಇದು ನರೆಗೆ ಈ ದಿಸೆಯಲ್ಲಿ ಮಾಡಿದ ಸೇವೆ ಅನೋಘವಾದದ್ದು. ನಮ್ಮ ಸಾಹಿತ್ಯಕ್ಕೆ ಪರಿಪೂರ್ಣತೆಯನ್ನು ತಂದುಕೊಡುವ ನಿಶ್ಚಿತ ಯೋಜನೆಯನ್ನು ಪರಿಷತ್ತಿನ ನೇತೃತ್ವದಲ್ಲಿ ನಾವು ಕೈಗೊಂಡು ಜಗತ್ತಿನಲ್ಲಿಯ ಅನ್ಯ ಭಾಷೆಗಳ ಉತ್ತಮೋತ್ತಮ ಕೃತಿಗಳು ಕನ್ನಡದಲ್ಲಿಯೂ ಅಸಲುಬದ್ಧವಿರುವಂತೆ ಪ್ರಯತ್ನಿಸುವುದವಶ್ಯ. ಪ್ರತಿಯೊಂದು ಮನೆಯನ್ನೂ ವಿದ್ಯಾಪೀಠವನ್ನಾಗಿ ಮಾಡುವ ಶಕ್ತಿ ಕನ್ನಡ ಸಾಹಿತ್ಯದಲ್ಲಿ ತುಂಬಿ ಒರಬೇಕು. ಇಂಥ ಉಜ್ವಲ ಸಾಹಿತ್ಯದ ನಿರ್ಮಾಣ ಮಾಡುವುದಲ್ಲದೆ, ಇತ್ತೀಚೆಗೆ ಅಲ್ಲಲ್ಲಿ ಬೆಳೆಯಲು ಪಡಣಿಸುವ ಜನಾಂಗದ ವಿಚಾರವನ್ನು ಹೀನ ದೆಸೆಗೆ ಕೊಂಡೊಯ್ಯುವ ಭಂಡ ಕೃತಿಗಳ ಖಂಡನೆಯಾಗಬೇಕು. ಈ ಮಹಾ ಪ್ರಯತ್ನದಲ್ಲಿ ಸರಕಾರವೂ ಜನತೆಯೂ ಪರಸ್ಪರ ಸಹಕರಿಸಬೇಕು."

ಪರಿಷತ್ತಿನ ಉದ್ದೇಶ

ಶ್ರೀಮಾನ್ ವಿ.ಸೀತಾರಾಮಯ್ಯನವರು ಅಧ್ಯಕ್ಷ ವೇದಿಕೆಯಿಂದ ಎದ್ದು— ತಮ್ಮ ಮುದ್ರಿತ ಭಾಷಣದ ಪ್ರತಿಯನ್ನು ನೋಡದೆನೇ ಸ್ಫೂರ್ತಿಯಿಂದ ಮಾತನಾಡಿದರು ಅವರು ಮುಖ್ಯವಾಗಿ ಕರ್ನಾಟಕ ಏಕೀಕರಣದ ವಿಷಯವನ್ನು ಪ್ರಸ್ತಾಪಿಸಿ, ಭಾವಾ ರಾಜ್ಯಗಳ ನಿರ್ಮಾಣದ ವಿರೋಧಕರನ್ನು ಖಂಡಿಸಿ "ಕರ್ನಾಟಕ ಪ್ರದೇಶಗಳೆಲ್ಲ ಒಟ್ಟುಗೂಡಲೇ ಬೇಕಾದ ಪ್ರಸಂಗ ಬಂದೇ ಬರುತ್ತದೆ. ಇದಕ್ಕೋಸ್ಕರ ಒಂದು ವರ್ಷವಾದರೂ ತಡೆಯೋಣ" ಎಂದು ಹೇಳಿದರು ಅವರ ಭಾಷಣದ ಸಾರಾಂಶ ವಿದು—"ಸಹ್ಯಾದ್ರಿಯ ಬೆಟ್ಟದ ಸಾಲು ಕಡಲಿಗೆ ಕಾಲುಚಾಚಿ ಕುಳಿತ ಈ ಸಮ್ಮೇಳನ ಸ್ಥಾನ ಪ್ರಕೃತಿಯ ಎರಡು ಮಹಾ ಶಕ್ತಿಗಳ ಸಂಗಮಸ್ಥಳ. ಒಂದು ಸ್ವಾತಂತ್ರ್ಯದ್ದು, ಇನ್ನೊಂದು ನಿಯಮದ್ದು. ಒಂದರದು ಅಳ, ವಿಸ್ತಾರ; ಇನ್ನೊಂದರದು ಸ್ಥೈರ್ಯ, ಉನ್ನತಿ. ಈ ಲಕ್ಷಣಗಳೇ ಸಮಸ್ತ ಮಾನವ ಸಾಧನೆಗಳಿಗೂ ಒರೆಯಿಡುವ ಬೆಲೆಗಳು. ಎಲ್ಲದರ ಜೀವಗುಣ ಸ್ವಾತಂತ್ರ್ಯ. ಅದನ್ನು ಹಿತ ಮಿತದಲ್ಲಿ ಹಿಡಿದು ನಿಲ್ಲಿಸುವುದು, ನಿಲ್ಲಿಸಬೇಕಾಗಿರುವುದು ನಿಯಮ; ತಮ್ಮಮೇಲೆ ತಾವು ಹಾಕಿಕೊಂಡದ್ದು. ಸ್ವಾತಂತ್ರ್ಯದ—ಆಳ ವಿಸ್ತಾರ, ನಿರಂತರ ನವ್ಯತೆ ನುಗ್ಗು—ಇವು ಜೀವದ ಪ್ರಧಾನ ಲಕ್ಷಣಗಳು. ಬದುಕಿರುವವರ ಒಂದೇ ಗುರುತು ಅದು. ಅದಿಲ್ಲದ ಯಾವ ನಿಯಮವನಿಸ್ಮೈಯೂ ವಂಧ್ಯವಾಗುವುದು. ಆದರೆ ಉಳಿದ ಎಲ್ಲವನ್ನೂ ಸ್ವಾತಂತ್ರ್ಯ ಕಬಳಿಸುವಂತಾದರೆ ಜೀವ ದೊಡ್ಡದಾಗದೆಂಬಂತೆ ಸಾಮಾಜಿಕನಾಗಿ ಬದುಕಬೇಕಾಗಿರುವ ಮನುಷ್ಯನ ನಿಯಮನಕ್ಕಾಗಿ ಒಂದುಕಡೆ ಸ್ಥೈರ್ಯ, ಇನ್ನೊಂದುಕಡೆ ಉನ್ನತಿಯ ಸಂಕೇತಗಳು ನಿಲ್ಲುವುದೂ ಅಗತ್ಯ ಆವೆರಡೂ ಸೋದರ ಧರ್ಮಗಳಾಗಿ ಒಂದರ ಜೊತೆಗೊಂದು ನಿಂತಿರುವುದು ನಿಮ್ಮ ಈ ಜಿಲ್ಲೆಯ ಮತ್ತು ನಮ್ಮ ಕನ್ನಡನಾಡಿನ ಪುಣ್ಯ.

[೧೧ನೇ ಪುಟ ನೋಡಿರಿ]

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 445/1953.

K. P. ಪೂಡವಿ — — ವಾದಿ.

ಮತ್ತು

ಚೋಮು ಹೆಂಗ್ಸು ಸತೂ—ಪ್ರತಿವಾದಿರು ಯಿಸರೊಳಗೆ

ತಾರೀಕು 23—12—53.

To

D 1. ಚೋಮು ಹೆಂಗ್ಸು, M. ಆನಂದ ಮೇಸ್ತ್ರಿಗಳ ವಿಧವೆ.

D 2. K. P. ರಾಮ ಪ್ರಸಾದ, M. ಆನಂದ ಮೇಸ್ತ್ರಿಗಳ ಮತ್ತು ಚೋಮು ಹೆಂಗ್ಸಿನ ಮಗ. ಕಾಸರಗೋಡು ಕ್ಷಬಾ ಗ್ರಾಮದ ನೆಲ್ಲಿಕುಂಜೆಯಲ್ಲಿರುವವರು.

ದಾವಾ ಮನೆ ಸ್ವಾದೀನತೆಗೂ ಪುಟ್ಟುನ ಕೈಗೂ ವಾದಿಯು ಡಾಕ್ಲು ಮಾಡಿದ ಮೇಲ್ಕಂಡ ಎ್ಯಾಜ್ಜನನ್ನು ತಾ. 20—1—೫೪ಕ್ಕೆ 1 ಮತ್ತು 2ನೇ ಪ್ರತಿವಾದಿರ ಕೈಪೆತ್ತು ನೋಟ್ಸಿನ ಬಗ್ಗೆ ಯಿಟ್ಟಿರುವುದ್ರಿಂದ ಆ ದಿನ್ನ ಸದ್ರಿ ಪ್ರತಿವಾದಿರು ಕೋರ್ಟು ಮುಂದೆ ಹಾಜ್ರಾಗುವರೆ ಹಪ್ಪಿದರೆ ಅವರನ್ನು ಎಕ್ಸ್ ಪಾರ್ಟಿಮಾಡಿ ಸಂಬ್ರ ತನ್ನಿಯಿಂದ ತೀರ್ಮಾನಿಸಲಾಗುವುದೆಂಬ ಸಂಗ್ತಿ ಈ ಸೂಲ್ಯ ತಿಳಿಸೋಣಾಗಿಯಿದೆ.

(Sd) B. S. Kakkilaya

Advocate for plff.

Kasaragod: Date 23—12—53.

THE

Canara Mutual Assurance Co., Ltd.

Head Office: **UDIPI**, S. INDIA.

ಶುಭಾಶಯಗಳು!

ನಾವು ನಮ್ಮೆಲ್ಲ ಏಮಾದಾರರನ್ನೂ ಪ್ರೋತ್ಸಾಹಕರನ್ನೂ ಆವರ ನಿರಂತರವಾದ ಬೆಂಬಲಕ್ಕಾಗಿ ಆಭಿನಂದಿಸುತ್ತೇವೆ. ಆಲ್ಲದೆ, ಆವರ ಪ್ರೋತ್ಸಾಹಕ್ಕೆ ಪ್ರತಿಯೊಂದೂ ರೀತಿಯಲ್ಲಿ ಆರ್ಹರಾಗಿರುವಂತೆ ಮುಂದಕ್ಕೂ ಪ್ರಯತ್ನಿಸುವೆವೆಂದು ಭರವಸೆಯನ್ನು ನೀಡುತ್ತೇವೆ. ನೂತನ ವರ್ಷವು ಸಕಲರಿಗೂ ಸುಖ ಸಂತೋಷ ಹಾಗೂ ಸಮೃದ್ಧಿಯನ್ನು ತರಲೆಂಬುದೇ ನಮ್ಮ ಹಾರೈಕೆ!

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

R.E.P. 216 53 O. S. 116.52.

ಸೋಮು ಹೆಂಗ್ಸು —ಅರ್ಜಿದಾರಳು.

ಅಂಗರ ಯಾನೆ ರಾಮಯ್ಯ ಗೌಡ ಕೂಡಾ —ಎದ್ರಿರು.

1ನೇ ಎದ್ರಿ ಅಂಗರ ಯಾನೆ ರಾಮಯ್ಯ ಗೌಡ, ಸುಬ್ಬಸ್ಸು ಗೌಡರ ಮಗ, ಪುತ್ತೂರು ತಾಲೂಕು ಕೊಲ್ಲಾ ಗ್ರಾಮದ ಬುಡಲೂರು. ಇವರಿಗೆ ತಿಳಿಸುವುದೇನೆಂದರೆ:—

ನಮ್ಮ ಜಾಬ್ತು ಕೆಳಗೆ ಕಾಣ್ಪಿದ ಸ್ಥಿರಾಸ್ತಿಯನ್ನು ಏಲಂ ಪಡಿಸಬೇಕೆಂತ ಅರ್ಜಿದಾರಳು ಡ್ಯಾಕ್ಲು ಮಾಡಿದ ಈ ಆನುಲ್ಲಾರಿಯು ತಾ. 15-1-1954ಕ್ಕೆ ಇಟ್ಟರುವುದರಿಂದ ನಿಮ್ಮೆನೇನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ ಉದಯರಶಿ ಕೊಳ್ಳೆ ತಕ್ಕದ್ದು. ಎಂತ ಈ ಮೂಲಕ ತಿಳ್ಪಿದೆ.

ಆಸ್ತಿಯ ವಿವರ

ಪ. ಕ. ಪುತ್ತೂರು ಸ. ಡಿ. ಗೆ ಸೇರಿದ ಕೊಳ್ಳಾ ಗ್ರಾಮದ:—

ಸ. ನಂ. ಸ. ಡಿ. ನಿ. ಕೆಸಂ. ವಿಸ್ತೀರ್ಣ. ತೀರ್ವೆ.

66 5ಪೈಕಿ ಮೂರು ಬಿಕ್ಕಿಯಲ್ಲಿ } ನಂಜ. 1-25. 6-8-0

65 2ಪೈಕಿ ಪಡುಬಿಕ್ಕಿಯಲ್ಲಿ } ಪುಂಜ. 1-10. 0-8-0

ಈ ಆಸ್ತಿ ಸರ್ವಾಧಿ:—

B. Chidananda Rao.

Vakil for Petitioner.

ಪುತ್ತೂರು, 30—12—53.

ಸುಂದರವಾದ ಮಂಗಳೂರು ಹಂಚುಗಳು

ಪಶ್ಚಿಮ ಸಮುದ್ರತೀರದ ಪ್ರಮುಖ ಉದ್ಯಮ

ದ್ವಿತೀಯ ಮಹಾ ಯುದ್ಧದಲ್ಲಿ ಜಪಾನು ಧುಮುಕಿದ ಗಳಿಗೆಯಿಂದ ನಮ್ಮ ಪಶ್ಚಿಮ ಕರಾವಳಿಯಲ್ಲಿ ಹೊಯ್ದಾಡುತಿದ್ದ ಹಂಚಿನ ಕೈಗಾರಿಕೆ ಸ್ಥಿರವಾದ ನೆಲ ಗಟ್ಟನಲ್ಲಿ ನಿಲ್ಲುವುದು ಸಾಧ್ಯವಾಯಿತು. ಈ ಕೈಗಾರಿಕೆ ಇಂದಿನ ಉತ್ಕರ್ಷ ಸ್ಥಿತಿಯಲ್ಲಿರುವುದಕ್ಕೆ ಯುದ್ಧ ಕಾಲದಲ್ಲಿ ಹೆಂಚಿನ ಮಹತ್ವವು ತಿಳಿದು ಬಂದು ಅದರ ಆವಶ್ಯಕತೆ ಹೆಚ್ಚಿಕೊಂಡುದೇ ಕಾರಣ. ಯುದ್ಧ ಕಾಲದಲ್ಲಿ ಸಂರಕ್ಷಣಾಪ್ರಯೋಗಗಳನ್ನು ರಚಿಸಲು, ಸೈನಿಕ ಠಾಣ್ಯಗಳನ್ನು ಕಟ್ಟಲು ಲಕ್ಷಾಂತರ ಹಂಚುಗಳು ಬೇಕಾದವು. ದೇಶ ವಿದೇಶಗಳಗೂ ಇವುಗಳು ನಿರ್ಯಾತಗೊಂಡವು. ಯುದ್ಧ ಮುಗಿದ ಮೇಲೆ ಕೂಡ ಹಂಚುಗಳಿಗೆ ಬೇಡಿಕೆ ಕಡಮೆಯಾಗಲಿಲ್ಲ. ಯುದ್ಧ ಕಾಲದಲ್ಲಿ ಕೈಯಲ್ಲಿ ನಾಲ್ಕು ಕಾಸು ಮಾಡಿಕೊಂಡ ಎಲ್ಲರೂ ಸ್ವಂತ ಮನೆಗಳನ್ನು ಕಟ್ಟಿಸಿಕೊಳ್ಳಲು ಹವಣಿಸಿದರು. ಹೀಗಾಗಿ ಹಂಚುಗಳನ್ನು ತಯಾರಿಸುವ ಕೈಗಾರಿಕೆ ಉಚ್ಛ್ರಾಯಾವಸ್ಥೆಯಲ್ಲಿದೆ.

ಸ್ವಾರಂಭಿಕ ಪ್ರಯತ್ನ

ಹಂಚಿನ ಕೈಗಾರಿಕೆಯು ಕೇವಲ ನೂರು ವರ್ಷಗಳ ಹಿಂದೆ ಹುಟ್ಟಿಕೊಂಡು, ಬೆಳೆಯಿತೆಂದರೂ ಸಲ್ಲುತ್ತದೆ. ಫ್ರೆಂಚ್ ಮಾದರಿಯ ಈಗಿನ ಹಂಚುಗಳ ನಿರ್ಮಾಣ ಹೊಸ ಸಂಶೋಧನೆ—ಮತ್ತು ಇದರ ಎಲ್ಲ ಶ್ರೇಯಸ್ಸೂ ಮಂಗಳೂರಿಗೆ ಮತ ಪ್ರಚಾರದ ಉದ್ದೇಶದಿಂದ ಬಂದು ನೆಲಸಿದ ಜರ್ಮನ್ ಮಿಶನರಿಗಳಿಗೆ ಸೇರಿದೆ. ಮತಾಂತರಗೊಳಿಸಲ್ಪಟ್ಟ ಜನರಿಗೆ ಹೊಟ್ಟೆ ಬಟ್ಟೆಗೆ ಅನುಕೂಲವಾಗಿರಲೆಂದು ಉದ್ಯೋಗವನ್ನು ಕೊಡಲು ನೇಯಿಗೆ ಕಾರ್ಖಾನೆ, ಶಾಲೆಗಳು, ಮುದ್ರಣಾಲಯಗಳು ಮುಂತಾದವನ್ನು ಮಿಶನರಿಗಳು ಸ್ಥಾಪಿಸಿದರು ಬಲ್ಮಠದ ಸಮೀಪದಲ್ಲಿಯೇ ಹರಿಯುವ ನೇತ್ರಾವತೀ ನದಿಯದಂಡೆಯಲ್ಲಿ ಉತ್ತಮಜರ್ಜಿಯ ಕೊಜೆಮಣ್ಣು ಇರುವುದನ್ನು ಕಂಡ ಮಿಶನರಿಗಳಿಗೆ, ಹೊಸತೊಂದು ಕೈಗಾರಿಕೆಯನ್ನು ಸ್ಥಾಪಿಸುವ ವ್ಯಾಮೋಹ ಹುಟ್ಟಿಕೊಂಡುದು ಆಶ್ಚರ್ಯವಲ್ಲ. ಅಂದಿನವರೆಗೆ ಸಣ್ಣ ಪ್ರಮಾಣದಲ್ಲಿ ಯಾವ ತರದ ವಿಶೇಷ ಸಾಧನ ಸಲಕರಣೆಗಳೂ ಇಲ್ಲದೆ ದೇಶೀಯರು ಹೆತ್ತ ಕೌಶಲ್ಯದಿಂದಲೇ ತಯಾರಿಸುತಿದ್ದ ಒರಟು ಹಂಚುಗಳ ಬದಲು ನಯ ನಾಜೂಕಾಗಳನ್ನೊಳಗೊಂಡ ತೆಳುವಾದ ಹಂಚುಗಳನ್ನು ತಯಾರಿಸಲು ಮಿಶನರಿಗಳು ಪ್ರಯತ್ನಿಸಿದರು ಒಬ್ಬ ಜರ್ಮನ ಮಿಶನರಿ ಸ್ಪೆಚಿಸ್ಟ್ ಫ್ರೆಂಚ್ ಮಾದರಿಯ ಹಂಚುಗಳನ್ನು ತಯಾರಿಸಬೇಕೆಂಬ ಕುತೂಹಲಕ್ಕೆ ಬಿದ್ದು ಈ ದಿಸೆಯಲ್ಲಿ ಮೊದಲ ಪ್ರಯತ್ನವನ್ನು ಮಾಡಿದನು ಆದರೆ ದುರ್ದೈವದಿಂದ ಅವನ ಆರೋಗ್ಯವು ಕೆಟ್ಟುದರಿಂದ ತನ್ನ ಪ್ರಯತ್ನವನ್ನು ಬಿಟ್ಟುಗೊಟ್ಟು ಯುರೋಪಿಗೆ ಅವನು ಮರಳಬೇಕಾಯಿತು. ಸ್ವದೇಶಕ್ಕೆ ಹಿಂತಿರುಗಿದ ಬಳಿಕವೂ ತನ್ನ ಪ್ರಯತ್ನವನ್ನು ಅವನು ನಿಲ್ಲಿಸದೆ, ಅಲ್ಸೇಸ್ ಲೊರೇನದಲ್ಲಿ ಅವನು ಈ ವಿಷಯದಲ್ಲಿ ಹೆಚ್ಚಿನ ಸಾಹಿತಿಗಳನ್ನು ಸಂಗ್ರಹಿಸಿದನು.

ದೇಶೀಯರ ಸಾಹಸ

ಮುಂದೆ ೧೮೮೩ರಲ್ಲಿ ಅವನು ಮತ್ತೆ ಮಂಗಳೂರಿಗೆ ಬಂದಾಗ, ತನ್ನೊಡನೆ ಆವಶ್ಯಕ ಯಂತ್ರ ಸಲಕರಣೆಗಳನ್ನು ತಂದು ಒಂದು ಕಾರ್ಖಾನೆಯನ್ನು ತೆರೆದನು. ಆ ವರ್ಷಗಳ ಪೂರ್ವದಲ್ಲಿ ಸ್ಥಾಪಿಸಲ್ಪಟ್ಟ ಈ ಕಾರ್ಖಾನೆ ಇಂದು ದಕ್ಷಿಣಕರಾವಳಿಯಲ್ಲಿಯೇ ಅತ್ಯಂತ ದೊಡ್ಡ ಹಂಚು ಕೈಗಾರಿಕೆಯ ಸ್ಥಾನವಾಗಿ ಉತ್ಕರ್ಷ ಹೊಂದಿದೆ. ಇಲ್ಲಿ ಹಣವನ್ನೂ ಸಮಯವನ್ನೂ ಉಳಿಸಿ, ಹಂಚುಗಳ ಗುಣವನ್ನು ಹೆಚ್ಚಿಸಲು ನೆರವಾಗುವ ಎಲ್ಲ ಬಗೆಯ ಆಧುನಿಕ ಯಂತ್ರ ಸಾಮಗ್ರಿಗಳು ಇವೆ. ಕಾಸನನೆಲ್ಲ ಟ್ರಸ್ಟಿದವರಿಂದ ನಡೆಸಲ್ಪಡುವ ಈ ಕಾರ್ಖಾನೆಯು ಮಾದರಿಯನ್ನು ವಂಗಳೂರಿನಲ್ಲಿ ಆ ಬಳಿಕ ಕಲೆಯತ್ತಿದ ಹಲವಾರು ಕಾರ್ಖಾನೆಗಳು ತನ್ಮೂಲಕ ಮಾಡಿಕೊಂಡವು. ಮಂಗಳೂರಿನಲ್ಲಿ ವಿಶೇಷವೆನೊಬ್ಬನು ಹೀಗೆ ಕಾರ್ಖಾನೆಯೊಂದನ್ನು ತೆರೆದು ಯಶಗಳಿಸಿದುದರಿಂದ ಸ್ಥಳೀಯರೂ ಕೆಲವರು ಈ ಕಡೆಗೆ ಗಮನ ಹರಿಸಿದರು. ಅಲೆಕ್ಸಾಂಡರ್ ಅಲ್ಬುಕರ್ಕರೆಂಬವರೊಬ್ಬರು ಪಾಣೆಮಂಗಳೂರಿನ ಹತ್ತಿರದಲ್ಲಿರುವ ನಂದಾವರದಲ್ಲಿ ಯಾವದೋಂದು ವಿಶೇಷ ಮಾದರಿಯ ಯಾಂತ್ರಿಕ ಸಾಮಾಗ್ರಿಗಳಿಲ್ಲದೆ, ಹೆಚ್ಚಿನ ಅನುಭವ ಸಂಪನ್ನರ ಸಹಾಯವೂ ಇಲ್ಲದೆ ಹಂಚುಗಳನ್ನು ತಯಾರಿಸುವ ಸಾಹಸದಲ್ಲಿ ಪ್ರವೃತ್ತರಾದರು ಈ ಹಂಚುಗಳನ್ನು ಅವರು ಪೋರ್ಚುಗೀಸ್ ವ್ಯಾಪಾರಿಗಳಿಗೆ ಮಾರುತಿದ್ದರು. ಏಳು ವರ್ಷಗಳ ಬಳಿಕ ೧೮೯೩ರಲ್ಲಿ ಬಂದರಕ್ಕೆ ಸಮೀಪವಾಗಿರಬೇಕೆಂದು ಉದ್ದೇಶದಿಂದ ತಮ್ಮ ಕಾರ್ಖಾನೆಯನ್ನು ಬೋಳಾರಕ್ಕೆ ಸ್ಥಾನಾಂತರಿಸಿದರು. ದುರ್ದೈವದಿಂದ ೧೯೨೭ರಲ್ಲಿ ಒಂದು ಮಹಾ ಪೂರವು ಕಾರ್ಖಾನೆಯನ್ನು ಸಂಪೂರ್ಣ ಬಲಿಮಾಡಿಕೊಂಡು ಬೋಯಿತು. ಇದರಿಂದ ಎದೆಗೆದಪ್ಪೆ ಅಲ್ಬುಕರ್ಕರು ಆ ದೇ ಸ್ಥಳದಲ್ಲಿ ದೊಡ್ಡದಾದ ಇನ್ನೊಂದು ಕಾರ್ಖಾನೆಯನ್ನು ತೆರೆದರು ಈಗ ಅದು ಹತ್ತು ಎಕ್ರೆ ಜಾಗಕ್ಕೆಂತಲೂ ಹೆಚ್ಚು ಸ್ಥಳವನ್ನು ಆಕ್ರಮಿಸಿದ್ದು ಭಾರತದ ಹಂಚಿನ ಕೈಗಾರಿಕೆಯ ಪ್ರಮುಖ ಕೇಂದ್ರವಾಗಿ ಪರಿಗಣಿಸಲ್ಪಟ್ಟಿದೆ.

ಸಂಶೋಧನೆಗಳ ಅಗತ್ಯ

ಮಂಗಳೂರು ನಗರವು ದಕ್ಷಿಣ ಭಾರತದಲ್ಲಿ ಸುಪ್ರಸಿದ್ಧ ಬಂದರವಾಗಿ ಪ್ರಾದುರ್ಭಾವಕ್ಕೆ ಸಾಗುವಾನಿ ಎಲೆಕ್ಕಿ, ಕರಿಮಣಸು, ಗೇರುಬೀಜ ಮತ್ತು ಕಾಫಿಗಳ ಜೊತೆಗೆ ಹಂಚಿನ ಕೈಗಾರಿಕೆಯೂ ಪೆಚ್ಚಿನ ನೆರವು ನೀಡಿದೆ ಮುಂಬಯಿಂದ ಅಲ್ಬ್ಯೂಕರ್ಕರವರೆಗೆ ಎಲ್ಲಲ್ಲ ಹಂಚಿನ ಕಾರ್ಖಾನೆಗಳು ಕಂಡುಬಂದರೂ ಮಂಗಳೂರು ಹಂಚಿನ ಕೈಗಾರಿಕೆಯು ಅದ್ವಿತೀಯ ಕೇಂದ್ರ. ಸೌಂದರ್ಯಕ್ಕೂ ತಾಳಿಕೆಗೂ ಹೆಸರಾದ ಮಂಗಳೂರು ಹಂಚುಗಳು ಸಿಂಹಳ, ಸಿಂಗಾಪುರ, ಪೂರ್ವ ಆಫ್ರಿಕಾ, ಪೊದಲಾದ ದೇಶಗಳನ್ನಲ್ಲದೆ, ಈಜಿಪ್ಟ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾಗಳಲ್ಲಿ ಕೂಡ ಜನಪ್ರಿಯತೆಯನ್ನು ಗಳಿಸಿದೆ. ವಿದೇಶೀ ನೇಟಿಗಳಲ್ಲಿ ಹಂಚುಗಳ ಬೇಡಿಕೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಈ ಕೈಗಾರಿಕೆಗೆ ಉಜ್ವಲ ಭವಿಷ್ಯವಿದೆ ಯೆಂದೂ ಹೇಳಬಹುದು. ಹೀಗೆ ಬೇಡಿಕೆ ಹೆಚ್ಚುತ್ತಿರುವುದೂ ಬೆಲೆ ಏರುತ್ತಿರುವುದೂ ಹಂಚುಗಳ ಗುಣ ಮತ್ತು ಸೌಂದರ್ಯಗಳ ಕಡೆಗೆ ಕೊಡುವ ಗಮನವನ್ನು ಸ್ವಲ್ಪ ಕಡಮೆ ಮಾಡಿಬಿಟ್ಟಂತೆ ಈಗೀಗ ಭಾಸವಾಗುತ್ತದೆ. ಫ್ರಾನ್ಸು ದೇಶದ ಸುಪ್ರಸಿದ್ಧ ಮಾರ್ಸೆಲಿಯು ಹಂಚುಗಳನ್ನು ಈಗಿನ ಮಂಗಳೂರು ಹಂಚುಗಳೊಂದಿಗೆ ಹೋಲಿಸಿದರೆ ಇದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಪೇಟೆಯಲ್ಲಿ ಗಿರಾಕಿಗಳು ಎಷ್ಟು ದೆಲೆ ಕೊಟ್ಟಾದರೂ ತೆಗೆದುಕೊಳ್ಳಲು ಆತುರರಾಗುವರೆಂಬ ಕಾರಣಕ್ಕಾಗಿ ಹಸಿಬಿಸಿ ಹಂಚುಗಳನ್ನು ತಯಾರಿಸಿ ರವಾನಿಸುವ ಚಟ ಈಗ ಹುಟ್ಟಿಕೊಂಡಿದೆ. ವಿದೇಶಗಳಿಗೆಂದು ಕಳಿಸುವ ಹಂಚುಗಳು ದೂರ ಸಾಗಾಟದಲ್ಲಿ ಒಡೆದು ಹೋಗಿ ಅಥವಾ ಸಪ್ಪೆಯನ್ನುಂಟುಮಾಡುತ್ತವೆ ಇದು ವಿದೇಶೀಯರಿಗೆ ನಮ್ಮ ವಸ್ತುಗಳ ಬೇಡಿಕೆಯ ಪ್ರೀತಿಯನ್ನು ಕಡಿಮೆ ಮಾಡೀತು. ಹೀಗಾಗುವುದಕ್ಕೆ ಬಿಡಬಾರದು. ಆಕರ್ಷಕವಾದ ಜಾಣ್ಣು ತೆಳುವಾದ ಆಕಾರವನ್ನು ಕೊಟ್ಟು ಗಟ್ಟಿಮುಟ್ಟಾಗಿ ನಂತೆ ಹಂಚುಗಳನ್ನು ತಯಾರಿಸಲು ನಾವು ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕು. ಈ ಉದ್ದೇಶದಿಂದ ಹೆಂಚಿನ ಕೈಗಾರಿಕೆಯಲ್ಲಿ ವೈಜ್ಞಾನಿಕ ಪ್ರಯೋಗಗಳನ್ನು ತೊಡಗುವುದು ಲೇಸು. ಮಣ್ಣಿನ ಗುಣಾಗೂ ಹಂಚುಗಳ ತಾಳಿಕೆಯ ವಿಷಯದಲ್ಲಿ ಸಂಶೋಧನೆಗಳು ನಡೆಯಬೇಕಲ್ಲವೆ, ತಯಾರಿಸಿದ ಹಂಚುಗಳ ಮಾರಾಟ ಮತ್ತು ನಿರ್ಯಾತ ವಿಷಯದಲ್ಲಿಯೂ ಜೋಗ್ಯ ಸಲಕರಣೆಗಳನ್ನು ಪೀಡಬಲ್ಲ ಸಂಶೋಧನೆ ಹಾಗೂ ಸಲಹಾ ಸಮಿತಿಗಳು ನೇಮಕಗೊಂಡರೆ ಹಿತವಿದೆ. ಹಂಚುಗಳ ತಯಾರಿಕೆಯಲ್ಲಿ ಸುಂದರವಾದ ಜಪಾನು ಮುಂತಾದ ದೇಶಗಳಲ್ಲಿ ನಮ್ಮ ಪರವಸ್ತು ತರಬೇತಿಗಾಗಿ ಕಳಿಸುವುದೂ ಆ ಸ್ಥಳದ ತಜ್ಞರ ನೆರವನ್ನು ಪಡೆಯುವುದೂ ಕೈಗಾರಿಕೆಯ ಅಭಿವೃದ್ಧಿಗೆ ಸಾಧನವೆನಿಸೀತು

— ವೀರಸರ ಲೇಖನದಿಂದ.

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: K. K. R. SHET.

70 ವರುಷಗಳಿಂದ ಜಗಜ್ಜನಿತವಾದುದು

ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ

ಬಾಟ್ಲಿವಾಲಾ ಆಗ್ ಮಿಕ್ಸ್ಚರ್

ಮತ್ತು ಮಾತ್ರೆಗಳು

ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಗಳಲ್ಲೂ ಸಾರ್ವತ್ರಿಕವಾಗಿ ಉತ್ಪಾದಕರಿಂದ:-

ಡಾ। ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,

ಬಾಟ್ಲಿವಾಲಾ ಬಿಲ್ಡಿಂಗ್ಸ್, ಪೋಸ್ಟಾಫೀಸ್ ಸ್ಟ್ರೀಟ್.

Tele. Add: "CAWASHABAD" ಬಾವರ್, ಬೊಂಬಾಯಿ, 28

ದ ಕ. ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. 265 1953.

ಲಕ್ಷ್ಮಿ ಕಿಟ್ಟಿ ... ... ಪಾದಿ.

ಮತ್ತು

ಪೀಸಸ್ಸ ಕಿಟ್ಟಿ ಕೊಡಾ .. ಪ್ರತಿವಾದಿಯು.

ಉಪ್ಪಿನಂಗಡಿ ಹಾರಾಡಿ ಗ್ರಾಮದಲ್ಲಿರುವ ಚಂದಪ್ಪ ಕಿಟ್ಟಿ ಮಗ 4 ನೇ ಪ್ರತಿವಾದಿ ಮುಖಾಲ ಕಿಟ್ಟಿ, ಉಪ್ಪಿನಂಗಡಿ ಕಸ್ಬಾದಲ್ಲಿರುವ ಗ್ರಾಮದ ವಾಕೂರಲ್ಲಿರುವ ಚಿಕ್ಕಮ್ಮ ಯಾನೆ ರಾವಮ್ಮ ಸಂಗಡ ... ಪ್ರತಿವಾದಿ ಕನಕಾಂಗಿ ಕಿಟ್ಟಿ ತನ್ನ ಬಗ್ಗೆ ಮತ್ತು ತನ್ನ ಮೈನರ್ ಮಕ್ಕಳು [8 ರಿಂದ 10ನೇ ಪ್ರತಿವಾದಿಯ] ರತ್ನಾಕರ ಕಿಟ್ಟಿ, ಕಮಲೇ ಕಿಟ್ಟಿ, ನಮೋಜಿನಿ ಕಿಟ್ಟಿ ಕೂಡಾ 3 ಜನರ ಗಾರ್ಡಿಯನಳಾಗಿ ಸಮಾ. ಕಾರ್ಕಳ ತಾಲ್ಲೂಕು ಜ್ಯೂರು ಗ್ರಾಮದಲ್ಲಿರುವ ಚಿಕ್ಕಮ್ಮು ಯಾನೆ ರಾಮಮ್ಮ ಕಿಟ್ಟಿ ಮಗ 9ನೇ ಪ್ರತಿವಾದಿ. ಆನಂದ ಕಿಟ್ಟಿ, ಉಪ್ಪಿನಂಗಡಿ ತಾಲ್ಲೂಕು ತಿರುವೈಲ ಗ್ರಾಮದ ಕೊಳ್ಚೆಬೈಲು ಹೊಸ ಮನೆಯಲ್ಲಿರುವ ಚಿಕ್ಕಮ್ಮು ಯಾನೆ ರಾಮಮ್ಮ ಕಿಟ್ಟಿ ಮಗನು 11ನೇ ಪ್ರತಿವಾದಿ- ರಾಜೀವಿ ಕಿಟ್ಟಿರಿಗೆ—

ಮೇಲಿನ ಪಾರ್ಟಿಯಲ್ಲಿ ನಾವಿಕ ಮತ್ತು ಪ್ರತಿವಾದಿಯರ ಕುಟುಂಬದ ಬಾಬ್ತು ಯಾ ಪೈತೃ ಸೊತ್ತುಗಳನ್ನು ಪಾರ್ಟಾನು ಆಳಿಯ ಸಂಬಂಧ ಆಕ್ಟ ಪ್ರಕಾರ ಪಿಸಿ ಸಿಗಬೇಕೆಂಬುದಾಗಿ ನಮ್ಮಲಿ ನಿವೃತ್ತಿ ಕೇಳಿ ಪಾರ್ಟಿಯು ದಾಖ್ಲು ಮಾಡಿದ ದಾವೆಯು ತಪ್ಪಿಗೆ ತಾ. 21-1-54 ಕ್ಕೆ ಮೇಲಿನ ಕೋರ್ಟಿನಲ್ಲಿ ಇಟ್ಟಿದುತ್ತದೆ. ಆ ಕಾರಣ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಸದ್ರಿ ದಿನದ ಮೇಲಿನ ಕೋರ್ಟಿಗೆ ಸುಮಾರು ಹಗಲು ಗಂಟೆ 11ಕ್ಕೆ ಖುದ್ದ ಬಿದ್ದು ಯಾ ವಕೀಲರ ಮುಕಾಂತ್ರ ಹಾಜರಾಗಿ ಹಿಂದೆ ಮಾಡಿಕೊಳ್ಳತಕ್ಕದ್ದು.

(ಕೋರ್ಟಿನ ಹುಕುಂ ಪ್ರಕಾರ)

B. M. Hegde

Advocate for Plaintiff.

ಮಂಗಳೂರು ತಾ. 24—12—1953.

ಯೋಜನಾ ಆಯೋಗದ ಮುಂದಿರುವ ಗುರಿ ಏನು?

ಭಾರತದ ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ಕೃಷ್ಣಮಾಚಾರಿಯವರು ಆಖಿಲ ಭಾರತ ವ್ಯವಹಾರ ಆರ್ಥ ಶಾಸ್ತ್ರದ ೧೫ನೇ ಅಧಿವೇಶನದ ಅಧ್ಯಕ್ಷೆ ಸ್ಥಾನದಿಂದ ಮಾತನಾಡುತ್ತಾ "ಗ್ರಾಮಾಂತರಗಳಲ್ಲಿ ಜನಜೀವನದ ಮಟ್ಟವು ಏರಿಕೊಳ್ಳುವಂತೆ ಮಹತ್ವ ಪೂರ್ಣ ಪರಿವರ್ತನೆಯನ್ನು ಸಾಧಿಸುವುದೇ ಲೋಕ ಕಲ್ಯಾಣ ರಾಜ್ಯವಾಗಿರುವ ಭಾರತದ ಉದ್ದೇಶ" ಎಂದರು. "ಯೋಜನಾ ಆಯೋಗವು ಈ ಗುರಿಯನ್ನು ಸಾಧಿಸಲು ಎಲ್ಲ ಕ್ರಮಗಳನ್ನು ಕೈಗೊಂಡಿದೆ. ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ದೊಡ್ಡ ಪ್ರಯಾಸದ ಕೆಲಸವಾಗಿದ್ದು ಇದಕ್ಕೊಸ್ಕರ ಪಂಚವಾರ್ಷಿಕ ಯೋಜನೆ ರೂಪಿಸಲ್ಪಟ್ಟಿದೆ. ಈ ಮಹೋದ್ಯಮದಲ್ಲೂ ರಾಷ್ಟ್ರದ ನಿತ್ಯ ವ್ಯವಹಾರದಲ್ಲೂ ಅಧಿಕಾರಿಗಳೂ ಅಧಿಕಾರೇತರರೂ ಸಹಕಾರದಿಂದ ವರ್ತಿಸುವಂತೆ ಅಡಳಿತದ ಪುನರ್ಘಟನೆ ಮಾಡಲು ಯೋಜನಾ ಆಯೋಗ ಪ್ರಯತ್ನಿಸಿದೆ ರಾಷ್ಟ್ರೀಯ ವಿಸ್ತರಣಾ ಯೋಜನೆಯು ಅಧಿಕಾರಿಗಳೂ ಅಧಿಕಾರೇತರರೂ ಕೂಡಿ ಕೆಲಸ ಮಾಡುತ್ತಿರುವುದಕ್ಕೆ ನಿದರ್ಶನ" ಎಂದವರು ವಿವರಿಸಿದರು.

ತೃಪ್ತಿಕರ ಆರ್ಥಿಕ ಪರಿಸ್ಥಿತಿ

ಸಿಡ್ನಿಯಲ್ಲಿ ಮುಂದಿನ ಶುಕ್ರವಾರದಿಂದ ಪ್ರಾರಂಭವಾಗುವ ಕಾಮನ್‌ವೆಲ್ತ್ ರಾಷ್ಟ್ರಗಳ ಆರ್ಥ ಮಂತ್ರಿಗಳ ಪರಿಷತ್ತಿಗೆ ಹೊರಟು ನಿಂತಿದ್ದ ಭಾರತ ಸರಕಾರದ ಆರ್ಥ ಸಚಿವ ಶ್ರೀ ದೇಶಮುಖರು ಭಾರತದ ಸದ್ಯದ ಆರ್ಥಿಕ ಪರಿಸ್ಥಿತಿಯ ಸಿಂಹಾವಲೋಕನ ಮಾಡುತ್ತಾ ಅದು ತೃಪ್ತಿಕರವಿರುವ ಬಗ್ಗೆ ಸಮಾಧಾನವನ್ನು ವ್ಯಕ್ತಗೊಳಿಸಿದರು. ಪೇಟೆಯ ದರಗಳು ಕೊರಿಯಾ ಯುದ್ಧಕ್ಕೆ ಪೂರ್ವದಲ್ಲಿದ್ದ ಮಟ್ಟಕ್ಕೆ ಬಂದಿದ್ದು ಇದು ಸ್ಥಿರವಾಗಿ ಉಳಿವುದೆಂದು ಆರ್ಥ ಸಚಿವರು ಹಾರೈಸಿದರು "ಭಾರತದ ಪಂಚ ವಾರ್ಷಿಕ ಯೋಜನೆಯನ್ನು ಕಾರ್ಯಾಕಾರಿಯಾಗಿಸುವಲ್ಲಿ ವಿದೇಶೀ ಸಹಾಯವು ಅಪೇಕ್ಷಿತ ಪ್ರಮಾಣದಲ್ಲಿ ದೊರೆತಿಲ್ಲ ಆದರೂ ಈ ನೆರವಿನ ಮೊತ್ತ ಅತ್ಯಲ್ಪವಿರುವುದರಿಂದ ನಾವು ದಿಗಿಲುಗೊಳ್ಳುವ ಅಗತ್ಯವಿಲ್ಲ. ಯೋಜನೆಯ ಇನ್ನುಳಿದ ಎರಡು ವರ್ಷಗಳಲ್ಲಿ ಅತ್ಯಧಿಕ ಉತ್ಸಾಹದಿಂದ ಕೆಲಸ ಮಾಡಲು ಹೆಣಗುತ್ತೇವೆ. ಕಳೆದ ಮೂರು ವರ್ಷಗಳಲ್ಲಿ ೧೦೦೫ ಕೋಟಿ ರೂಪಾಯಿಗಳ ವೆಚ್ಚವಾಗಬೇಕೆಂದು ನಿರ್ಣಯಿಸಲ್ಪಟ್ಟಿದ್ದೆ; ಮುಂದಿನೆರಡು ವರ್ಷಗಳಲ್ಲಿ ೧೫೮೮ ಕೋಟಿ ರೂಪಾಯಿ ನೆಚ್ಚ ಮಾಡಬೇಕಾಗುವುದು. ಯೋಜನೆಗೆ ಒದಗಿಸಿದ ಹಣನೆಚ್ಚವಾಗದಿರುವುದಕ್ಕೆ ವಿದೇಶಗಳಿಂದ ಸರಕುಗಳು ಸಕಾಲದಲ್ಲಿ ಪೂರೈಕೆಗೊಳ್ಳದಿದ್ದುದೇ ಕಾರಣ" ಎಂದವರು ಹೇಳಿದರು.

ಆಯಾತ ಧೋರಣ

ನಮ್ಮ ಆರ್ಥಿಕ ಪರಿಸ್ಥಿತಿ ತೃಪ್ತಿಕರವಿರುವುದಕ್ಕೆ ಕೆಲವು ಟ್ಟಿಗೆ ದೀರ್ಘಾಲೋಚನೆಯಿಂದ ಅನುಸರಿಸುವ ಸಮಾಧಾನಕರವಾದ ಆಯಾತ ಧೋರಣೆಯೂ ಕಾರಣವಾಗಿರುತ್ತದೆ. ಸರಕಾರದವರು ಇದೇ

ನಿತ್ಯ ಜೀವನದ ಮಟ್ಟವನ್ನು ಏರಿಸುವ ಸಂಕಲ್ಪ

ಜನವರಿಯಿಂದ ಜಾರಿಗೆ ಬರುವಂತೆ ಆಯಾತ ಧೋರಣವನ್ನು ಪ್ರಕಟಪಡಿಸಿದ್ದು ಕಳೆದ ವರ್ಷದ ಉತ್ತರಾರ್ಧದಲ್ಲಿ ಅನುಸರಿಸಿದ ನೀತಿಯನ್ನು ಸಾಮಾನ್ಯವಾಗಿ ಈಗಲೂ ಅಂಗೀಕರಿಸಿರುವರು. ವರ್ತಕ ವರ್ಗದಲ್ಲೂ ವಾಣಿಜ್ಯ ಮತ್ತು ಔದ್ಯೋಗಿಕ ಕ್ಷೇತ್ರದಲ್ಲೂ ಧೋರಣೆಯು ಸ್ವಾಗತವನ್ನು ಪಡೆದಿರುವುದರ ಮೇಲಿಂದಲೇ ಇದರ ಯೋಗ್ಯತೆಯನ್ನು ಗುರುತಿಸಿಕೊಳ್ಳಬಲ್ಲೆವು. ಭಾರತದಲ್ಲಿಯೇ ತಯಾರಾಗುವ ಸಾಮಗ್ರಿಗಳನ್ನು ವಿದೇಶದಿಂದ ಆಯಾತ ಮಾಡಿಕೊಳ್ಳುವುದು ಅನಿವಾರ್ಯವೆಂದು ಸರಕಾರವು ಮನಗಂಡಿರುತ್ತದೆ; ಆದಕಾರಣ ಅವುಗಳನ್ನು ತರಿಸಬಾರದೆಂದು ನಿರ್ಬಂಧಿಸಿದೆ ಒಬ್ಬನು ಆಯಾತ ಮಾಡಿಕೊಳ್ಳಬೇಕಾದ ಕನಿಷ್ಠ ಮಟ್ಟವನ್ನೂ ಕಡಿಮೆ ಮಾಡಿರುವುದರಿಂದ ಮತ್ತು ಲೈಸನ್ಸ್ ಕೊಡುವ ಪದ್ಧತಿಯನ್ನು ಸುಗಮಗೊಳಿಸಿರುವುದರಿಂದ ಹೊಸಬರಿಗೆ ವ್ಯಾಪಾರೋದ್ಯಮದಲ್ಲಿ ಪ್ರಗತಿ ಹೊಂದಲು ಅವಕಾಶ ದೊರೆತಿದೆ. ಔದ್ಯೋಗಿಕ ಉತ್ಪಾದನೆಯನ್ನು ಹೆಚ್ಚಿಸಬಲ್ಲ ಯಂತ್ರ ಸಾಮಾಗ್ರಿಗಳಿಗೆ ಪ್ರಾಶಸ್ತ್ಯವು ಕೊಡಲ್ಪಟ್ಟಿವೆ. ಇದರ ಜೊತೆಗೆ ದೇಶದ ಆಯಾತ-ನಿರ್ಯಾತ ಪ್ರಮಾಣದಲ್ಲಿ ಸಮತೋಲವೂ ಸಾಧಿಸಲ್ಪಟ್ಟಿದೆ.

ಅಸ್ಪೃಶ್ಯತೆಯ ನಿರ್ಮೂಲ

ರಾಜ್ಯಾಂಗ ಘಟನೆಯಲ್ಲಿ ಅಸ್ಪೃಶ್ಯತೆಯನ್ನು ಆಚರಿಸತಕ್ಕದ್ದಲ್ಲವೆಂದು ಸ್ಪಷ್ಟವಾಗಿ ಹೇಳಿದ್ದರೂ ನಮ್ಮ ಸಮಾಜದ ಮೇಲಿನ ಈ ಕಲಂಕವು ಇದುವರೆಗೆ ಪೂರ್ಣವಾಗಿರುವುದಿಲ್ಲ ಆದುದರಿಂದ ಈ ಸುಧಾರಣಾ ಮಾರ್ಗದಲ್ಲಿ ಪ್ರಗತಿಸಿರ ಧೋರಣವನ್ನು ವಹಿಸುವುದು ಅಗತ್ಯವೆಂದು ತೋರಿ, ಸರಕಾರವು ಒಂದು ವಿಧೇಯಕವನ್ನು ವಿಶೇಷ ಗಜೆಟನಲ್ಲಿ ಪ್ರಕಟಿಸಿರುತ್ತದೆ. ಅಸ್ಪೃಶ್ಯತೆಯನ್ನು ಆಚರಿಸುವುದೂ ಈ ಆಚರಣೆಯಿಂದ ತಿರಾದರೆಯುಂಟು ಮಾಡುವುದೂ ಅಪರಾಧವೆಂದು ಹೇಳಿ ಇದನ್ನು ದಂಡಿಸಲು ಈ ವಿಧೇಯಕ ಉದ್ದೇಶಿಸಿದೆ. ಇದರಲ್ಲಿಯ ಆರು ತಿಂಗಳ ಶಿಕ್ಷೆ ಇಲ್ಲವೇ ೫೦೦ ರೂಪಾಯಿಗಳ ದಂಡ ಅಥವಾ ಎರಡೂ ವಿಧಿಸಲ್ಪಡುತ್ತದೆ. ಹಿಂದೂಗಳಿಗೆ ಮಾತ್ರವೆಂದಲ್ಲ—ಅಸ್ಪೃಶ್ಯತೆಯನ್ನು ಆಚರಿಸುವ ಯಾವನೇ ಇದ್ದರೂ ಅವನನ್ನು ದಂಡಿಸುವಷ್ಟು ಈ ವಿಧೇಯಕ ವ್ಯಾಪ್ತಿಯನ್ನು ಪಡೆದಿರುತ್ತದೆ. ಕಂಪೆನಿಯಾಗಲೀ ವ್ಯಾಪಾರಿಯಾಗಲೀ ವ್ಯವಹಾರಿಯಾಗಲೀ ಯಾರೊಬ್ಬನೂ ಯಾರನ್ನೂ ಅಸ್ಪೃಶ್ಯನೆಂದು ನಡೆಸಿಕೊಳ್ಳಲಾರನು—ಇದಕ್ಕೆ ತಪ್ಪಿದರೆ ವ್ಯಾಪಾರೋದ್ಯಮಗಳ ಲೈಸೆನ್ಸ್‌ನ್ನು ಕಳಕೊಳ್ಳಬೇಕಾಗುವುದು. ಸಾರ್ವಜನಿಕ ಮಂದಿರ ಹಾಗೂ ವ್ಯವಹಾರದ ಕ್ಷೇತ್ರಗಳಲ್ಲಿ ಯೂ ಅಸ್ಪೃಶ್ಯತೆಗೆ ಅವಕಾಶವಿಲ್ಲವೆಂದು ವಿಧೇಯಕ ಹೇಳುತ್ತದೆ

ಧಾನ್ಯಗಳ ನಿನಿಯಂತ್ರಣ

ದೇಶದಲ್ಲಿ ಆಹಾರ ಧಾನ್ಯಗಳ-ಮುಖ್ಯವಾಗಿ ಉರುಟು ಧಾನ್ಯಗಳ ಪರಿಸ್ಥಿತಿಯು ತುಂಬ ಸಮಾಧಾನಕರವಿರುವುದರಿಂದ ಭಾರತ ಸರಕಾರವು ಜೋಳ, ಬಾರ್ಲಿ, ಮೆಕ್ಕೆ ಜೋಳ, ಕಡಲೆ ಮುಂತಾದವುಗಳ ಮೇಲೆ ಇದ್ದ ನಿಯಂತ್ರಣಗಳನ್ನು ಕೆತ್ತೊಗೆದಿದೆ. ಗೋಧಿಯ ಮೇಲಿನ ನಿಯಂತ್ರಣವು ಮೊದಲೇ ಸಡಲಿಸಲ್ಪಟ್ಟಿರುವುದರಿಂದ ಈಗ ಅಕ್ಕಿಯು ಮೇಲೆ ಮಾತ್ರ ನಿಯಂತ್ರಣವು ಳಿದಿದೆ. ಮೊದಲು ನಿನಿಯಂತ್ರಣದ ನಿರ್ಣಯ ಸಾರಿದಾಗ ಅಂತರ ರಾಜ್ಯಸಾಗಾಟದ ಮೇಲೆ ನಿರ್ಬಂಧಗಳಿಲ್ಲವೆಂದು ಹೇಳಲ್ಪಟ್ಟಿತ್ತು. ಆದರೆ ಈಗ ಸೌರಾಷ್ಟ್ರ, ಮಧ್ಯಭಾರತ ಮತ್ತು ಉತ್ತರ ಪ್ರದೇಶದ ೧೫ ಜಿಲ್ಲೆಗಳನ್ನು ಬಿಟ್ಟು ಉಳಿದೆಲ್ಲ ಕಡೆ ಉರುಟು ಧಾನ್ಯಗಳ ಸಾಗಾಟದ ಮೇಲಿನ ನಿರ್ಬಂಧವನ್ನೂ ರದ್ದು ಮಾಡಲಾಗಿದೆ. ಮೇಲೆಹೇಳಿದ ಪ್ರದೇಶಗಳಲ್ಲಿ ನಿರ್ಯಾತಕ್ಕೆ ಅವಕಾಶ ಕೊಡದಿದ್ದರೂ ಹೊರ ರಾಜ್ಯಗಳಿಂದ ಉರುಟು ಧಾನ್ಯಗಳನ್ನು ತರಿಸಿಕೊಳ್ಳಲು ಅವಕಾಶ ಕೊಡಲ್ಪಟ್ಟಿದೆ. ಉತ್ಪಾದನೆಯು ಸಾಪಾನ್ಯವಾಗಿ ತೃಪ್ತಿಕರವಾಗಿ ಹೆಚ್ಚಿರುವುದರಿಂದ ವಿನಿಯಂತ್ರಣ ಧೋರಣೆಯನ್ನು ಅನುಷ್ಠಾನಕ್ಕೆ ತರಲಾಯಿತು ಸನ್ಯದ್ಧ ರಾಜ್ಯಗಳಲ್ಲಿ ಬೆಲೆಯ ಇಳಿಮುಖವಾದುದೂ ಕಂಡು ಬಂದಿದೆ. ಅಕ್ಕಿಯ ಉತ್ಪಾದನೆ ಹೆಚ್ಚು ಕೊಂಡಿದ್ದರೂ ಅದನ್ನು ತಿನ್ನುವವರ ಪ್ರಮಾಣವೂ ಅಧಿಕವಿರುವುದರಿಂದ ಕೂಡಲೇ ವಿನಿಯಂತ್ರಣ ಸಾರಲು ಕಷ್ಟವಾಗಿ ತೋರೀತು. ಆದರೂ ಉರುಟು ಧಾನ್ಯಗಳನ್ನು ತಿನ್ನುವ ಅಭ್ಯಾಸವುಳ್ಳವರು ಇನ್ನು ಮುಂದೆ ಯಾವ ನಿರ್ಬಂಧವಿಲ್ಲದೆಯೇ ಹಾಗೆ ಮಾಡಬಹುದಾದುದರಿಂದ—ಅವರು ಉಪಯೋಗಿಸುತಿದ್ದ ಅಕ್ಕಿಯನ್ನು ಮುಖ್ಯಾಹಾರವಾಗಿ ಅಕ್ಕಿಯನ್ನು ತಿನ್ನುವ ಜನರು ಬಳಸಬಹುದು. ಅಂತೂ ಜನ ಸಂಖ್ಯೆ ಹೆಚ್ಚಿ ಕೊಂಡಿದ್ದರೂ ರಾಷ್ಟ್ರ ಕಲ್ಯಾಣ ಯೋಜನೆ ಸುಕಾರ್ಯಾನಿತ್ಪಗೊಂಡ ಪರಿಣಾಮವಾಗಿ ಉತ್ಪಾದನೆ ಹೆಚ್ಚಿ, ಆಹಾರ ಧಾನ್ಯಗಳ ಸಮೃದ್ಧಿ ಕಂಡು ಬಂದಿರುವುದು ಸಂತೋಷ.

ಭಾರತದ ನವ ನಿರ್ಮಾಣ

ಪರಿಸ್ಥಿತಿಯು ದಿನೇ ದಿನೇ ಊರ್ಜಿತಗೊಳ್ಳುತ್ತಿದೆಯೆಂಬುದಕ್ಕೆ ಮೇಲಿನ ಕೆಲವು ಅಂಶಗಳು ನಿದರ್ಶನ ರೂಪದಲ್ಲಿರುತ್ತವೆ—ಜನರು ಇದನ್ನು ಜ್ಞಾನಾರ್ಥವಾಗಿ ಮನವರಿಕೆ ಮಾಡಿಕೊಂಡು ಸರಕಾರದ ಸತ್ಪ್ರಯತ್ನಗಳಲ್ಲಿ ಸಹಕರಿಸುವ ಸಂಕಲ್ಪವನ್ನು ಮಾಡಬೇಕು. ಜನರ ಸಹಕಾರವನ್ನು ಪಡೆಯುವ ಉದ್ದೇಶದಿಂದ ವಿಧಾಯಕ ಕಾರ್ಯಕರ್ತರೂ ಕಾಂಗ್ರೆಸ ಪ್ರಭೃತಿಗಳೂ ಜೊತೆಗೂಡಿ ಕೆಲಸವನ್ನು ಮಾಡಬೇಕು. ಕಾಂಗ್ರೆಸಾಧ್ಯಕ್ಷ ನೆಹರೂರವರು ಕಾಂಗ್ರೆಸ್ ಸೇವಾ ದಳದ ಒಂಭೈ ವರ್ಷಿಕೋತ್ಸವದ ಕಾಲಕ್ಕೆ ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಕಾಂಗ್ರೆಸ ಸೇವಾದಳವು ಹೊರಬೇಕಾಗಿ ಬಂದಿರುವ ಹೊಸ ಹೊಸ ಹೊಣೆಗಾರಿಕೆಗಳನ್ನು ಪ್ರಸ್ತಾಪಿಸಿದರು ಸ್ವಾತಂತ್ರ್ಯ ಆಂದೋಲನ ಕಾಲದಲ್ಲಿ ಸೇವಾದಳವು ಮಹತ್ವದ ಪಾತ್ರವನ್ನು ನಿರ್ವಹಿಸಿತು. ಜನರಲ್ಲಿ ಭರದಿಂದ ಕಾಂಗ್ರೆಸ ಪರ ಪ್ರಚಾರ ಕಾರ್ಯವನ್ನು ಸೇವಾದಳ ಕೈಗೊಂಡದ್ದಲ್ಲದೆ, ಶಿಸ್ತು ಮತ್ತು ಶೀಲಗಳಿಗೂ ಪ್ರಸಿದ್ಧಿ ಪಡೆಯಿತು. ಈಗ ಮಾತಾವರಣವು ಬೇರೆಯಾಗಿರುವುದರಿಂದ ಭಾರತದ ನವ ನಿರ್ಮಾಣ ಕಾರ್ಯದಲ್ಲಿ ಕಾಂಗ್ರೆಸ ಕಾರ್ಯಕರ್ತರೂ ಸೇವಾದಳದವರೂ ಪರಿಶ್ರಮ ಪೂರ್ವಕ ದುಡಿಯಬೇಕು—ಎಂದು ನೆಹರೂ ವಿನಂತಿಸಿದರು. ಅಹಿಂಸಾ ತತ್ವದಲ್ಲಿ ನಂಬಿಕೆಯಿರಿಸಿ ರಚನಾತ್ಮಕ ಕೆಲಸಗಳಲ್ಲಿ ಹಾಗೂ ರಾಷ್ಟ್ರ ಪುನಾರಚನೆಯ ಪ್ರಯತ್ನಗಳಲ್ಲಿ ಪ್ರವೃತ್ತರಾಗುವುದು ಇಂದಿನ ಅನಿವಾರ್ಯಕತೆಯಾಗಿರುತ್ತದೆಂದು ನೆಹರೂ ಸ್ಪಷ್ಟವಾಗಿ ಬಿಂಬಿಸಿದರು. ಸ್ವಾತಂತ್ರ್ಯ ಸಂಗ್ರಾಮದ ನೆನಪೆಯಾದ ಬಳಿಕ ಕಾಲ ಕಾಲಕ್ಕೆ ಜರಗುವ ಚುನಾವಣೆಗಳಲ್ಲಿ ಭಾಗ ವಹಿಸುವುದು ಮತ್ತು ಸರಕಾರ ನಡೆಸುವುದು ಮಾತ್ರ ಕಾಂಗ್ರೆಸಿಗರ ಕರ್ತವ್ಯವೆಂದು ಹೇಳುವುದು ಸರ್ವಥಾ ಸರಿಯಲ್ಲ. ಆದು ಕಾಂಗ್ರೆಸ್ಸಿನ ಗುರಿಯಲ್ಲ—ದೇಶದ ಐಕ್ಯ, ಸಂಘಟನೆ, ಶಿಸ್ತು, ಕಷ್ಟ ಸಹಿಷ್ಣುತೆ ಪರಿಶ್ರಮ, ತ್ಯಾಗಮುಂತಾದ ಉದಾತ್ತ ಭಾವನೆಗಳನ್ನು ಬಲಗೊಳಿಸಬೇಕು ಸೇವಾ ದಳವು ಕಾಂಗ್ರೆಸಿನ ರಕ್ಷಾಕವಚವಾಗಬೇಕು. ಎಂದು ನೆಹರೂರವರು ಉಪದೇಶಿಸಿದರು ಇದು ಎಲ್ಲ ದೇಶದ ಎಲ್ಲ ವ್ಯಕ್ತಿಗಳಿಗೂ ಸಮಾನವಾಗಿ ಅನ್ವಯಿಸುವ ಮಹತ್ವದ ಮಾತು.



ರಾಮತೀರ್ಥ
ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೪—೦
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಆರ್ಥಿಕ ಪಳಿಗೆಯೇ ದೇಶದ ಬೆಂಗೋಲು

ಪರಸ್ಪರ ಸ್ನೇಹ, ವಿಶ್ವಾಸ, ಪ್ರಾಮಾಣಿಕತೆಗಳ ಅಡಿಗಟ್ಟು

ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣನ್ನರು ಆಂಧ್ರ ವಾಣಿಜ್ಯ ಸಂಘದ ರಜತ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸುತ್ತ ರಾಜಕೀಯ ಸ್ವಾತಂತ್ರ್ಯಕ್ಕಿಂತ ಆರ್ಥಿಕ ಸ್ವಾತಂತ್ರ್ಯಕ್ಕೆ ಇರುವ ಪತ್ರಮುಖ್ಯತೆಯನ್ನು ಪ್ರಸ್ತಾಪಿಸಿದರು. ರಾಜಕೀಯ ಸ್ವಾತಂತ್ರ್ಯದ ಭದ್ರತೆಗೆ ಆರ್ಥಿಕ ಸ್ವಾವಲಂಬನೆಯು ಅತ್ಯಂತ ಆವಶ್ಯಕವಾಗಿರುತ್ತದೆಂದು ಅವರು ಒತ್ತಿ ಹೇಳಿದ್ದಲ್ಲದೆ, ಆರ್ಥಿಕ ಸಂಪತ್ತನ್ನು ಅತ್ಯಧಿಕ ಪ್ರಮಾಣದಲ್ಲಿ ಉತ್ಪಾದಿಸುವುದಕ್ಕೆ ಸಾಪೇಲ್ಲರೂ ಒಗ್ಗಟ್ಟಿನಿಂದ ಪರಿಶ್ರಮ ಪೂರ್ವಕ ದುಡಿಯಬೇಕಾಗಿದೆಯೆಂದು ಅಭಿಪ್ರಾಯಪಟ್ಟರು. ಉತ್ಪಾದನೆಯು ಅಧಿಕಗೊಳ್ಳಬೇಕಾದರೆ ಕೆಲಸಗಾರರಲ್ಲಿ ನಿಸ್ಪೃಹ ಮತ್ತು ಪ್ರಾಮಾಣಿಕತೆಗಳು ಬೆಳೆಯುಬೇಕಾಗಿದೆಯೆಂದೂ ಆರ್ಥಿಕ ದಬ್ಬಾಳಿಕೆ ಇಲ್ಲದ ಸೌಹಾರ್ದಯುತವಾದ ಸಮಾಜವನ್ನು ರೂಪಿಸುವ ಮನೋಭಾವ ಮೂಡಿಬರಬೇಕಾಗಿದೆಯೆಂದೂ ಎಲ್ಲರಿಗೂ ಗೊತ್ತಿದೆ. ಕೆಲಸಗಳ್ಳತನವೂ ಸಂಪು ಮತ್ತಿತರ ಹಿಂಸಾತ್ಮಕ ಪ್ರವೃತ್ತಿಯೂ ಪ್ರಯೋಜನಕರವಲ್ಲ. ಪರಸ್ಪರ ಸ್ನೇಹ ಮತ್ತು ವಿಶ್ವಾಸದ ವಾತಾವರಣವನ್ನು ಉಂಟುಮಾಡಿಕೊಳ್ಳುವುದೇ ದೇಶದ ಆರ್ಥಿಕ ಸ್ವಾವಲಂಬನೆಯ ಪ್ರಥಮ ಸೂತ್ರವಾಗಿರುತ್ತದೆ

ಶ್ರಮಜೀವಿಗಳ ಪಾಲಿಪತ್ತ

ಶ್ರಮಜೀವಿಗಳು ದೇಶದ ಜೀವಾಳವಾಗಿರುವರೆಂಬ ಅಂಶವನ್ನು ಧಾರಿಣಾಯಿ ಜೆನ್ನಾಗಿ ತಿಳಿದಿರುವರೆಂಬುದಕ್ಕೆ ಹಲವು ನಿದರ್ಶನಗಳನ್ನು ಕೊಡಬಹುದು-ಜಲಗಾಂವದಲ್ಲಿ ಸೇರಿದ್ದ ಪರಿಷತ್ತಿನ ಕಾರ್ಯಾಕಲಾಪದಲ್ಲಿರುವ ಇದು ಜೆನ್ನಾಗಿ ವ್ಯಕ್ತಗೊಂಡಿದೆ. ಇಷ್ಟೇ ಸಮಯ ಮುಂಬಯಿಗೆ ನಾಲ್ಕು ಸೈಲು ನೂರದಲ್ಲಿರುವ ಜೆಂಸೂರಿನಲ್ಲಿ ಹೊಸತೊಂದು ಔದ್ಯೋಗಿಕ ವಸಾಹತಿನ ಶಂಕು ಸ್ಥಾಪನೆ ಮಾಡುವಾಗ ಪ್ರಧಾನ ಮಂತ್ರಿ ನೆಹರೂರವರು ಕನಿಷ್ಠ ಎರಡು ಕೋಣೆಗಳುಳ್ಳ ಮನೆಗಳನ್ನಾದರೂ ಕಟ್ಟಿಸಬೇಕಾದ ಆವಶ್ಯಕತೆಗೆ ಜೋರು ಕೊಟ್ಟರು. "ಎರಡು ಕೋಣೆಗಳಾದರೂ ಇಲ್ಲದ ಮನೆಗಳನ್ನು ಕಟ್ಟಿಸಲೇ ಬಾರದು. ಒಂದೇ ಕೋಣೆಯುಳ್ಳ ಗೃಹದಲ್ಲಿ ವಾಸಿಸುವುದರಿಂದ ಶ್ರಮಜೀವಿಗಳ ಕಾರ್ಯಾಕ್ಷಮತೆಗೆ ಧಕ್ಕೆ ತಗಲುತ್ತದೆ. ಕೋಣೆಯಿಂದಲೇ ತೃಪ್ತಿ ಸಡುವ ಕಾಲ ಈಗ ಉಳಿದಿಲ್ಲ" ಎಂದವರು ಹೇಳಿದರು. ಜೆಂಬೂರಿನ ಈ ವಸಾಹತಿನಲ್ಲಿ ಮೂರೂ ಕಾಲು ಕೋಟಿ ರೂಪಾಯಿಗಳ ವೆಚ್ಚದಿಂದ ಸುಮಾರು ೭೦೦೦ ಮನೆಗಳನ್ನು ಕಟ್ಟಿಸಲಾಗುವುದು. ಬರ್ಮಾ ಶೆಲ್ ಮತ್ತು ಸ್ಟ್ಯಾಂಡರ್ಡ್ ವೆಕ್ಯೂಮ್ ತೈಲ ಶುದ್ಧೀಕರಣ ಕೇಂದ್ರಗಳಿಗೆ ಇದು ಸಮೀಪ ಏರುವುದು.

ಕಾರ್ಮಿಕನ ಹಿರಿಮೆ

ನೆಹರೂರವರು ಬೆಂಗಳೂರಿಗೆ ಬಂದ್ದಾಗ ಹಿಂದುಸ್ತಾನ ಏರ್ ಕ್ರಾಫ್ಟ್ ಕಾರ್ಖಾನೆಯನ್ನು ಸಂದರ್ಶಿಸಿ ಕೆಲಸಗಾರರಲ್ಲಿ ಆತ್ಮ ವಿಶ್ವಾಸವನ್ನು ರಾಷ್ಟ್ರ ಸೇವೆಯ ಮನೋವೃತ್ತಿಯನ್ನೂ ಪೋಷಿಸಬೇಕೆಂದೂ ಹಿತನುಡಿದರು. ವಿಶ್ವದ ವೈಮಾನಿಕ ನಕ್ಷೆಯಲ್ಲಿ ಭಾರತಕ್ಕೆ ಪ್ರಮುಖ್ಯವಾದ ಸ್ಥಾನವನ್ನು ಒದಗಿಸಿಕೊಡುವಲ್ಲಿ ತಾವು ಎಷ್ಟರ ಮಟ್ಟಿಗೆ ನೆರವಾಗುತ್ತೇಂಬ ಅಭಿಮಾನವು ಕೆಲಸಗಾರರಲ್ಲಿ ಮೂಡಿದರೆ, ಪ್ರತಿಯೊಬ್ಬರಲ್ಲಿ ಉತ್ಸಾಹವೂ ರಾಷ್ಟ್ರ ಕಾರ್ಯಕ್ಕೋಸ್ಕರ ಶ್ರಮಿಸುವ ಬುದ್ಧಿಯೂ ಸದಾಜಾಗೃತಗೊಳ್ಳುವುದು. ಇಂದು ಜನನಾಯಕನೆನಿಸುವ ರಾಜಕಾರಣಿಗಿಂತಲೂ ಬೆವರಿಳಿಸಿ ದುಡಿಯುವ ಕಾರ್ಮಿಕನೇ ರಾಷ್ಟ್ರಕ್ಕೆ ಉತ್ತಮವಾದ ಸೇವೆ ನೀಡಬಲ್ಲನು.

ಮುಂಬರುವ ಚುನಾವಣೆಗಳು

ರಾಜಕಾರಣದ ಮಹತ್ವ ಇದರಿಂದ ತಗ್ಗಿತೆಂದಲ್ಲ—ಕಲ್ಯಾಣ ರಾಷ್ಟ್ರಕ್ಕೋಸ್ಕರ ಕೆಲಸ ಮಾಡುವ ಸರಕಾರ ಅಸ್ತಿತ್ವದ ಸ್ಥಿಮ್ಮು, ಜನತಾ ಸಹಕಾರ ಅದಕ್ಕೆ ದೊರೆಯುವಂತೆ ರಾಜಕಾರಣಿಗಳು ನೋಡಿಕೊಂಡರೆ ದೇಶದಲ್ಲಿ ಸಮೃದ್ಧಿ ಸುಭಿಕ್ಷೆಗಳು ನೆಲೆಗೊಳ್ಳಲು ಕೆಲಮಟ್ಟಿಗೆ ನೆರವಾಗುತ್ತದೆ ಆದರೆ ಹೀಗೆ ಪ್ರಯತ್ನ ನಡೆಯುತ್ತಿರುವುದರಿಂದ ತಿರುಕೊಚ್ಚಿಯ ಶಾಸನ ಸಭೆಗೆ ಮರಳಿ ಚುನಾವಣೆಗಳು ನಡೆಯಲಿವೆ. ಅಲ್ಲಿ ಕಾಂಗ್ರೆಸದ ವಿರುದ್ಧ ಕೆಲಸ ಮಾಡಲು ಪ್ರಜಾಸಮಾಜವಾದೀ ಪಕ್ಷವು ಕಮ್ಯೂನಿಸ್ಟರೊಂದಿಗೆ ಸ್ನೇತ್ರಿ ಬೆಳೆಸಿದೆ, ಈ ಸ್ನೇಹದಲ್ಲಿ ಯಾವ ಪಾವಿತ್ರ್ಯವೂ ಇಲ್ಲ. ತನಗೆ ಬಲವಾದ ವಿರೋಧ ಒಂದೀತೆಂಬ ಅಂಜಿಕೆಯನ್ನು ಲೆಕ್ಕಿಸದೆ, ಕಾಂಗ್ರೆಸು ಚುನಾವಣೆಯ ಎಲ್ಲ ಸ್ಥಾನಕ್ಕೂ ಹೋರಾಡಲು ನಿರ್ಧರಿಸಿ ಸಡಕ್ಕರ ಯಾದಿಯನ್ನು ಸಿದ್ಧಗೊಳಿಸಿದೆ. ಪೆಪ್ಪನಿಸಲ್ಲಿ ಕಾಂಗ್ರೆಸದ ಪರವಾಗಿ ಸ್ಪರ್ಧಿಸಲಿರುವ ಹುರಿಯಾಳುಗಳ ಪಟ್ಟಿಯು ತಯಾರಿಸಲ್ಪಟ್ಟಿದೆ. ದೇಶದ ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ ಪಕ್ಷಕ್ಕೆ ಬೆಂಬಲವಾದ ಸಂಕಾರವನ್ನು ರಚಿಸಿಕೊಂಡು ರಾಷ್ಟ್ರವನ್ನು ಅಭ್ಯುದಯ ಮಾರ್ಗದಲ್ಲಿ ಮುನ್ನಡೆಸಲು ಸಾಧ್ಯವುಂಟೆಂದು ನೆಹರೂ ಪ್ರತಿಯೊಂದೆಡೆಯಲ್ಲೂ ದೃಢವಾದ ನಂಬಿಕ ವ್ಯಕ್ತಗೊಳಿಸಿದರು. ಆದರೆ ಪಕ್ಷ ಪಂಗಡಗಳ ಪ್ರಚಾರ ವೈಖರಿಗೆಯೇ ಪ್ರಾಶಸ್ತ್ಯ ದೊರೆತಿರುವ ಈ ಕಾಲದಲ್ಲಿ ನಿಜವಾಗಿಯೂ ಯೋಗ್ಯತೆಯುಳ್ಳ ಪಕ್ಷವನ್ನು ಗುರುತಿಸುವುದು ಜನ ಸಾಮಾನ್ಯರಿಗೆ ಕಠಿಣವೆನಿಸಿದೆ.

ವಿಧಾಯಕ ಕಾರ್ಯ

ಪ್ರಚಾರ ವೈಖರಿಗಿಂತ ಭಿನ್ನವಾದ ರಚನಾತ್ಮಕ ಕೆಲಸಗಳು ಕೈಗೂಡದ ಪಕ್ಷದಲ್ಲಿ-ಆಗ ಜನತೆಗೆ ಪಕ್ಷದ ಸಾಮರ್ಥ್ಯವನ್ನೂ ಯೋಗ್ಯತೆಯನ್ನೂ ತಿಳಿಯಿಕೊಳ್ಳಲು ಸಾಧ್ಯವಾಗುತ್ತದೆ ಹೈದರಾಬಾದಿನಲ್ಲಿ ಕಸ್ತೂರಿಬಾ ನಿಧಿಯ ಕಾರ್ಯಕರ್ತರು ಏರ್ಪಡಿಸಿದ ಸಭೆಯಲ್ಲಿ ನೆಹರೂ ಈ ಮಾತನ್ನೆ ಹೇಳಿದರು-ಒಳ್ಳೆಯ ಕಾರ್ಯಕರ್ತರು ವಿಧಾಯಕ ರಂಗವನ್ನು ಪ್ರವೇಶಿಸಿದರೆ ಆಗ ಜನತಾ ಸಹಕಾರವು ಸುಲಭವಾಗಿಯೇ ದೊರೆಯುವುದೆಂದೂ ದೇಶದ ಸಮಗ್ರ ಹಿತದೃಷ್ಟಿಯನ್ನು ಇಟ್ಟುಕೊಂಡು ಪ್ರತಿಯೊಂದು ಸಾರ್ವಜನಿಕ ಸಂಸ್ಥೆಯೂ ಪರಸ್ಪರ ಸಹಕಾರದಿಂದ ನಡೆಯಬೇಕೆಂದೂ ಅವರು ಹಿತನುಡಿದರು. ಭಾರತ ಸೇವಕ ಸಮಾಜದಂಥ ಸಂಸ್ಥೆಯು ಜನಮತವನ್ನು ವಿಧಾಯಕ ಕೆಲಸಗಳ ಕಡೆಗೆ ನೆಲೆಯುವುದರಲ್ಲಿ ಮಹತ್ವದ ಪಾತ್ರವಹಿಸುವ ಸಂಗತಿಯನ್ನು ಅವರು ಪ್ರಸ್ತಾಪಿಸಿದರು.

ಪಾನನಿರೋಧ ಧೋರಣ

ಕೆಲಪೊಮ್ಮೆ, ರಾಜಕಾರಣವು ವಿಧಾಯಕ ಕಾರ್ಯಗಳ ಮಾರ್ಗದಲ್ಲಿ ಆತಂಕವನ್ನೂ ಒದ್ದುತ್ತದೆ ಇದಕ್ಕೆ ಆಂಧ್ರದ ಉದಾಹರಣೆಯೇ ಸಾಕು. ಆಂಧ್ರ ವಿಧಾನ ಸಭೆಯಲ್ಲಿ ಮಂಗಡ ಸತ್ಯನಾರಾಯಣ ಶ್ರೀ ಪ್ರಕಾಶಂ ಮೈಸೂರು ಕೊರತೆಯನ್ನು ತುಂಬಿಕೊಳ್ಳುವ ಉದ್ದೇಶದಿಂದ ಪಾನನಿರೋಧ ಧೋರಣವನ್ನು ಪುನರ್ವಿಮರ್ಶಿಸುವ ನಿರ್ಧಾರವನ್ನು ಪ್ರಕಟಿಸಿದರು. ಶ್ರೀ ಎಸ್. ವಿ. ರಾಮಮೂರ್ತಿ (ಅಧ್ಯಕ್ಷ). ನ್ಯಾ. ಪಿ. ಸತ್ಯನಾರಾಯಣ ರಾವ್ ಮತ್ತು ಶ್ರೀ ಎನ್. ರಂಗನಾಥನ್ನರು ಈ ಪರೀಲನಾ ಸಮಿತಿಯಲ್ಲಿರುವರು. ಇನ್ನು ಮುಂದಿನ ೫ ಗಳ ನೇ ದಿನಾಂಕದೊಳಗೆ ತಮ್ಮ ವರದಿಯನ್ನು ಒಪ್ಪಿಸಬೇಕು. ಪಾನನಿರೋಧ ರದ್ದುಗೊಂಡರೆ ಆಂಧ್ರಕ್ಕೆ ಸುಮಾರು ಐದೂವರೆ ಕೋಟಿ ರೂಪಾಯಿಗಳು ಅಬಕಾರಿ ಸುಂಕದ ರೂಪದಲ್ಲಿ ಹೆಚ್ಚಾಗಿ ದೊರೆಯುತ್ತವೆ ಈ ಹಣದ ಮೋಹವೇ ಧೋರಣೆಯ ಪುನರ್ವಿಮರ್ಶೆಯ ಕುರಿತು ಆತುರ ವ್ಯಕ್ತಪಡಿಸಲು ಕಾರಣ. ಆದರೆ ಮದ್ರಾಸು ರಾಜ್ಯವು ಇಂಥ ಅನುಚಿತ ಕ್ರಮವನ್ನು ಕೈಗೊಳ್ಳವುದಿಲ್ಲೆಂದು ಮುಖ್ಯ ಮಂತ್ರಿ ರಾಜಾಜೀ ಅವರ ಹೇಳಿಕೆಯಿಂದ ವ್ಯಕ್ತವಾಗುತ್ತಿದೆ ಪಾನನಿರೋಧ ಧೋರಣೆಯನ್ನು ಯಶಸ್ವಿಗೊಳಿಸಲು ಎಲ್ಲ ವಿಧದಿಂದಲೂ ಪ್ರಯತ್ನಿಸಲಾಗುವುದೆಂದು ಪುನಃ ಹೇಳಿದ್ದಲ್ಲದೆ ಜನರಲ್ಲಿ ಪಾನನಿರೋಧದ ಬಗ್ಗೆ ಆಸ್ಥೆ ಹುಟ್ಟಿಸುವ ಕೆಲಸವೂ ನಡೆದರೆ ಹಿತವೆಂದರು

ಅನಾಸ್ಥೆಯ ಮಹತ್ವ

ಆಂಧ್ರದ ಸಾಂಪತ್ತಿಕ ಸ್ಥಿತಿಯು ಸಾಮಾನ್ಯವಾಗಿ ಅಶಾದಾಯಕವಾಗಿಯೇ ಇದೆ. ಸುಮಾರು ೫೧ ಲಕ್ಷ ರೂಪಾಯಿಗಳ ಕೊರತೆಯನ್ನು ಈ ಪ್ರಾಣ್ಯಾಸಿಕ ಮುಂಗಡ ಪತ್ರ ತೋರಿಸುತ್ತದೆ ಸರಕಾರದ ಕಡೆಯಿಂದ ರೈತರಿಗೆ ಕೆಲವು ಭರವಸೆಗಳೂ ದೊರೆತಿವೆ ಉಳಿಕೆಯ ಪುದ್ರಾಸು ರಾಜ್ಯದನ್ನು ಕೈಗಾರಿಕಾ ಕ್ಷೇತ್ರದಲ್ಲಿ ಮುಂದರಿಯದಿರುವ ಆಂಧ್ರಕ್ಕೆ ರೈತರೇ ನಿಜವಾದ ಸಂಪತ್ತು. ಮದ್ರಾಸಿದ ಬೊಕ್ಕಸಕ್ಕೆ ಮಾಸಾಂಟೆ ತೆರಿಗೆಯಿಂದಲೇ ಹೆಚ್ಚಿನ ಹಣ ಸೇರುತ್ತದೆ—ಈ ಸೌಲಭ್ಯವಿಲ್ಲದ ಆಂಧ್ರಕ್ಕೆ ಭೂಕಂದಾಯವೇ ಪ್ರಧಾನವಾದ ಆದಾಯವಾಗಿರುತ್ತದೆ ಈ ಆದಾಯವನ್ನು ಮಾಸಾಂತರ ಕಿಂತಿಗೊಳಿಸಲು ಸಾಧ್ಯವಿಲ್ಲದಿರುವುದೇ ಎಲ್ಲ ಅರ್ಥಶಾಸ್ತ್ರಜ್ಞರೂ ರಾಜಕಾರಣಿಗಳೂ ಪಾನನಿರೋಧಕ್ಕೆ ಪತ್ರ ಉದ್ಯಮದತ್ತ ಉದಾಸೀನತೆಯಿಂದ ನೋಡಲು ತಿಳಿಸಿ, ಅದನ್ನು ಕಿತ್ತೊಗೆಯಲು ಹಣ ಸಂಗ್ರಹಿಸಲು ಮನ ಮಾಡಿಯವರು. ಆಂಧ್ರ ರಾಜ್ಯ ನಿರ್ಮಾಣದ ವಿಷಯದಲ್ಲಿ ಪಂಡಿತ ತಯಾರಿಸಿದ ನ್ಯಾಯ ಮೂರ್ತಿ ವಾಂಛೂರವರು ಇದಕ್ಕೆ ಅನಾವಶ್ಯವಾದ ಮಹತ್ವ ಕೊಟ್ಟರು

ರಾಜಕೀಯ ಮತ ಭೇದ

ಈ ಮುಂಗಡ ಪತ್ರದ ಚರ್ಚೆಯ ಕಾಲಕ್ಕೆ ಆಂಧ್ರ ರಾಜಧಾನಿಯ ಪ್ರಶ್ನೆಯನ್ನು ಮರಳಿ ಎತ್ತುವ ಪ್ರಯತ್ನ ನಡೆಯಿತು. ಮುಖ್ಯವಾಗಿ ಕೃಷಿಕರ ಲೋಕ ಪಕ್ಷವು ಗಂಟಿಮರು—ವಿಜಯವಾಡಗಳೂ ರಾಜಧಾನಿಯಾಗಲಿ ಎಂಬ ತಮ್ಮ ಧೋರಣೆಗೆ ಜಂಜಿಕೊಂಡು ಕಾಂಗ್ರೆಸ್ಸಿನ ಬಹುಸಂಖ್ಯೆಯಿರುವ ಸರಕಾರ ತನ್ನ ಧೋರಣೆಯನ್ನು ಬದಲಾಯಿಸುವಂತೆ ಒತ್ತಾಸೆ ನೀಡಿತು. ಆದರೆ ಇದಕ್ಕೆ ಯಶ

[ಉಳಿದ ಸುದ್ದಿ ಪುಟ ೮ರಲ್ಲಿ]

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ಶಾಂತ ಸುತಾವರಣದಲ್ಲಿ ಅತ್ಯಾಧುನಿಕ ನೂರಾರು ಮೇಲ್ತರಗತಿಯ
—ಸತಿ ಮತ್ತು ಭೋಜನಗೃಹ—
ಸ್ಪೆಷಲ್ ಲೋಜ್
ಪಳನೀರು ರಸ್ತೆ, ಮಂಗಳೂರು.
ಈ ಸಾರಿ ಪಳಕೆಗಳಿಗೆ ಸುಸಜ್ಜಿತವಾದ ಏಸಿಗಲು ಸುತ್ತ ಮಲ್ಲರ್ ಕೋಣೆಗಳು!
ತೃಪ್ತಿಕರವಾದ ಸೇವೆ ಮತ್ತು ಸಹಾಸುತಾಪೆಕ್ಷೆ!
ರಾತ್ರಿಪಾಠಿಗಳಿಗೆ ಸುರಿಯ ಪ್ರಾಪ್ತಿಗೆ ಅವಿಗೆ ಭಟ್ಟಿಯಿಂದೇ ಭೋಜನ ಸುತ್ತ
ಉಪಾಹಾರ ತಯಾರಿ! ಮರೆ ಸುಲಭ! ಸುಪರಿಸಿ ಸೇವಾಧಾನ ಸವೆಯಿರಿ!!

(೫ನೇ ಪುಟದಿಂದ)

ಸ್ಸು ದೊರೆಯದ್ದರಿಂದ-ಕೃಷಿಕರ ಲೋಕ ಪಕ್ಷದ ಪ್ರತಿನಿಧಿಯಾಗಿ ಮುಂಶ್ರಿ ಮಂಡಳದಲ್ಲಿದ್ದ ಶ್ರೀ ಲಚ್ಚಣ್ಣನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಮಂತ್ರಿ ಮಂಡಳದಲ್ಲಿ ಪ್ರಜಾ ಸಮಾಜವಾದೀ ಪಕ್ಷದ ಸದಸ್ಯನೆಂದು ಪ್ರವೇಶಿಸಿದ್ದ ಶ್ರೀ ವಿಶ್ವನಾಥಯ್ಯನವರ ವಿರುದ್ಧ ದೊಡ್ಡ ಆಂದೋಲನವೇ ನಡೆದು ಕೊನೆಗೊಮ್ಮೆ ಅವರು ಆ ಪಕ್ಷಕ್ಕೆಯೇ ರಾಜೀನಾಮೆಕೊಟ್ಟು. ಮಂತ್ರಿ ಸ್ಥಾನವನ್ನು ಭದ್ರಪಡಿಸಿಕೊಂಡರು; ಮಾತ್ರವಲ್ಲ, ತಮ್ಮ ಅನುಯಾಯಿಗಳ ಗುಂಪಿನ ಬಲವನ್ನುಸಯೋಗಿಸಿ ಆಂಧ್ರ ಪ್ರಜಾಪಕ್ಷವೆಂಬ ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸಿದರು. ಹೀಗೆ ರಾಜಕೀಯ ಅನೈಕ್ಯ ಆಂಧ್ರ ರಾಜ್ಯದ ಪ್ರಗತಿಗೆ ಅಡ್ಡ ಮಾಡುತ್ತಿರುವುದು ನಿಜಕ್ಕೂ ಕೋಚನೀಯ.

ಕನ್ನಡಿಗರ ಕರ್ತವ್ಯ

ಕಚ್ಚಾಡುವುದರಲ್ಲಿಯೇ ನಾವು ಶ್ರೇಯಸ್ಸನ್ನು ಕಾಣುವ ಪಕ್ಷದಲ್ಲಿ – ಈಗ ನೇ ಮಕಗೊಂಡಿರುವ ಉಚ್ಚಾಧಿಕಾರದ ಆಯೋಗದಿಂದ ಸಪ್ಪಯೋಜನವನ್ನು ಹೊಂದುವುದು ಕಷ್ಟ. ಆಂಧ್ರರಾಜ್ಯ ನಿರ್ಮಾಣದ ಬಳಿಕ ಕರ್ನಾಟಕ ಏಕೀಕರಣದ ಪ್ರಶ್ನೆಗೆಯೇ ಪ್ರಾಶಸ್ತ್ಯ ಬರುತ್ತದೆಂದು ತಿಳಿದಿರುವ ಕನ್ನಡಿಗರಂತೂ ಐಕ್ಯ ಮತ್ಯನ್ನು ಸ್ವಬಲವಾಗಿ ಸಂಘಟಿಸಿಕೊಳ್ಳುವುದು! ಅತ್ಯಗತ್ಯ ಒಮ್ಮೆ ಅನಿತ್ವ ಕ್ಕೆ ಬಂದ ಬಳಿಕ ಕರ್ನಾಟಕದ ಪ್ರಶ್ನೆಯಾವುದೇ ರಾಜಕೀಯ ಅಡಚಣೆಗೆ ಗುರಿಯಾಗಕೂಡದು ಎಂಬ ಸಂಕಲ್ಪವನ್ನು ಮಾಡಿಕೊಂಡೇ ಇಂದಿನ ಸಿದ್ಧತೆಗಳು ನಡೆಯಬೇಕು. ಕರ್ನಾಟಕ ಪ್ರಾದೇಶಿಕಗಳನ್ನೆಲ್ಲ ಏಕೀಕರಿಸುವ ಧ್ಯೇಯವುಳ್ಳ ಹಲವು ಪಕ್ಷಗಳು ಆಗಾಗಲೇ ಹುಟ್ಟಿಕೊಂಡಿದ್ದರೂ — ಅವೆಲ್ಲವುಗಳಿಗಿಂತ ಪ್ರದೇಶ ಕಾಂಗ್ರೆಸ ಸಮಿತಿಗಳ, ಕೇಂದ್ರ ಪಾಗೂ ಶಾಸನ ಸಭಾ ಸದಸ್ಯರ, ಕನ್ನಡ ಸಾಹಿತ್ಯ ಪಾಗೂ ಸಂಶೋಧನ ಸಂಸ್ಥೆಗಳ ಕರ್ತವ್ಯ ಇಂದು ಗುರುತರವಾಗಿರುತ್ತದೆ. ಭಾಷೆ ಮತ್ತು ಸಂಸ್ಕೃತಿಗೆ ಸಾಕಷ್ಟು ಮಹತ್ವ ಕೊಡಬೇಕೆಂದು ರಾಷ್ಟ್ರಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ಪರಿಶೀಲಿಸುವ ಆಯೋಗಕ್ಕೆ ಹೇಳಿರುವುದೂ ಸೂಕ್ಷ್ಮ ತತ್ವಗಳನ್ನು ಮೊದಲು ವಿಚಾರಿಸಿ, ನಡುಗಾಲದ ಪರದಿಗಳನ್ನು ಒಪ್ಪಿಸಲು ಅವಕಾಶ ನೀಡಿರುವುದೂ ಕನ್ನಡಿಗರ ಆಶೋತ್ತರಗಳನ್ನು ಆಸ್ಪತ್ಯಕ್ಷವಾಗಿ ಪೋಷಿಸುತ್ತದೆ ಆದ ಕಾರಣ ಆಯೋಗದೊಡನೆ ಸಂಪೂರ್ಣ ಸಹಕಾರದಿಂದ ವರ್ತಿಸಿ, ಕನ್ನಡಿಗರೆಲ್ಲ ಒಕ್ಕಟ್ಟಿನಿಂದ ತಮ್ಮ ಪಕ್ಷವನ್ನು ಸಮರ್ಥವಾಗಿ ಪ್ರತಿಪಾದಿಸುವುದರಲ್ಲಿ ಈಗ ಉದ್ಯುಕ್ತರಾಗೋಣ. ಕಾಂಗ್ರೆಸಿನ ರಾಜಕೀಯ ಗತ್ತುಗಾರಿಕೆ ಇದೆಂದು ಅಸಂತೋಷ ಹೊಂದುವ ಬದಲು ಕೈಗೆ ಸಿಕ್ಕಿದ ಅವಕಾಶದ ಸದುಪಯೋಗ ಮಾಡಿಕೊಳ್ಳುವ ಕಡೆಗೆಯೇ ಗಮನ ಹರಿಸೋಣ!

ಶಿರ್ವ—ಸ್ಥಳೀಯ ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ಕಳೆದ ತಾ ೨೭ರಲ್ಲು ಶ್ರೀ ಎಸ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಿರ್ವದಲ್ಲಿ ಕುಷ್ಠರೋಗ ಆಸ್ಪತ್ರೆಯನ್ನು' ಬೇಗನೆ ತೆರೆಯುವಂತೆ ಸರಕಾರವನ್ನು ವಿನಂತಿಸಿ ಕೊಳ್ಳುವ ನಿರ್ಣಯವಾಗಿ ಕೆಲವು ಕಾಮಗಾರಿಕೆಗಳಿಗೆ ಹಣ ಮಂಜೂರು ಮಾಡಲಾಯಿತು.

ಮೂಲ್ಕಿ—ಈ ಕೇಂದ್ರದ ಉಪಧ್ಯಾಯ ಸಂಘಕ್ಕೆ ಸಂಯೋಜಿತವಾದ ಶಾಲೆಗಳ ಮುಕ್ಕಳ ಸಂಯುಕ್ತ ಆಟಪಟ ಹಬ್ಬವು ಕಳೆದ ತಿಂಗಳ ತಾ 19ರಲ್ಲು ಸ್ಥಳೀಯ ಗವರ್ನಮೆಂಟ್ ಹ್ಯಾಸ್ಕೂಲ್ ಪೆಡ್ಯಾಸ್ಟರ್ ಶ್ರೀ ಕೆ. ವಿಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಕಾರ್ಯ ಕ್ರಮಗಳಾದುವು.

ಕಾರ್ಕಳ—ಸ್ಥಳೀಯ ಜ್ಯೆಹಿಂದ್ ಸಿನೇಮಾ ಮಂದಿರದಲ್ಲಿ ಕಳೆದ ತಾ 26ರಲ್ಲು ರಾತ್ರಿ ಹಾ। ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಉಡುಪಿಯ ಎಸ್ಸೆಲ್ ಮತ್ತು ಗೆಳೆಯರು, ಕಾರ್ಕಳ ಶ್ರೀ ಅನಂತಪದ್ಮನಾಭ ದೇವಸ್ಥಾನದ ಜೀರ್ಣೋದ್ಧಾರದ ಸಹಾಯಾರ್ಥ "ಬಬ್ರುವಾಹನ" ಎಂಬ ನಾಟಕವನ್ನು ಅಭಿನಯಿಸಿದರು. ಸಾಧಾರಣ ಎರಡು ಸಾವಿರ ರೂಪಾಯಿ ಗಳಿಗೂ ಮಿಕ್ಕಿ ಹಣ ಸಂಗ್ರಹವಾಗಿರುವುದೆಂದು ತಿಳಿದು ಬರುತ್ತದೆ.

ಮುಲ್ಕಿ—ದ. ಕ. ಜಿಲ್ಲಾ ಫಿಶರೀಸ್ ಶಾಲಾ ಮಾಸ್ತರುಗಳ ಯೂನಿಯನ್ ಮಹಾ ಸಭೆಯು ಕಳೆದ ತಾ 29ರಲ್ಲು ಮಲ್ಪೆ ಫಿಶರೀಸ್ ಹೈಸ್ಕೂಲಿನಲ್ಲಿ ಶ್ರೀ ಎಸ್. ಡಿ. ಕೆಮ್ಮಾರು, ರಿಟಾಯರ್ಡ್ ಅಸಿಸ್ಟಾಂಟ್ ಡೈರೆಕ್ಟರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರುಷಕ್ಕೆ ಶ್ರೀಮತಿ ಸಾರಾ ಎಸ್. ಅಮಿನ್ (ಅಧ್ಯಕ್ಷೆ), ಶ್ರೀಗೋಪಾದ ಎ. ಸುಬ್ರಾಯ ಆಲ್ಸೆ ಮತ್ತು ಕೆ. ವಿ. ಮೂರ್ತಿ (ಜತೆ ಕಾರ್ಯದರ್ಶಿಗಳನ್ನು) ಯನ್ನರು ಆರಿಸಲ್ಪಟ್ಟರು.

ಕೊಡವೂರು:—ಇಲ್ಲಿಯ ಶ್ರೀ ಶಂಕರ ನಾರಾಯಣ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯತಕ್ಕ ಕಾಲಾವಧಿ ಉತ್ಸವವು ಇಂದೆ ತಾ 16ರಲ್ಲು ಪ್ರಾರಂಭ ನಾಗಿ ತಾ 18ರಲ್ಲು ಮಹಾರಥೋತ್ಸವಾದಿ ಕಾರ್ಯಕ್ರಮ ಗಳಿಂದ ಜರಗಲಿದ್ದು ಭಕ್ತಾದಿಗಳು ಬಂದು ಶ್ರೀ ಮುಡಿಗಂಧ ಪ್ರಸಾದ ಸ್ವೀಕರಿಸ ಬೇಕಾಗಿ ಆಡಳ್ತೆ ಮೊಕ್ತೇಸರ ರಾ। ಕೆ. ಎಲ್. ಐತಾಳರು ವಿನಂತಿಸಿ ಪ್ತಾರೆ.

ಸುರತ್ಕಲ್:—ಸ್ಥಳೀಯ ವಿದ್ಯಾದಾಯಿನಿ ಹೈಸ್ಕೂಲಿನ ನಧರಂತಿ ಸಮಾರಂಭವು ಈ ಬೆಗೆ ದಕ್ಷಿಣ ರೈಲ್ವೆಯ ಟಿಲ್ಲಾ ಇಂಜಿನಿಯರ್ ಶ್ರೀ ಎಸ್. ಸುಬ್ರಹ್ಮಣ್ಯಂ ನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಜಯಲಕ್ಷ್ಮಿ ಸುಬ್ರಹ್ಮಣ್ಯಂ ನವರು ಬಹುಮಾನ ವಿತರಣೆ ಮಾಡಿದರು. ಈ ಶಾಲೆಯ ಹಳೆ ವಿದ್ಯಾರ್ಥಿ ಸಂಸ್ಥದ ದಿನಾಚರಣೆಯು ಶ್ರೀ ವಿ. ಎಸ್. ಕುದ್ವರ ಅಧ್ಯಕ್ಷತೆಯಲ್ಲಾ ಜರಗಿತು.

ಕಾಸರ ಗೋಡು:—ಈ ತಾಲೂಕಿನ ಬೋರ್ಡು ಪ್ರಾಥಮಿಕ ಶಾಲಾ ಉಪಾಧ್ಯಾಪಕರ ಯೂನಿಯನ್ ಕಾರ್ಯ ಕಾರೀಸಮಿತಿ ಸಭೆಯು ಶ್ರೀ ಪಿ. ಶಿವರಾಯರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿತು. ಉಪಾಧ್ಯಾಯರ ಕೇಳಿಕೆಗಳನ್ನೊಳಗೊಂಡ ನಿವೇದನಾ ಪತ್ರವೊಂದನ್ನು ಮುಖ್ಯ ಮಂತ್ರಿಗಳಿಗೆ ಕಳುಹಿಸುವ ನಿರ್ಧಾರ ಪಾಯಿತು.

ಕಲ್ಲಡ್ಕ—ಸ್ಥಳೀಯ ಬೋರ್ಡು ಹಾಗೂ ಎಲಿಶಾಲೆಯ ಹಳೆ ವಿದ್ಯಾರ್ಥಿ ಸಂಘದ ವರ್ಷಂತ್ಯುತ್ಸವವು ಕಳೆದ ತಾ 27ರಲ್ಲು ಸಂಜೆ ಹಾ। ಎಮ್. ಎಸ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನ, ಬಹುಮಾನ ವಿತರಣೆ, ಹಿತಚಿಂತಕರ ಭಾಷಣ ಮೊದಲಾದ ಕಾರ್ಯಕ್ರಮಗಳಾದ ನಂತರ "ಶ್ರೀ ಮಹಿಜಯ" ನಾಟಕ ಮೊದಲಾದ ವಿನೋದಾವಳಿಗಳಾದುವು.

ಬೇಳೂರು—ಕುಂದಾಪುರ ತಾಲೂಕಿನ ಅತಿದೊಡ್ಡ ಗ್ರಾಮವಾಗಿದ್ದು, ವರ್ಷಕ್ಕೆ ರೂ 9000/– ಮಿಕ್ಕಿ ತೀರ್ವೆಯನ್ನು ಸರಕಾರಕ್ಕೆ ಸಲ್ಲಿಸುತ್ತ ಬರುವ ಈ ಬೇಳೂರು ಗ್ರಾಮಸ್ಥಕ್ಕೆ ಬಳ್ಳಿಯ ಮಾರ್ಗವಾಗಲಿ, ಟಿಪ್ಪಾಲು ಕಟ್ಟೆಯ ಅನುಕೂಲತೆಯಾಗಲೀ, ಪಂಚಾಯತ ಬೋರ್ಡಿನ ಸಾಕಯರ್ಯವಾಗಲಿ ಯಾವುದೊಂದು ಇಲ್ಲದಿರುವುದರಿಂದ ಸದ್ರಿ ಗ್ರಾಮವು ಕಡಿಕೆ ತಕ್ಕ ನಿಗಾ ಕೊಟ್ಟು ಗ್ರಾಮದ ಪುನರುಜ್ಜೀವನಕ್ಕೆ ಸಂಘಂಗಟ್ಟು ಇಲಾಖೆಯನರು ನೆರವಾಗ ಬೇಕಾಗಿ ಗ್ರಾಮಸ್ಥರೊಬ್ಬರು ಬರೆಯುತ್ತಾರೆ.

'ಮಧು' (ರಿಜಿಸ್ಟರ್ಡ್) ನುಂಗಳೂರು ನಕ್ಯ.

ಇದು ಉತ್ತಮವಾದುದು ಮತ್ತು ಜನಪ್ರೀಯವಾದುದು.

ಇದು 'ನುಧು ಪ್ರೊಡಕ್ಟ್ಸ್' ಉದಿಯಾನರ, ದ. ಕ.

ಇವರ ಉತ್ಕೃಷ್ಟ ತಯಾರಿಕೆ.

ಶಾಕೆ:- ಉಡುಪಿ ಮುನ್ಸಿಪಲ್ ಬಸ್ಸ್ ಸ್ಟಾಂಡಿನ ಎದುರುಗಡೆ.

ಪರಊರುಗಳ ಬೇಡಿಕೆಗಳಿಗೆ ವಿಶೇಷ ಗಮನ ಕೊಡಲಾಗುವುದು.

ಚ್ಯವನಪ್ರಾಶ

ಹಿಸೂಲಯದ ಉತ್ಕೃಷ್ಟ ಗಿದಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯೌಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮ ಕಾರಿಯಾಮದುದು. ಎಳೆ ಮಕ್ಕಳನ್ನೂ ಗರ್ಭಿಣಿಬ್ಬಾಗಿಯೂ ಆರೋಗ್ಯವಂತರಾಗಿಯೂ ಇರಗೊದಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋದಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ದೆಹರಾದನ್)

Kali Kamali Ayurved Pharmacy, RISHIKESH (Dehradun.)

ಪಾತ್ರಿ ಚಿನ್ನಡ ನೆಕ್‌ಲೇಸ್ ತರಹೆವಾರು ಚೈಸುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಕಾರತ.

ಫೋನು ನಂಬ್ರ 66

ONLY FOR Rs. 14/6

Beautiful Wrist Watch, Gtd. 3 years.

Size 10½ No. 5

4 Jewels Chrome 14/6 Rolled gold 18/-
15 Jewels chrome 30/-Rolled gold 32/8
15 „ Waterproof 35/- 17 Jewels 40/-
Pocket Watch 12/- Time Piece 15/-
N. B.— Only one watch can be sent to one man. Catalogue Free.

FREE INDIA WATCH CO. H.K.
Post Bag No. 6724, CALCUTTA-7.

ಋತುಸ್ರಾವ ನಿಂತಿತು

"ಕಾಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿನೆಸ್ಸು ಋತುಸ್ರಾವವಾಗುವುದು, ಹಸಿರಾಗಿ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಪಾತ್ರಿ ಗುಣವಾಗಿವೆ– ಬೆಲೆ: ರೂ. 3/–; ಸ್ಪೆಶ್ಯಲ್ ರೂ. 6– ಅಧಿಕಾಧಿಕ ಸ್ಪೆಶ್ಯಲ್ ರೂ. 8–[ವಿ. ಪಿ. ಹನ್ನೆರೆಹಾಕ ಪ್ರತ್ಯೇಕ]

Mrs. P. DEVEE, F.O.S.(N.J.)
CALCUTTA. 40

ಸ್ಟಾ ಕಿಸ್ಟರು: ತಹಾಕರಪೆನ್ಸ್, ಮಂಗಳೂರು.

ಮುಖ್ಯ ಸೂಚನೆ

"ಆನಂದ ಸುಧ" ನಮ್ಮ ಆನಂದ ಸುಧ ಸುಸ್ತ ಜನಗಳಿಗೆ ಬಲವನ್ನು ಬಂದೆ ಪುಷ್ಟಿಯನ್ನು ಕಲಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ೮ ಔ. ಸೀಸೆ ೧ಕ್ಕೆ ರೂ. ೫– ೦—೦.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಯಪು ಜೋಸಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕರುಣಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಡಿಸಧಿ ರೂ. ೩—೦ .–0.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಬ್ಬಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ನಚ್ಚಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿಕಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ವೀರಪಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತಿದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—೦—೦.

ಹೆಡ್ಡಾಫೀಸ್:

ಶ್ರೀನಾವ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-೨.

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಗಳೂ ರಿಯಿಂ ಆಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಲಂಜೆ ಜ್ಯಾಸಾಚಾರ್ಯ
ರಥಬೀದಿ ಉಡುಪಿ.

ಮಂಗಳೂರು

ನಗರ ಸಭೆಯು—ಕಳೆದ ತಾ. 26 ರಲ್ಲು ಚೇರ್‌ಮೆನ್ ಶ್ರೀ ಕೆ. ಎಸ್. ಆಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಕೋಣಗಳ ಮೇಲಿನ ತೆರಿಗೆಯನ್ನು ತೆಗೆದು ಹಾಕಬೇಕೆಂಬ ಕಮೊರ್ಷಿಯರ ಸೂಚನೆಯನ್ನೂ ಆರ್ಥಿಕ ಸಮಿತಿಯು ಪರ್ಯಾಲೋಚಿಸಿ ಕೋಣಗಳ ತೆರಿಗೆಯಿರಬೇಕೆಂದೂ; ಆದು ಪಂದಿಗಳಿಗೆ ತೆರಿಗೆ ಹಾಕಬೇಕೆಂದೂ ನಿರ್ಣಯ ಮಾಡುವರ ಕುರಿತು ಚರ್ಚೆಯಾಗಿ ಮತ ತೆಗೆಯಲು ಆರ್ಥಿಕ ಸಮಿತಿಯ ವಿರೋಧವಾಗಿ ಜಾಸ್ತಿ ಮತಗಳು ದೊರೆತು ಆ ಎರಡು ಸೂಚನೆಗಳು ಬಿದ್ದು ಹೋದವು. ನಗರ ಸಭಾ ಕ್ಷೇತ್ರದಿಂದ ಸಂಸ್ಕೃತ ಪ್ರವಾಸಿನ ಪುಸ್ತಕ ಭಂಡಾರ ತೆರಿಗೆಯನ್ನು ಆಯಾಯಾ ನಗರ ಸಭೆಗಳಿಗೆ ಕೊಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ವಾರ್ಷಿಕೋತ್ಸವ— ಮಂಗಳೂರು ಸ್ಥಾನೀಕ ಹಿಂದೀ ಪ್ರಚಾರ ಸಮಿತಿಯ ವಾರ್ಷಿಕೋತ್ಸವವು ಕಳೆದ ತಾ. 28 ರಲ್ಲು ಶ್ರೀ ಕೆ. ಎಸ್. ಬೆಸ್ಕೆ ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಕೇಶವರಾಯರ ಸ್ವಾಗತ ಭಾಷಣ, ಶ್ರೀ ಶ್ರೀಧರ ಭಟ್ಟರಿಂದ ಸರದಿ ಪಾಚನಗಳಾದುವು. ಬಳಿಕ ಶ್ರೀ ರತ್ನಾಕರ ಕಾಮತರು ಅಭಿ ಭಾಷಣ ಮಾಡುತ್ತ ನಾವು ನಮ್ಮ ಭಾಷೆ, ಸಂಸ್ಕೃತಿಗಳ ಕಡೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂದರು. ಅಸ್ಪೃಶ್ಯತೆ ತಮ್ಮ ಭಾಷಣವಲ್ಲಿ ಎಲ್ಲಿಯೂ ಹಿಂದು ಕಲಿಯಬೇಕೆಂದೂ ಹಿಂದಿಯಿಂದ ಪ್ರಾಪಂಚಿಕ ಭಾಷೆಗಳಿಗೆ ತೊಂದರೆಯಿಲ್ಲವೆಂದೂ ತಿಳಿಸಿದರು. ಪ. ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ನರಿಗೆ ಪ್ರಮಾಣ ಪತ್ರಗಳನ್ನು ಶ್ರೀ ಬಿ. ರಾಘವ ಬಾಳಿಗರು ಆವೇ ದಿನ ಬೆಳಿಗ್ಗೆ ವಿತರಣೆ ಮಾಡಿದರು. ಶ್ರೀ ಎಮ್. ಡಿ. ಆಧಿಕಾರಿಗಳು ಆಭಿಭಾಷಣ ಮಂಡಿಸಿದರು.

ವಾರ್ಷಿಕ ಮಹಾಸಭೆ— ಹಿಂದುಳಿದ ನಗರಗಳ ಸಂಘದ ವಾರ್ಷಿಕ ಮಹಾ ಸಭೆಯು ಕಳೆದ ತಾ 27ರಲ್ಲು ಶ್ರೀ ಕೆ. ರಾಮು ನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಜೀವಜ್ಞನವರು ನರದಿಯನ್ನು ಓದಿದರು. ಶ್ರೀ ಎಸ್. ಎನ್. ಸುವರ್ಣರು ಸಂಘದ ಧ್ಯೇಯೆ ಯಸ್ಸನ್ನು ಸಭೆಯ ಮುಂದಿಟ್ಟರು. ಶ್ರೀಗಳಾದ ಸೀತಾರಾಮ ರಾವ್ ಮತ್ತು ಎ. ಕೆ. ಸೇವಕ ರು. ಕೆಲವು ಹಿತ ಸೂಚನೆಗಳನ್ನಿತ್ತರು. ನಂತರ ಕಾರ್ಯಕಾರೀ ಸಮಿತಿ ರಚನೆಯಾಗಿ ಶ್ರೀಗಳಾದ ಯು. ಕುಮಾರಯ್ಯ ಅಧ್ಯಕ್ಷರಾಗಿ ಯೂ ಕೆ. ರಾಮು ಸೆಟ್ಟಿ ಬಿ. ಕೆ. ಮಂಜುನಾಥ ಉಪಾಧ್ಯಕ್ಷರಾಗಿಯೂ, ಎನ್. ಎನ್. ಸುವರ್ಣರು ಪ್ರಧಾನ ಕಾರ್ಯದರ್ಶಿಯಾಗಿಯೂ, ಕೆ. ದೇವಪ್ಪ ಮತ್ತು ಎ. ಕೆ. ಸೇವಕ ರು ಜತ ಕಾರ್ಯದರ್ಶಿಗಳಾಗಿಯೂ, ಮಾಧವ ಸುವರ್ಣರು ಖಜಾನ್ಚಿಯರಾಗಿಯೂ ಆರಿ ಸಲ್ಪಟ್ಟರು.

ಜನ್ಮ ದಿನೋತ್ಸವ—ಶ್ರೀ ರಾಮಕೃಷ್ಣ ಪರಮಹಂಸರ ಜನ್ಮ ದಿನೋತ್ಸವವು ಶ್ರೀ ರಾಮಕೃಷ್ಣ ಮಠದಲ್ಲಿ ಇದೇ ತಾ 1ರಲ್ಲು ಮೈಸೂರಿನ ಸ್ವಾಮಿ ಸೋಮನಾಥಾನಂದಜೀ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಅಶ್ರಮದ ಬಾಲಕರಿಂದ ಭಾರತಿ ಸಾತೆವಾದ ಬಳಿಕ ಶ್ರೀ ಬಿ. ರಾಘವ ಬಾಳಿಗರು ಮಾತನಾಡುತ್ತಾ ಪರಮಹಂಸರು ಹಿಂದೂ ಧರ್ಮದ ಮಹಾ ಭಾಷ್ಯಕಾರರೆಂದೂ ಸಾಮಾನ್ಯರಿಗೆ ತಿಳಿಯು ವಂತೆ ಧರ್ಮೋಪದೇಶ ಮಾಡಿದ್ದೇ ಅವರ ಘನತೆಯೆಂದೂ ಹೇಳಿದರು. ಶ್ರೀ ಕೆ. ಕೆ. ಭೈರ ಳು ಮಾತನಾಡುತ್ತ ಭಕ್ತಿ ಮಾರ್ಗದ ಮುನ್ನೋಟ ವು ವೇದದಿಂದ ತೊಡಗಿ ಪರಮಹಂಸರ ವರೆಗೆ ಬೆಳೆದುಬಂದುದನ್ನು ತಿಳಿಸಿ ಈಗ ದ್ವೇಷದ ಬಂ ಜರು ಭೂಮಿಯಲ್ಲಿ ಭಕ್ತಿಯ ಸಂವಾಹಿನಿಯು ಹರಿಯುವಂತೆ ಮಾಡಿದ ರಾಮಕೃಷ್ಣ ಪುಠವ ಯತಿಗಳನ್ನೂ ಆಭಿನಂದಿಸಿದರು. ಬಳಿಕ ಮೈ ಸೂರಿನ ಶ್ರೀ ಕೆ. ಪಿ. ರಾಘವಾಚಾರ್ಯರು ಮಾತನಾಡುತ್ತ ಬುದ್ಧಿ ಬಲಕ್ಕಿಂತ ಹೃದಯ ಬಲವೇ ಮುಖ್ಯವೆಂದೂ ಕಣ್ಣಿನಿಂದ ನೋಡಿ ಹೃದಯದಿಂದ ತಿಳಿದ ಭಗವಜ್ ಕೃಪೆ ಗಳಿ ಸಿ ಜೀಕೆಂದೂ ಇಂದಿನ ಸಮಾರಂಭದಿಂದ ಒಂದು ಚೀಸಿಯು ನುಯ ಮಾದರಿ ಪರಸು ಜೆಂಸರೆ ಅವರಿಗೆ ಸಾರ್ಥಕ ನಾಮಿತೆಂದರು. ಶ್ರೀ ಎಮ್. ನಾಸು ಜೀವ ರಾಯರು ಸೂತ ನಾನಿದರು. ಅಧ್ಯಕ್ಷರು ಸೂತನಾಡುತ್ತಾ ವರೆ ಸು ಸಂಸರೆ ತತ್ವವೆ ಪರಿಸೂರ್ಣ ವಾಮವೆಂದರು. ಶ್ರೀ ಪಿ. ಆರ್. ಪೂಜರು ಧನ್ಯವಾದ ಗಳನ್ನರ್ಪಿಸಿದ ನಂತರ, ಮಂಗಳಾರತಿ, ಪ್ರ ಸಾದ ವಿನರಣೆ ಯೊಂದಿಗೆ ಸಭೆಯು ಮುಕ್ತಾ ಯ ವಾಯಿತು.

ಕರ್ನಾಟಕ ಚೇಂಬರ್ ಆಫ್ ಎಗ್ರಿಕಲ್ಚರ್—ಇವರ ಕಾರ್ಯ ನಿರ್ವಾಹಕ ಮಂಡಲಿಯ ಸಭೆಯು ಇತ್ತೀಚೆಗೆ ಸೇರಿ ಮ ದ್ರಾಸಿನ ಮುಖ್ಯ ಮಂತ್ರಿ ಶ್ರೀ ರಾಜಗೋಪಾ ಲಾಚಾರಿಯವರು ಕೃಷಿಕರ ಬಗ್ಗೆ ಆಗಾಗ್ಗೆ ಹಾಸು ಮಾಡಿದ ನಿಯಮಗಳಿಗಾಗಿ ಆವರನ್ನು ಆಭಿನಂದಿಸಿ ಆವರ ನಾಯಕತ್ವದಲ್ಲಿ ಆಚಲ ಭಕ್ತಿಯನ್ನು ಪ್ರದರ್ಶಿಸಿತು ಅಲ್ಲದೆ ಆವರ ಮುಖಂಡತ್ವವನ್ನು ತೆಗೆಯುವ ಕುಪಕ ಘೋ ರಣೆಯನ್ನು ನಿಜೇಧಿಸಿತು. ಕೃಷಿಕರ ಹಿತ ರಕ್ಷ ಣೆಗಾಗಿ ಮದ್ರಾಸು ಸರಕಾರವು ಹೊರಡಿಸಿದ ಆರ್ಡಿನೆನ್ಸು ಸ್ವಾಗತಾರ್ಹವಾದರೂ, ಈ ಜೆಲ್ಲೆ ಯ ಪುಟ್ಟಿಗೆ ಆವು ಅನಗತ್ಯವೆಂದು ಸಭೆಯು ಆಭಿಪ್ರಾಯ ಪಟ್ಟಿತು. ಒಂದು ವೇಳೆ ಮ. ಕ. ಪೆಟ್ಟಿಗೆ ಈ ಆರ್ಡಿನೆನ್ಸು ಆನ್ವಯಿಸುವ ನಂದ ಳೆದಲ್ಲಿ ನಿಜವಾದ ಕೃಷಿಕರಾರು ಎಂಬುದರ ಸ್ಪಷ್ಟೀಕರಣವಾಗಿ ತಕ್ಕ ಪೆಂದೂ, ಒಂದು ಸಾ ರು ರೂಪಾಯಿ ಮೌಲ್ಯದ ಇನ್‌ಕಮ್ ಟೆಕ್ಸ್ ಆಧಾರ ತೀರ್ಪೆ ಕೊಡುವವರೆಗೂ ಈ ಆ ರ್ಡಿನೆನ್ಸಿನಿಂದ ವಿನಿತ ಗೊಳಿಸಬೇಕೆಂದು ಸ ರಕಾರವನ್ನು ವಿನಂತಿಸುವ ನಿರ್ಣಯವಾಯಿ ತು. ನಿಯಮಿತ ಅವಧಿಯಲ್ಲಿ ಕೃಷಿ ಮಾಡಿ ಭೂಮಿಯನ್ನು ಪಲ ಪ್ರದವಾಗಿ ಮಾಡುತ್ತೇ ವೆಂದು ಭರವಸೆ ಕೊಡತಕ್ಕವರಿಗೇನೇ ಸರಕಾ ರಿ ಭೂಮಿಯನ್ನು ಕೊಡಬೇಕೆನ್ನುವ ಸರಕಾರಿ ಕಾಡುಗಳನ್ನು ಸುರಕ್ಷಿತವಾಗಿರಿಸಲು ತಕ್ಕ ನಿಗಾ ತೆಗೆವು ಕೊಳ್ಳಬೇಕೆನ್ನುವ ರೆಂದೂ ಕೂಡಾ ಆವಶ್ಯ.

ಶ್ರೀ ಶಾರದಾ ದೇವಿಯವರ ಜನ್ಮ ದಿನೋತ್ಸವವು— ಇದೇ ತಾ. 3ರಲ್ಲು ಆ ಪರಾನ್ಹೆ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಜರ ಗಿತು. ಮೈಸೂರಿನ ಶ್ರೀಮತಿ ಜೊಕ್ಕಮ್ಮ ಮತ್ತು ಪಾರ್ಟಿಯವರ ಸಂಗೀತ ಕಚೇರಿ ನ ಡೆಯಿತು, ಸಂಜೆ ಬೆಂಗಳೂರಿನ ಶ್ರೀಮತಿ ಲಕ್ಷ್ಮಿಕ್ಕಳ್ಳಿಪ್ಪನವರ ಆಧ್ಯಕ್ಷತೆಯಲ್ಲಿ ಸಾ ರ್ವಜನಿಕ ಸಭೆ ಜರಗಿತು. ಶ್ರೀಮತಿ ಲೀಲಾ ಬಾಜಿ ಸಂಕಾಂಬರೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿಯರಾದ ಮೈಸೂರಿನ ರತ್ನಮ್ಮ, ಮಂಗಳೂರಿನ ಪದ್ಮಲಾ ಪಾಳೆತ್ತಾ ಯ ಮೊದಲಾದವರು ಸತಿ ಶ್ರೀ ಶಾರದಾ ದೇ ವಿಯರ ಜೀವನ ಧ್ಯೇಯಗಳನ್ನು ವಿವರಿಸಿ ಭಾ ಷಣಿಸಿದರು. ಶ್ರೀಮತಿ ಪಾರ್ವತಿ ಆರ್. ಪೂಂಜರು ವಂದನೆಗಳನ್ನರ್ಪಿಸಿದರು.

ವಿರೋಧ ಸೂಚಕ ಸಭೆ—ಸ್ಥಳೀಯ ಭಾರತೀಯ ಜನಸಂಘದ ಆಧ್ರಯದಲ್ಲಿ ಶ್ರೀ ಎಸ್. ನಾಗರಾಜಯ್ಯನವರ ಅಧ್ಯಕ್ಷತೆ ಯಲ್ಲಿ ಇದೇ ತಾ 3ರಂದು ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಕೊರಗಪ್ಪ ನುಣ್ಣಗ, ಕೆ. ರಾಮು ಭಟ್ಟ, ಪ್ರಭಾಕರ ಭಾಟೆ ಆವರು ಪಾಕ್-ಅಮೇರಿಕಾ ಒಪ್ಪಂದದಿಂದ ಭಾರತಕ್ಕೂ ಇಂಡಿ ದಿಸ್ತಾನಕ್ಕೂ ಬರುವ ಗಂಡಾಂತರ, ಆವನ್ನು ಒಕ್ಕೊಟ್ಟಿನಿಂದ ಎದುರಿಸುವ ಭಾರತೀ ಯರ ಮತ್ತು ಭಾರತದ ಕರ್ತವ್ಯದ ಕುರಿತು ಭಾಷಣ ಮಾಡಿದರು. ಪಾಕ್ ಅಮೇರಿಕಾ ಒ ಪ್ಪಂದಕ್ಕೆ ವಿರೋಧ ಸೂಚಿಸುವ ಅರ್ಜಿಯನ್ನು ನಿರ್ಣಯಗಳಾದುವು.

ಗ್ರಾಮ ವೈದ್ಯ ಸಮ್ಮೇಳನ—ಕರ್ನಾಟಕ ಸುತ್ತಲ ಕೆರೆಗೆ ಬ್ರಾಂಚಿಯು ವಿಜೇ ಜ ವೈದ್ಯ ಸಂಘದ ಸುವರ್ಣಮಹೋತ್ಸವ ತಾ 2ರಲ್ಲು ಶ್ರೀ ವಾಮನ ಕೊಡಿಯಲಬೈಲು, ಆ ವರ ಅಧ್ಯಕ್ಷತೆ ಯಲ್ಲಿ ಜರಗಿತು. ಕಾರ್ಯ ಕಾರೀ ಮಂಡಳಿಗೆ ಹೊಸ ಸದಸ್ಯರ ಚುನಾವ ಣೆ ನಡೆಯಿತು. ಸುಶ್ರಾವ್ಯ ಚಾ ಎಸ್. ಎ ಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ವೈದ್ಯರ ಸಹ ಭೋಜನಕೂಟ ಜರಗಿತು. ವೈದ್ಯರುಗಳು ಎ ಸ್. ಆರ್. ಪೈ. ಸುತ್ತು ಶ್ರೀ ಎಸ್. ಲಕ್ಷ್ಮಿನಾರಾಯಣ ಮೂರ್ತಾಯ್ತ ವೈದ್ಯರೆಲ್ಲರು ತಮ್ಮ ಸಕ್ಕು ಪ್ರಾಧ್ಯತೆ ಗಳಿಗಾಗಿ ಒಗ್ಗಟ್ಟಾಗಿ ಬೇಕೆಂದು ಕೇಳಿ ಕೊಂಡರು. ಸರಕಾರೀ ತದ ಬೇತಿ ಪೊಂದಿದ ಗ್ರಾಮವೈದ್ಯರಿಗೆ ೪೦ ರೂ. ಗಿಂತ ಹೆಚ್ಚಿನ ವಿಜಿಸ್ಟೇರನ್ ಕೊಡಬೇಕು ಮತ್ತು ಆವರನ್ನು ಗ್ರಾಮ ವೈದ್ಯಾಲಯಗಳ ನೈಸ್ಥಾ ಪಾ ನೇ ಸಿಸ ಬೇಕು ಎಂದು ಸರಕಾ ರವನ್ನು ಕೇಳಿ ಕೊಳ್ಳುವ ನಿರ್ಣಯ ಪಾಯಿ ತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವೈದ್ಯಾ ಕ ವೃತ್ತಿ ಮತ್ತು ಜನಪರ ದೃಷ್ಟಿಯಿಂದ ಆ ಯುರ್ವೇದವನ್ನು ಆಧುನಿಕ ಚಿಕಿತ್ಸೆಯನ್ನು ಬೆಳೆಸಲು ಎರಡೂ ಆವಶ್ಯಕವೆಂದೂ ಪ್ರತ್ಯೇಕ ಆಯೋಜನೆ ಆಗುವುದೆಂದೂ.

ಭಾರತ ರಾಷ್ಟ್ರೀಯ ಕಾಂಗ್ರೇಸಿನ ಪ್ರತಿನಿಧಿ ಉಪ ಚುನಾವಣೆ—ಮ. ಕ. ಪೆಟ್ಟಿಯಲ್ಲಿ ಖಾಲಿ ಯಾಗಿರುವ ಸಂ ಕಾರಿನ ಕಾಂಗ್ರೇಸ್ ಪ್ರತಿನಿಧಿ ಸ್ಥಾನಕ್ಕಾ ಯಿ ಉಪಚುನಾವಣೆಯು ನಡೆ ಯಲಿರುತ್ತದೆ. ಇದೇ ತಾ 6ನೇ ನಾಮಪತ್ರ ಸ್ವೀಕಾರ, ಆವರಾವ್ಯ ಸಂ ಪೀಲನೆ, 7ನೇ ಆಧೀಲು ಇತ್ತರೆ ಆಧೀಲು ಮಾಡುವುದು 8ನೇ ಆಧೀಲು ತೀರ್ಮಾನ, 9ನೇ ನಾಮ ಪತ್ರ ಹಿಂತೆಗೆಯುವಿಕೆ. ತಾ 16 ರಲ್ಲು ಮಾರ್ಚ್ನ 9ರಿಂದ ಸಂ ಜೆ 5ಗಂಟೆ ತನಕ ಮತ ಪಾರ, ತಾ 17ನೇ ಆವಾವ್ಯ ಗಂಟೆ 1ಕ್ಕೆ ಮತ ಗಳ ಎಣಿಕೆ ಮತ್ತು ಫಲಿ ಪಾಂತ ಪ್ರಕಟಣೆ.

ನಾಮಕರಣ ಫೀಸು ರೂ 5 - ಜಾಮೀನಿಗೆ ವಿಧಾನಪರಿ ಸಭೆ ರೂ10 - ಲೋಕ ಸಭೆ ರೂ15/-ಸ್ಕ್ಕು ಉ ಮೇದ್ವಾರರು ನಾಮ ಪತ್ರ ಹಿಂಪಡೆ ಕೊಡಿಸಿದ ಕ್ಷಣವೆ ನಾಮ ಪತ್ರ ಪ್ರಕಾ ಸುತ್ತು ಸುತ ಗಳ ಪೈಕಿ ಮಂಗಳೂರು ಬಾಟಿ ನುತ್ತಿರುವ ಕಾಂಗ್ರೇಸ್ ಕಚೇರಿಯಲ್ಲಿ ನಮೆಯು ಶುರು.

ಟೆಂಡರು

ಮಂಡರ್ತಿ ಶ್ರೀ ಮೂರ್ಜಾಪರಮೇಶ್ವರೀ ಆ ಮ್ಮನವರ ದೇವಸ್ಥಾನದ ಆಫೀಸಿನಿಂದ–

ಸದ್ರಿ ದೇವಸ್ಥಾನದ ಗರ್ಭಗುಡಿಗೆ ತಾಂಬ್ರ ಪ ತಗಡನ್ನು ಹೊದಿಸುವ ಬಗ್ಗೆ ತಾ. 16-1 -54ನೇ ಶನಿವಾರ ದಿನ ಗಂಟೆ 11ಕ್ಕೆ ಏಲಂ ಕರೆಯಲಾಗುವುದು. ಕ್ಯಾಸುಳ್ಳವರು ಸದ್ರಿ ಸಮಯ ಆಫೀಸಿನಲ್ಲಿ ಹಾಜರಾಗಿ ನೇಮಿಸಿದ ಶರತ್ತುಗಳನ್ನು ಪರಿಶೀಲಿಸಿ ರೇಟನ್ನು ಕೊಡ ಬಹುದು.

ಸದ್ರಿ ದೇವಸ್ಥಾನದ ಗರ್ಭಗ್ರಹದ ಮಾಡಿ ಗೆ (ವಿಸ್ತೀರ್ಣ 2640 ಚಚೌಕ ಫೀಟು) ಮು ಚ್ಚುವ ಬಗ್ಗೆ ಸಾದಾರಣ 200 ಮಣ ಆರ್ಫ ಮಣದ ಯಾ ಶೀಲಿಂಗು ತಗಡುಗಳನ್ನು ಸ್ಥಳ ದಿಂದ ನೇಮಿಸಲ್ಪಟ್ಟ ಶರತ್ತುಗಳ ಪ್ರಕಾರ ಮೇ ಪಸ್ಥಾನದಲ್ಲಿ ಪಡಿಸಿ ಕೊಡುವ ಶರತ್ತುಗಳ ಮೇಲೂ ಇವಕ್ಕೆ ಬೇಕಾಗುವ $1\frac{1}{2}$" ಪೊಳೆ $\frac{3}{4}$" ರಿವೀಟು, ಸ್ಕ್ರೂ ಸಗ್ಗೆರೆಗಳನ್ನು ಒದಗಿಸಿ ಕೊಡುವ ಬಗ್ಗೆ ತಾ. 16-1-54ನೇ ದಿನ ಬೆಳಿಗ್ಗೆ ಗಂಟೆ 11ಕ್ಕೆ ರೇಟನ್ನು ಸ್ವೀಕರಿಸಲಾ ಗುವುದು. ಸದ್ರಿ ಸಮಯ ಆಫೀಸಿನಲ್ಲಿ ಹಾ ಜರಾಗಿ ಶರತ್ತುಗಳನ್ನು ಪರಿಶೀಲಿಸಿ ಕ್ಯಾಸುಳ್ಳ ವರು ರೇಟನ್ನು ಕೊಡಬಹುದು.

N. R. Bolar
Executive Officer.

ಮಂಡರ್ತಿ. ತಾ. 27-12-53.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ಸ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಕೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯಲ್ಪಡುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಜೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

॥ ಕರಿಷ್ಟೆ ಮಹೀಮುಹ ನಿರ್ಜರಾಮರಣಾಂ ॥

ಆಯುರ್ ವೈದ್ಯಾಶ್ರಮ

[ಸ್ಥಾಪನೆ: 1933]

ಆಜಾಲವೃದ್ಧ, ಸ್ತ್ರೀಪುರುಷರ ವಿವಿಧ ರೋಗಗಳಿಗೂ, ವಿಶೇಷವಾಗಿ ಇಂದ್ರಿಯಗಳ ದೌರ್ಬಲ್ಯ, ಮಾನಸಿಕ ವಿಕಾರಗಳು, ಸುಪ್ತ ರೋಗಗಳು, ನಪುಂಸಕತ್ವ, ಬಂಜೆತನ, ಚರ್ಮವ್ಯಾಧಿಗಳು, ಮೂಂತಾದವುಗಳಿಗೆ ರಸ ರಸಾಯ ನಗಳಿಂದ ವಿಶೇಷ ರೀತಿಯ ಚಿಕಿತ್ಸೆ.

ಪ್ರಬಲವಾದ ಜಾತರೋಗಗಳನ್ನು ಳದ್ರಿ ಗುಣಪ್ಪಿಸಿಯ ಸೋಲೆ (ವೈದ್ಯಾಧ್ಯಕ್ಷರು ಪತ್ರಿಕೆ)

—ಪ್ರಶಾಂತ ವೈದ್ಯೇರವಲ್ಲಿ ತೆರೆದಿರುವುದು—

—೦ ಶುಶ್ರೂಷಾಲಯವಲ್ಲಿ ೦—

ಪಂಡಿತರುಗಳಿಂದ, ಧಾರೆ ಮುಂತಾದ ವಿಶೇಷ ಚಿಕಿತ್ಸೆಗಳ ಸಹಾಯದಿಂದ ಚಿಕಿತ್ಸೆ ನಾಡುವೆವು. ಅತ್ಯಂತ ಅನೋಖ ಸ್ವಯೋಗಗಳನ್ನು ಪಾವರ ಲಿಂಗಗಳ ಮೂಲಕ ಕೈಕೊಳ್ಳುವುದು. ಪತ್ರ ವ್ಯವಹಾರ ಮಾಡಿ ವಿನರ ತಿಳಿಯಬಹುದು.

ಕೆದ್ರಿ, ಸುಂಗಳೂರು. } ಎಂ. ಎಸ್. ಭಟ್ಟ, ಪ್ರಧಾನ ವೈದ್ಯರು ಆಯುರ್ವೇದ ಭಿಷಕ್.

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 24 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಚೀ ಕಡಿಮೆ ವರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿ ರುವುದು.

THE MOOLKY BANK LTD.
Moolky, S. K.

ಧರ್ಮಾರ್ಥ—ಪುಕ್ಕಟೆ

ಒಂದು ಸಾವಿರ ಕಾಪ್ಪಿಗಳಿ ಕಾಲುಗೆಳನ್ನು ಧರ್ಮಾರ್ಥ ಹಂಚುತ್ತಿಲ್ಲಿವೆ. ಜೀಗನೆ ಬರೆ ಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial
Chambers (N. U.)
Bhandup Street,
BOMBAY—3

ಪಂಚಾಯತುಗಳ ಆಡಳಿತ

[೧ನೇ ಪುಟದಿಂದ]

ಅರಿತುಕೊಳ್ಳಬೇಕು. ಪಂಚಾಯತಿಗಾಗಲೀ, ಸರಕಾರಕ್ಕಾಗಲೀ ತೆರಿಗೆಯಮೂಲಕ ಹಣ ಪೂರೈಸದಿದ್ದರೆ, ಅವುಗಳಿಂದ ಹೆಚ್ಚಿನ ಸೌಕರ್ಯಗಳನ್ನು ನಾವು ಅಪೇಕ್ಷಿಸುವುದಕ್ಕೆ ನ್ಯಾಯವಿಲ್ಲ.

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಬೇಕು – ಪಂಚಾಯತ್ ಕಾಯಿದೆಯ ವ್ಯಾಪ್ತಿಗೆ ಬರುವ ಕಾರ್ಯವಿಧಾನವನ್ನು ಸಮುಚಿತ ರೀತಿಯಲ್ಲಿ ತಿಳಿದು ಕೊಳ್ಳದೆ ಪಂಚಾಯತು ಬೋರ್ಡಿನ ಸದಸ್ಯರು ತಪ್ಪಿ ಬೀಳುವ ಸಂಭವವಿದ್ದೀತು. ಅವುಗಳಿಂದ ಕೆಡುಕಾಗ ಬಾರದೆಂದು ಉತ್ಸೇಚಿಸಿ, ಸರಕಾರದವರು ಆಡಳಿತಾಧಿಕಾರಿಯ ನೇಮಕವಾಗಬೇಕೆಂದು ವಿಧಿಸಿರುವರು. ಇದು ಗ್ರಾಮದ ಪ್ರಮುಖರಿಂದ ತಮಗೆ ಒದಗಿ ಬಂದ ಹೆಮ್ಮೆ ಬಾಧ್ಯತೆಗಳನ್ನು ಚೆಲಾಯಿಸುವುದರಲ್ಲಿ ಆತಂಕ ಮಾಡಿದಂತೆ – ಎಂಬ ದೂರು ಕೇಳಿ ಬರುತ್ತದೆ. ಇಲ್ಲಿ ತುಸು ಸಂಯಮದಿಂದ ಉಭಯ ಪಕ್ಷಗಳೂ ನಡೆದುಕೊಂಡರೆ, ಈ ಏರ್ಪಾಡಿನಿಂದ ಹಾನಿಯೊದಗದೆಂದು ಹೇಳಬಹುದು. ಈಚೆಗೆ ಸರಕಾರದವರು ಜಿಲ್ಲಾ ಬೋರ್ಡುಗಳನ್ನು ವಿಸರ್ಜಿಸಿ, ಅವುಗಳ ಬದಲು ತಾಲೂಕು ಬೋರ್ಡುಗಳನ್ನು ಪುನಃಸ್ಥಾಪಿಸಲೂ ಹವಣಿಸಿದ್ದಾರೆ ಸ್ಥಳೀಯ ಸಮಸ್ಯೆಗಳನ್ನು ಹೆಚ್ಚು ವಿಚಕ್ಷಣೆಯಿಂದ ಪರಿಶೀಲಿಸಿ, ತಕ್ಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ತಾಲೂಕು ಬೋರ್ಡುಗಳಿರುವುದೇ ವಿಹಿತವೆಂದು ಸರಕಾರದ ಅಭಿಪ್ರಾಯ. ಆದರೂ ಜಿಲ್ಲೆಯ ಸಮಷ್ಟಿ ಹಿತವು ದುರ್ಲಕ್ಷಿಸಲ್ಪಡದಂತೆ ನೋಡಿಕೊಳ್ಳಲೂ ಸರಕಾರ ಉದ್ದೇಶಿಸಿದೆ. ಹಳ್ಳಿಗಳಲ್ಲಿ ಹೊಸರಕ್ತವನ್ನು ತುಂಬಲು ನಡೆಯುವ ಇಂಥ ಪ್ರಯತ್ನಗಳಲ್ಲಿ ಲೋಪದೋಷಗಳು ಕಡಿಮೆಯಾಗಿ ಜನಹಿತ ಸಾಧಿಸಲ್ಪಡುವಂತೆ ಎಲ್ಲರೂ ಸಹಕರಿಸೋಣ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 362/53.

S. C. 518/52.

ಸೈಲ್ಲ ಲಸ್ರಾದೊ ಜ್ಯಾ..ಆರ್ಜಿದಾರಳು.

ಸೋಸು ಮರಕಾಲ — — ಎದ್ರಿ.

ಆರ್ಜಿದಾರಳ ಕಡೆಯಿಂದ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಸೋಸು ಮರಕಾಲ– ಉಪ್ಪುರು ಕುದ್ರು ಮರಕಾಲನ ಅಳಿಯ ಉಡ್ಡು ತಾಲ್ಲೂ ಕೋಡಿ ಗ್ರಾಮದ ಬೆಂಗ್ರೆ— – – ಎದ್ರಿರು.

ಮೇಲಿನ ಅಸುಲ್ಜಾರಿಯಲ್ಲಿ ಎದ್ರಿಯಬಾಬ್ತು ಸ್ತ್ರೀರಾಸ್ತಿ ರೈಲಾ ಪೂಡಿಸುವ ಗೋಸ್ತಿರ ಆರ್ಜಿದಾರಳು ಹಾಜ್ರು ಪಡ್ಡಿದ ಬಿಸ್ತಾರಿನ ಲರ್ಜ ನಿರ್ಣಯಿಸುವುಕೋಸ್ತರ ತಾರೀಕು 22—1—54 ಕ್ಕೆ ಆಪ್ಪೆರು ತಪ್ಪಿಗೆ ಯಿಟ್ಟಿದೆ. ಆ ಕುರಿತು ನಿಮ್ಮನೇನಾದರು ಆಕ್ಷೇಪವಿದ್ದಲ್ಲಿ ಸದ್ರಿ ದಿನ್ವ ವೆಗ್ಗು 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಸ ಪಕೀಲರ ಪ್ಯಾರಾ ಹಾಜ್ರಾಗಿ ಜಾವೇಬುನೂಡಿ ಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಆರ್ಜಿದಾರಳ ಕಡೆಯಿಂದ ತಿಳಿಯಪಡ್ಸಿದೆ.

G. Sanjiva Rao
Vakil
Coondapur: Date 2—1—54.

ಬಂಟರ ಯಾನೆ ನಾಡವರ ಸಂಘದ ಮಹಾಸಭೆ

ಶ್ರೀ. ಬಿ. ದಾಸ ರೈಗಳ ಅಧ್ಯಕ್ಷ ಭಾಷಣ

ದ. ಕ. ಜಿಲ್ಲಾ ಬಂಟರಯಾನೆ ನಾಡವರ ಸಂಘದ ಮಹಾ ಸಭೆಯು ಕಳೆದ ತಾ ೨೧ ರಲ್ಲಿ ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸಾಂಗವಾಗಿ ಜರಿಗಿತು. ಶ್ರೀ ಬಿ ದಾಸ ರೈ, ಬಿ. ಎ. ಬಿ. ಎಲ್, ಅವರು ಸಭಾಧ್ಯಕ್ಷತೆ ವಹಿಸಿ ಭಾಷಣ ಮಾಡುತ್ತಾ ಹೀಗೆಂದರು "ಈ ಸಂಘವು 1907ರಲ್ಲಿ ಜನ್ಮತಾಳಿ ಈ ವರೆಗೆ ಅನೇಕ ಶ್ರೇಯಸ್ಕರ ಕಾರ್ಯ ಮಾಡಿರುವುದು. ಸ್ವಜಾತಿಯ ಮೇಲ್ಮೆಗಾಗಿ ಸ್ಥಾಪಿಸಲ್ಪಟ್ಟ ಈ ಸಂಘವು ಸಮಾಜದ ಮುಂದಾಳುಗಳ ಅಕ್ಷಯವಲ್ಲ ಸಮಾಜ ಬಂಧುಗಳ ಉನ್ನತಿಯನ್ನು ವೃದ್ಧಿಪಡಿಸಿಯಿದೆ. ಎಂತಲೇ ಅಂತಹ ಮುಂದಾಳುಗಳನ್ನು ಈ ಸಂದರ್ಭದಲ್ಲಿ ನೆನಸುವುದು ಸಂದರ್ಭೋಚಿತವು.

ವಿದ್ಯಾರ್ಥಿ ಭವನಗಳು—ಸ್ವಜಾತಿಯ ಯುವಕರಿಗೆ ಸ್ಥಾಪಿತ ವಿದ್ಯಾಭ್ಯಾಸಕ್ಕಾಗಿ ಮಂಗಳೂರು ಮೊದಲಾದ ಕಡೆಗಳಲ್ಲಿ ವಿದ್ಯಾರ್ಥಿ ಭವನಗಳು ಸ್ಥಾಪಿಸಲ್ಪಟ್ಟಿವು. ಪ್ರಸ್ತುತ ಸ್ಥಿತಿಯಲ್ಲಿ ವಿದ್ಯಾರ್ಥಿ ಭವನಗಳನ್ನು ಎಲ್ಲಾ ಜಾತಿಯವರ ಉಪಯೋಗಕ್ಕಾಗಿ ಇಟ್ಟರೆ ಅವನ್ನು ನಮಿಸಿಕೊಂಡು ಬರಲು ಯೋಗ್ಯ ವ್ಯಕ್ತಿಗಳು ಸಿಕ್ಕದೆ ಹೋಗಲಾರರು. ಮುಂಗಳೂರಿನ ವಿದ್ಯಾರ್ಥಿನಿ ಭವನಕ್ಕೆ ಅನ್ಯ ಜಾತಿಯ ವಿದ್ಯಾರ್ಥಿನಿಯರಿಗೂ ಪ್ರವೇಶ ಕೊಟ್ಟುದುದರಿಂದ ಆರಿಗೆ ಸರ್ವಾಪಾತ್ರತೆ ಹೊಂದಿದೆ.

ಅಳಿಯಸಂತಾನ ಕಾನೂನು—ಜ್ಯಾರಿಗೆ ಬಂದು ಈಗಾಗಲೇ ನಾಲ್ಕು ವರ್ಷಗಳು ಮಾತವವು. ಅನೇಕ ಮನೆಗಳಲ್ಲಿ ಕೋರ್ಟು ಕಛೇರಿಗಳಿಗೆ ಹೋಗದೆ ಶಾಲು ವ್ಯವಸ್ಥೆಗಳು ನಡೆದಿದ್ದರೂ, ಅನೇಕ ದೊಡ್ಡ ದೊಡ್ಡ ಕುಟುಂಬಗಳು ಕೋರ್ಟು ವ್ಯವಹಾರದಿಂದ ಬೆಗೆ ಸಿಲುಕಿ ನರಳುತ್ತಿವೆ. ಎಂದೆಯಿಂದ ಸದ್ರಿ ಕಾನೂನು ಅಸಿಂಧು ಎಂಬ ಪ್ರಯತ್ನವು ಹೈಕೋರ್ಟಿನಲ್ಲಿ ನಡೆಯುತ್ತಿದೆ, ನಮ್ಮ ಸಭೆಯಲ್ಲಿ ಲರ್ಜಿ ಅಳಿಯಸಂತಾನ ಕುಟುಂಬಗಳ ಸುಧಾರಕ ಸಮಿತಿಯು ಬೇಕಾದ ಪ್ರಯತ್ನಗಳನ್ನು ನಡಿಸಿ, ಕಾನೂನನ್ನು ಜಾರಿಗೆ ತಂದ ಮೇಲೆ ಅದನ್ನು ಬಲ ಪಡಿಸುವುಕ್ಕೆ ನಿರ್ಧಾರಗಳನ್ನು ಈ ಮಹಾ ಸಭೆಗುಪ್ಪಿಸಿ ಜ್ಯಾರಿ ಮಾಡಿದ್ದಿರೆ, ನ್ಯಪಹಾರವಲ್ಲಿ ಸಿಲುಕಿದ ಕುಟುಂಬಗಳ ಬಾಡು ಪಿನಾದೀತೆಂಬ ಹೇಳಲಸಾಧ್ಯ. ಯಾವ ಕಾನೂನಾದರೂ ಕುಂದು ಕೊರತೆಗಳಲ್ಲಿದ್ದಿರುವುದು ಆಶಾಧ್ಯ. ಲೋಪಗಳಿದ್ದರೆ ಅವುಗಳಿಂದ ಪಾರಾಗುವಂತೆ ಯತ್ನಿಸುವ ಕಾರ್ಯ ಮಾಡುವುದು ನಮ್ಮೆಲ್ಲರ ಕರ್ತವ್ಯ. ಆದಕಾರಣ ಇಂದಿನ ಸಭೆಯಲ್ಲಿ ಬೇಕಾದ ನಿರ್ಣಯಗಳನ್ನು ಮಾಡಿ ಕಾನೂನಿಗೆ ಮುಂದಾಳಾಗಿ ನಿಂತಿದ್ದವರನ್ನು ಬಲ ಪಡಿಸುವುದು ನಮ್ಮ ಕರ್ತವ್ಯವಿನೆ.

ಕೃಷಿಕರ ಸಾಲ ಸೌಲಭ್ಯ ಕುರಿತು ಆರ್ಡಿನೆನ್ಸು— ಹೊಸತಾಗಿ ನಮ್ಮ ಮುಖ್ಯಾಸ್ಥರು ಸರಕಾರದಿಂದ ಹೊರಟಿದ್ದಕ್ಕಾಗಿ ಮುಖ್ಯವಾಗಿ ಕೃಷಿಕರಾಗುವ ನಮ್ಮವರ ಪರವಾಗಿ ಮಂತ್ರಿ ಶ್ರೀ ರಾಜಗೋಪಾಲಾಚಾರ್ಯರನ್ನು ಸೌಹಾರ್ದಕ ವಂದಿಸಿ, ಯೋಗ್ಯ ನಿರ್ಣಯಗಳನ್ನು ಈ ಸಭೆಯ ಪರವಾಗಿ ಕಳುಹಿಸಿ ಕೊಡುವುದು ನಮ್ಮ ಕರ್ತವ್ಯವೆನಿಸುತ್ತದೆ. ಕೃಷಿಕರಲ್ಲಿ ಇವೆಸ್ಟ್ ಸಾಲದ ಅಡಚಣೆಯು ಇತರ ಯಾವ ನೈಷ್ಟಿಯಲ್ಲಿಗೂ ಇಲ್ಲದಂತೆ ಕಾಣುವುದಿಲ್ಲ ನಮ್ಮ ಆತಿ ಪುರಾತನ ಮನೆತನಗಳೂ ಅಳಿಯಸಂತಾನ ಕಟ್ಟಿನ ದೆಸೆಯಿಂದ ಇವೆ ಇಪ್ಪು ಕಾಲ ಬಾಳಿ ಬಂದಿರುವುವೆ. ಹೊಸತಾಗಿ ಜ್ಯಾರಿಗೆ ಬಂದ ಅಳಿಯಸಂತಾನ ಕಾನೂನಿನ ದೆಸೆಂದ ದೊಡ್ಡ ಸನಿತರನ ಮನೆಗಳಲ್ಲಾ ಇರಿಮ ಜುರಾಸಿನ ಕಾಲದಲ್ಲಿ ಆಸರಿಗೆ ಸಾಲಕೊಡುವವರನ್ನು ಹೊಸ ಆರ್ಡಿನೆನ್ಸಿನಂದ ಬೆದರಿಸುವುದು ನಮ್ಮ ಪೇಲ್ಮೆಗೆಂದೇ ಭಾವಿಸಿ ನಾವು ಕೃತಜ್ಞರಾಗಿರ ಬೇಕು. ಇನ್ನೂ ಜ್ಯಾರಿಗೆ ಬರಲಿಕ್ಕಿರುವ ಧನ ವಕ್ಕುಗಳ ಸುಸೂತಿಯ ವಿಷಯದಲ್ಲೂ ಭೂಸುಧಾರಿ ಕರಾಗಿರಬೇಕರ ಕುತಂತ್ರ. ವರ್ತನೆಗೆ ಅಸ್ಪದ ಕೊಡದಂತೆ ನಮ್ಮ ಸರಕಾರವೂ ಮುಖ್ಯ ಮಂತ್ರಿಗಳೂ ವರ್ತಿಸುವರೆಂಬ ಭರವಸೆ ನನಗಿದೆ.

ವಿಜಯ ಬ್ಯಾಂಕು—ದಿ 13 ಶಾಖೆಗಳಿಂದ ಕೂಡಿದ್ದು ಮುಖ್ಯ ಆಫೀಸು ಬೆಂಗಳೆ ಸ್ವಂತ ಕಟ್ಟಿಣದ ಸೌಲಭ್ಯವನ್ನು ಪಡೆದು ಕೆಡ್ಯೂಲ್ಡ್ ಬ್ಯಾಂಕ್ ಆಗಿ ಪರಿಣಮಿಸುತ್ತಾಗಲೆಂದು ಹಾರೈಸುತ್ತೇನೆ. ಬೆಂಕಿನ ಏಳಿಗೆಗಾಗಿ ಶ್ರಮಿಸಿದ ಹಿಂದಿನ ಬೆಂಗಳೆ ಮತ್ತು ಮುಂದಿನ ಅಭಿವೃದ್ಧಿಯನ್ನು ಸಾಧಿಸಲು ಬದ್ಧ ಕಂಕಣರಾದ ಈಗಿನ ಜೆರ್ನಲೇನರ ಮುಕುಪ ಬೆಯಿಂದ ಬೆಂಗಳು ಇನ್ನಷ್ಟು ಕೀರ್ತಿಯನ್ನು ಪಡೆಯ ಬಲ್ಲುದಾಗಿದೆ.

ರೈತರ ಅಭಿವೃದ್ಧಿ—ಸಾಧಿಸಲು ಧನ ಗಳೂ ವಕ್ಕುಗಳೂ ಪರಸ್ಪರ ವಾತ್ಸಲ್ಯದಿಂದ ವರ್ತಿಸಬೇಕು. ಇತ್ತಂಡದವರೂ ಪರಸ್ಪರ ಸುಖ ದುಃಖಗಳಲ್ಲಿ ಭಾಗಿಗಳಾಗಬೇಕು. ಚೇಂಬರ್ ಆಫ್ ಕಾಮರ್ಸ್ ಎಂಬ ಸಂಸ್ಥೆಗಳನ್ನು ವೇಗೆ ವ್ಯಾಪಾರಿಗಳು ಸ್ಥಾಪಿಸಿಕೊಂಡು ಕೆಲಸ ಮಾಡುತ್ತಿರುವಂತೆ ಆಂತೆಯೇ ಕೃಷಿಕರು ಕೂಡಾ ಚೆಂಬರ್ ಆಫ್ ಎಗ್ರಿಕಲ್ಚರ್ ಎಂಬ ಸಂಸ್ಥೆಗಳನ್ನು ಸ್ಥಾಪಿಸಿ ತಮ್ಮೂಲಕ ತಮ್ಮ ಶ್ರೇಯಸ್ಸನ್ನು ಸಾಧಿಸಬೇಕಾಗಿದೆ. ಭೂಮಿಯಲ್ಲಿ ಉತ್ಪತ್ತಿಯಾಗುವುದನ್ನು ಧನಿಗೆ ಆರ್ಥಾರ ಪಕ್ಕಿಗೆ ಆರ್ಥಾರದಂತೆ ಪಂಚಕೊಳ್ಳಬೇಕು. ಅದಕ್ಕಿಂತ ಜಾಸ್ತಿ ಗೇಣಿ ಧನಿಗಳು ಆಪೇಕ್ಷಿಸ ಬಾರದು. ಆದರೆ ಕೊಳಕೆ ಬೆಳೆಯು ಪೂರಾ ವಕ್ಕಿನ ಕಾಯ ಕಷ್ಟದಿಂದುಂಟಾಗುವುದರಿಂದ ಅದು ಪೂರಾ ಆತನ ಉಪಯೋಗಕ್ಕೇನೇ ಸಿಕ್ಕಬೇಕು. ಗೇಣಿ ಸಂಗಡಗಾಗಿ ಕೊಟ್ಟಿಪ್ಪು ಭೂಮಿಯಲ್ಲಿ ವಕ್ಕುತನ ತೆಗೆಯಲಿಕ್ಕೆ ಧನಿಗೆ ಹೆಚ್ಚು ಪಕ್ಷ ಅಧಿಕಾರವಿಲ್ಲವೆಂದು ಕಾನೂನು ಮಾಡಿದರೆ ಯಾವ ಆನ ಗುಣವೂ ಬಾರದು. ಕೆಲವು ಆಗತ್ಯ ಸಂದರ್ಭಗಳಲ್ಲಿ ಮಾತ್ರ ಧನಿಯು ಭೂಮಿಯನ್ನು ಸ್ವಾಧೀನ ಪಡೆಯುವ ದಕ್ಕನ್ನಿಟ್ಟುಕೊಳ್ಳಬಹುದು.

ವೈದ್ಯ ಸೇವೆಯ ಕಾರ್ಯಗಳಲ್ಲಿ—ಸ್ವಜಾತಿ ಭಾಂದವರು ಬಡ ಕಾಲದಿಂದಲೂ ಅಸಾಧಾರಣ ಪ್ರತಿಭಾವಂತರಿರುವರು. ಸ್ವತಂತ್ರ ಭಾರತದಲ್ಲಿ ಈಗಿನ ಕಾಲಸ್ಥಿತಿಗನುಸರಿಸಿ ದೇಶಸೇವಾ ನಿರತರಾಗಬೇಕು. ಯುಚಕರು ರಾಷ್ಟ್ರದಳ, ನಾವಿಕ ಸೇನೆ ಮೊದಲಾದವುಗಳಿಗೆ ಸೇರಿ ತಮ್ಮ ಜೀವನವನ್ನೂ ನಾಡಿನ ಕ್ಷೇಮಾಭಿವೃದ್ಧಿಯನ್ನೂ ಜೆಚ್ಚಿಸಲಕ್ಕೆ ಯತ್ನಿಸಬೇಕು. ಬರೇ ರಾಜಕೀಯ ತತ್ವಗಳನ್ನು ಮುಂದಿಟ್ಟು ಬೇರೆ ಬೇರೆ ಪಂಗವ ಕಟ್ಟಿಕೊಳ್ಳುವುದು ಸಣ್ಣಣ ವಾಸಿಗಳಿಗೆ ಹೇಳಿದುವಾಗಿವೆ. ಗ್ರಾಮ ವಾಸಿಗಳು ರಾಜಕೀಯ ತರ್ಕಗಳನ್ನು ಬೆನ್ನಾಗಿ ತಿಳಿದುಕೊಂಡು ಊರ ಜನರಿಗೆ ಸಂಪತ್ತು ಸಮೃದ್ಧಿಯುಂಟಾಗುವ ಕಾರ್ಯಗಳಲ್ಲಿ ನಿರತರಾಗಿ ಆ ಬಗ್ಗೆ ಸತತ ಯುದಿಯ ಬೇಕು. ನಮ್ಮ ಮನೆ, ಜಾತಿ ಮತ್ತು ಊರಿನ ಕೆಲಸಗಳೊಡನೆ ರಾಷ್ಟ್ರದ ಕೆಲಸಗಳನ್ನು ಕೂಡಾ ನಿರ್ವಹಿಸಲು ನಾವು ಯೋಗ್ಯತೆಯುಳ್ಳವರೆನಿಸಿಕೊಂಡರೇನೇ ನಮ್ಮ ಈ ಸಂಘ ಮತ್ತು ಮಹಾ ಸಭೆಯ ಉದ್ದೇಶಗಳನ್ನು ಸಾಧಿಸಿದಂತಾಗುವುದು.

ದಿ ವಿಜಯ ಬ್ಯಾಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000

ಜುಮ್ಲಾ ವಹಿವಾಟು .... ,, 60,50,000

ಕಾಯಂ ತೇವಣಾತಿಗಳು ! ತಿಂಗಳಿನಿಂದ 2-4 ತಿಂಗಳಿನ ವರೆಗೆ ಲಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟ್ ತೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮು ಶೆಟ್ಟಿ,
ಬಿ.ಎ.ಬಿ.ಯಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ



ಶಿಲಾಜಿತ್ ಹಿಮಾಲಯದಿಂದ ಔಷಧಗಳ ರಾಜ; ಮೂರಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹದಶ್ಟಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಸಿಮೂತ್ರ ಮತ್ತು ಪಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿಜ್ಞಾನಿಗಳಿಗೆ ಜ್ಞಾಪಕಶಕ್ತಿ, ಜೊಂಗಸರ ಮತ್ತು ಮೆಳ್ಳಕ್ಷ ಸರ್ವರೋಗ ನಿವಾರಕ ಆಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

ಳಳ್ಳ ದಿನದ ರೇಸ್ಯ ರೂ. ೫-೪-೦, ೨೨ ದಿನದ ರೇಸ್ಯ ರೂ. ೩-೪-೦. (ಪೋಸ್ಟೇಜು ಸೂಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋನಿನಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವ ದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಏಜ್ಯು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.



ಕನ್ನಡ ಪ್ರಾಂತ ನಿರ್ಮಾಣದ ಕುರಿತು ಒತ್ತಾಯ

[ಎಸ್ ಬಿಟದಿಂದ]

ಕನ್ನಡನಾಡು, ನುಡಿ, ಸಂಸ್ಕೃತಿಗಳ ಬಗೆಗೆ ನೊಡ್ಡ ಸೇವೆಯನ್ನು ಸಲ್ಲಿಸಬೇಕು; ಈ ನುಡಿಯ ಮಕ್ಕಳು ಒಂದಾಗಬೇಕು; ಈ ಜನ ಸೌಹಾರ್ದದಿಂದ ಬೆಳೆದು ಆಡಳಿತದಲ್ಲಿ ಒಟ್ಟು ಒಂದು ರಾಜ್ಯವಾಗಬೇಕು; ಸಾಹಿತ್ಯ, ಕಲೆ, ಶಾಸ್ತ್ರಜ್ಞಾನ, ಧರ್ಮ, ಬದುಕಿನ ನಯಗಳಲ್ಲಿ ಈ ಜನ ಈ ಮುಂಚೆ ಏನೇನು ಸಾಧಿಸಿ ಗಣ್ಯತೆ ಪಡೆಯಿತೋ ಅದರ ಸಮಗ್ರ ಪರಿಚಯವನ್ನು ಒಳಗೂ ಹೊರಗೂ ಮಾಡಿಕೊಟ್ಟು, ಈ ಕಾಲದಲ್ಲಿಯೂ ಅವೇ ರಂಗಗಳಲ್ಲಿ ಉತ್ಸಾಹವನ್ನೂ ಸಾಧನ ಸಂಪನ್ನತೆಯನ್ನೂ ಬೆಳೆಸಬೇಕು; ಇಂದು ಸಲ್ಲಿಸುವ ಕಾಣಿಕೆ, ಶಕ್ತಿಯಾದರೆ, ಹಿಂದಿನದಕ್ಕಿಂತ ಉತ್ತಮವಾಗಬೇಕು; ಮಾನ್ಯರಾದ ಸಾಹಿತಿಗಳಿಗೆ ಪ್ರೋತ್ಸಾಹವನ್ನೂ ಪ್ರತಿ ಫಲವನ್ನೂ ಸಲ್ಲಿಸಿ ವಿಶ್ವಾಸ ತೋರಿಸಬೇಕು; ಹಳೆ, ಹೊಸ ಗ್ರಂಥಗಳ ಪ್ರಕಟಿಕೆಯನ್ನೂ ಕೈಗೊಳ್ಳಬೇಕು—ಎಂದು ಕನ್ನಡ ಸಾಹಿತ್ಯ ಸಮಿತ್ತು ಬಯಸಿತು. ಹುಟ್ಟಿ ಈಗ್ಗೆ ಮೂವತ್ತೆಂಟು ವರ್ಷಗಳಾದರೂ ಮಾಡಬಹುದಾಗಿದ್ದಷ್ಟು ಸೇವೆಯನ್ನು ಸಲ್ಲಿಸಲು ಅದಕ್ಕೆ ಸಾಧ್ಯವಾಗಿಲ್ಲ. ಅದು ಸಂಸ್ಥೆಯ ಮೇಲೆ ಮಾತ್ರ ಹೊಂದಿದ್ದಲ್ಲ—ಜನಬಲ, ಧನಬಲ, ರಾಜ್ಯ ಶಕ್ತಿಯಬಲ ಸಾಕಷ್ಟು ಇಲ್ಲವಾದರೆ, ಇಂತಹ ಕಾರ್ಯ ನೆರವೇರುವು. ಸ್ವಂತ ಶಕ್ತಿಯೂ ಅಭಿಲಾಷೆಯೂ ಸಿದ್ಧಿಯಾಗಬೇಕು. ಹೇಗೆ ಇಂದಿನ ಸಮಸ್ತ ಕರ್ನಾಟಕ ವ್ಯಾಪ್ತಿಯುಳ್ಳ ಸಂಸ್ಥೆ ಇದೊಂದೇ. ಇದರ ಕ್ರಿಯಾಶಕ್ತಿಯನ್ನು ಜನರು ಎಷ್ಟು ಹೆಚ್ಚಿಸಿದರೆ, ಇದು ಅಷ್ಟು ದೊಡ್ಡದಾಗಲು ಳ್ಳಿದ್ದು. ಎಲ್ಲ ಕನ್ನಡಿಗರ ಸಾಂಸ್ಕೃತಿಕ ಉತ್ಕರ್ಷಗಳನ್ನೂ ರೂಪಿಸಿ, ಅವರ ವಾಣಿಯಾಗಬೇಕಾದು ಆಸೆಯಿಂದ ನಡೆಯುತ್ತಿರುವ ಈ ಸಂಸ್ಥೆಯ ಮಹೋತ್ಸವ ಪೊಂದರಲ್ಲಿ ನಾವು ಈಗ ಪ್ರಣಃ ನಿಮೋಜಿತರಾಗಿದ್ದೇವೆ.

ಇದು ವರೆಗಿನ ವಾತಾವರಣ

ಈಗ ಸುಮಾರು ಸಾವಿರದೈನೂರ ವರ್ಷಗಳಿಂದ ನಡೆದುಬಂದ ನುಡಿಯ, ಇತಿಹಾಸದ, ಜನತಾ ಜೀವನದ, ಸಾಹಿತ್ಯ ನಿರ್ಮಾಣದ ಸ್ವರೂಪವನ್ನು ಪರಿಚಯ ಮಾಡಿಕೊಂಡರೆಂದಿನ ನಮ್ಮ ಸ್ಥಿತಿ ಹೇಗಿದೆ, ಈವರೆಗೆ ಎಷ್ಟು ಕೆಲಸ ನಡೆದಿದೆ, ಇನ್ನು ಪುಮು ಏಕೆ ಹೀಗಾಯಿತು ಎಂಬುದರ ಅರಿವಾಗುವುದು. ಇಪ್ಪೊತ್ತಿನ ಸ್ಥಿತಿಯ ಬಲಾಬಲಕ್ಕೆ ಹಿಂದಿನ ಜರಿತ್ರೆ-ಅದರದ್ದೂ ಆಗದೆ ಉಳಿದದ್ದೂ—ಕಾರಣ. ಸ್ಥಿತಿಯನ್ನು ತಿಳಿದು ಇದಕ್ಕೆ ಬೇಕಾಬಿಟ್ಟಿ ಬೇಕೆಸ್ಸು ಬಾಗ ಈಕಾಲದ ಮತ್ತು ಲೋಕಜೀವನದ ಪರಿಸ್ಥಿತಿ, ಸನ್ನಿವೇಶಗಳ ಎಲ್ಲ ಬೆಳಕು ಅದರ ಮೇಲೆ ಬೀಳಬೇಕಾಗುವುದು. ಒಂದು ಚುರುಕಿನ ದೃಷ್ಟಿ ಒಂದು ತಾರತಮ್ಯದೃಷ್ಟಿ, ಒಂದು ವಿಮರ್ಶನ ದೃಷ್ಟಿ ಈ ಮೂರು ಸುಳಿದರೆ ಬೆಲೆ ನಿರ್ಧರವಾಗುವುದು. ಇಂವೆನ ಬೆಳಕೂ, ಒದಗೂ ಇಂದಿನ ಮತ್ತು ನಾಳೆಯ ಶ್ರೇಯಸ್ಸಿಗಾಗಿಯೇ ಅಲ್ಲವೆ? ಅದಕ್ಕೆ ತಕ್ಕ ಆವರಣವನ್ನು ಕಲ್ಪಿಸಿಕೊಂಡು, ಹೊಸ ಸಂಕಲ್ಪವನ್ನು ಒದಗಿಸಿಕೊಳ್ಳುವ ಉತ್ಸಾಹವೂ ಉದ್ಯೋಗವೂ ಅಗತ್ಯವಾಗಿ ನಮ್ಮದೆನಿಸಲಿ.

ಭಾರತದ ಯಾವ ಭಾಷಾ ಪರಿಸರದ ಜನವೂ ಕನ್ನಡದವರಷ್ಟು ಬೇರೆ ಬೇರೆ ರಾಜಕೀಯ ಆಡಳಿತಗಳಲ್ಲಿ ಜೆದರಿ, ಇಷ್ಟು ಕಷ್ಟಪಟ್ಟಿದ್ದಿಲ್ಲ. ನಿನ್ನೆ ಮೊನ್ನೆ ಯವರೆಗೂ ಹಲವಾರು ರಾಜ ಮಹಾರಾಜರ ಆಡಳಿತಗಳಲ್ಲಿಯೂ ಮೂರು ಬ್ರಿಟಿಷ ವ್ಯಾಪ್ತಿಗಳಲ್ಲಿಯೂ ನಿಕ್ಕಿಕೊಂಡು ಕನ್ನಡಿಗರು ಉಸಿರಾಡಲೇ ಕಷ್ಟವಾಗಿದ್ದಿತು. ಕನ್ನಡ ಆಡುವವರಿಗೆ ಎಲ್ಲ ಭಾಗಗಳವರೂ ಒಪ್ಪುವವಿಕ್ಯೂ ನಾಯಕತ್ವವೂ ಇಲ್ಲವೆನಿಸಿತ್ತು. ಇನ್ನೂ ಅಖಿಲಕನ್ನಡ ನಾಯಕನರ್ಗ ಸರ್ವ ಸಮರ್ಪಕವಾಗಿ ತಯಾರಾಗಬೇಕಾಗಿದೆಯೇ! ನೋ! ಕನ್ನಡಿಗರ ಜೀವನ ಒಂದು ಮುಖವಲ್ಲ ರೂಪಗೊಳ್ಳುವಂತೆ, ಅದನ್ನು ನಡೆಸುವ ಅಭಿವಾನಶಾಲಿಗಳೂ ಕರ್ತೃತ್ವ ಶಾಲಿ ಮಂದಾಳುಗಳೂ ನಾಡಿನ ಪ್ರಧಾನ ಮಂತ್ರಿಲೋಚನೆಯ ಮತ್ತು ಕಾರ್ಯಕಾರಿ ಮಂಡಲಿಗಳಲ್ಲಿ ಇಲ್ಲದಿರಿಂದ ಈ ಭಾಗದ ಜನರ ಸ್ಫೂರ್ತಿಪ್ರಜ್ಞೆ, ವಾದ ಎಲ್ಲಿ ಸೇಗೆ ಎಷ್ಟು ಕೇಳಿಸಬೇಕೊ ಅಷ್ಟು ಕೇಳಿಸಲಿಲ್ಲ; ಎಷ್ಟು ಕೃತಕಾರ್ಯವಾಗ ಬೇಕಿತ್ತೊ ಅಷ್ಟು ಆಗಲಿಲ್ಲ

ಪ್ರಜಾ ಸ್ವಾತಂತ್ರ್ಯ ಬೆಳೆದು ರಾಜಕೀಯದಲ್ಲಿ ಜನ ಪ್ರತಿನಿಧಿಗಳು ಅಧಿಕಾರ ಸ್ಥಾನಗಳಿಗೆ ಬಂದಾಗಿನಿಂದ ಕನ್ನಡದವ್ಲ ಮಾತುಕತೆ, ವ್ಯವಹಾರ ಹೆಚ್ಚಾಗಿದೆಯಾದರೂ ಆಳುವರ ಶಕ್ತಿಯ ಪಕ್ಷ ಪಾತಕ್ಕೂ ಅಖಿಲಭಾರತ ಪ್ರಭುವಗಳಿಗೂ ಒಳಪಡಬೇಕಾಗಿ, ಬಹುಶಃ, ಕೆಲವು ಸಂದರ್ಭಗಳಲ್ಲಿ ಅದು ಧಾರಾಳವಾಗಿ ನಡೆಯಲಾರದೆ ಇದಿ ಜೊತೆಗೆ ವ್ಯಕ್ತಿಶಕ್ತಿಯ ಮಿತ್ರ ಇತರಲೌಕಿಕ ಕಾರಣಗಳೂ ಮೈಗೂಡಿನವರ ಕನ್ನಡ ಅಭಿಮಾನವನ್ನು ಒಣಗಿಸಿವೆ. ಒಟ್ಟು ಕನ್ನಡನಾಡಿನ ಅರ್ಧಭಾಗ ವನ್ನೊಳಗೊಂಡ ಮೈಸೂರು ಈ ವರೆಗೂ ಬೇರೆಯಾಗಿದ್ದಕೊಂಡು ತನ್ನದೆಂಬ ನಯವನ್ನೂ ಧೈರ್ಯವನ್ನೂ ಹೆದೆಸನ್ನೂ ನಡೆಸಿಕೊಂಡು ಬಂತು. ಇದು ಸಂಸ್ಕೃತಿ ವಿಕೇಸನ್ನ—ಒಂದು ಹೊಸ ಸೃಣಾಸ್ತ್ರ. ಮೈಸೂರಿನವರನೇಕರಿಗೆ ಹೊಸ ಕನ್ನಡಿಗರ ರಕಷ್ಟ ಸುಖ ತಿಳಿಯದು. ಕೆಲವರಿಗೆ ಪ್ರಕಟವಾಗಿ ಅದು ಬೇಕಿಲ್ಲ—ನವ ಸೃಷ್ಟಿಗೆ ನಾವು ಹಿಂವಿನಂತೆ ಇರೋಣ. ಕನ್ನಡದ ಇತರ ಭಾಗಗಳು ಬೇಕಾದರೆ ಬೇರೆ ಒಂದು ಸಣ್ಣ ಕರ್ನಾಟಕವನ್ನು ಸ್ಥಾಪಿಸಿಕೊಳ್ಳಲಿ, ಕಾಲ ಕ್ರಮದಲ್ಲಿ ಅಗತ್ಯವಿದ್ದರೆ. ಈ ಎರಡೂ ಭಾಗಗಳೂ ನೇರಲ; ಆಡಳಿತ ದೃಷ್ಟಿಯಿಂದಾಗಲಿ. ಸಂಸ್ಕೃತಿ ದೃಷ್ಟಿಯಿಂದಾಗಲಿ ಇವೆರಡನ್ನೂ ಬೆರಸಕೂಡದು ಎನ್ನುವ ಹಿರಿಯ ರಾಜಕಾರಣಿಗಳೂ ಇದ್ದಾರೆ. ಈಗ ಒಂದು ವರ್ಷದಿಂದೀಚೆಗೆ ನಮ್ಮ ಆಡಳಿತದ ಮುಖಂತರ ಧೀರವಾದ ಮುನ್ನಡಿಗ್ಗಿನಿಂದ ಕನ್ನಡದ ಜನ ಕೆಲಸಕ್ಕೆ ಚಮೂ ಜೀವಳಿಕೆಯೂ ಬಂದಿವೆ

ಕರ್ನಾಟಕ ವಿಕೇಕರಣ

ಹೀಗೆ ಒಕ್ಕೂಟದವಿಷಯದಲ್ಲಿ ಒಂದು ಮುಖವಿಲ್ಲ. ಒಂದು ಕೊರಲಿಲ್ಲ. ಒಂಭತ್ತೂ ಇತರ ಅನೇಕ ಸಂಸ್ಥೆ ಸಮ್ಮೇಳನಗಳೂ ವಿಕೇಕರಣದ ಅಗತ್ಯವನ್ನು ಒತ್ತಿ ಹೇಳಿವೆ. ನಾಡಿನ ಬಿಡುಗಡೆ ಬರುವ ಮುಂಚೆ ಕಾಂಗ್ರೆಸಿನವರೇ ಭಾಷಾ ವ್ಯಾಪ್ತಿ ತತ್ವವನ್ನು ಒಪ್ಪಿದ್ದರು. ಆ ಮೇಲೆ ಇವ್ಪಕ್ಕಿದ್ದಂತೆ ಪಕ್ಷದ ಕರ್ನಾಟಕ ವ್ಯಾಪ್ತಿವನ್ನೇ ಒಡೆದು ಎರಡು ಹೋಳು ಮಾಡಿಬಿಟ್ಟರು. ಆಳುವ ಪಕ್ಷದ ಮನಸ್ಸು ವ್ಯಾಪ್ತಿಗಳಲ್ಲಾಗಲಿ, ಕೇಂದ್ರವಲಯಲ್ಲಾಗಲಿ ಸುಮಾರು ಸೆಡೆದೇ ಇದೆ ಭಾಷಾ ವ್ಯಾಪ್ತಿಗಳನ್ನು ವಿಂಗಡಿಸುವ ತತ್ವ ಸುಸ್ಪುಂವಲ್ಲ; ಸುಸ್ಪುವಾದರೂ ಸದ್ಯಕ್ಕೆ ಸಲ್ಲದು; ಅದರಿಂದ ಒಟ್ಟು ದೇಶ ದುರ್ಬಲವಾಗುತ್ತದೆ. ಅಂಶಗಳ ಕಡೆ ಮನಸ್ಸು ಹೋಗೊಂಡು ಒಟ್ಟಿನ ಹಿತಕ್ಕೆ ಅಡ್ಡಿಯಾಗುತ್ತದೆ; ಇದು ವಿರಸ ಪ್ರಭವ; ಇದರಿಂದ ಪ್ರಯೋಜನಕ್ಕಿಂತ ನಷ್ಟ ಕೆಚ್ಚು ಎಂದು ನುಡಿದವರು ಶ್ರದ್ಧಾಳುಗಳಿಗೆ ನಿರಾತ್ಸಾಹ ಉಂಟುಮಾಡುವರು. ಇದಕ್ಕೆ ಕೆಲವಿ ಮಾನ್ಯರಿಗ್ದಿದ ಆಂಧ್ರ ನೋದರರ ಆಕ್ಷೇಪ್ತರ ಇಷ್ಟವಿಲ್ಲದ ಮನಸ್ಸಿನಿಂದ ನೆರವೇರಿತು ಸಂತೋಷ ಸೌಹಾರ್ದಗಳಲ್ಲಿ ಹುಟ್ಟಬಹುದಾಗಿದ್ದ ಒಂದು ವ್ಯಾಪ್ತಿನಿರಪದಲ್ಲಿಯೂ ಕಹಿಯಲ್ಲಿಯೂ ಹುಟ್ಟಬೇಕಾಯಿತು. ದೇವರ ಪೂಜೆಯಂತೆ ನೆರವೇರಬೇಕಾದ ಕೆಲಸ ಭೂತದ ಆರಾಧನೆಯಂತೆ ನಡೆಯಿತು. ಇದೇನೆ ಇರಲಿ - ಆಂಧ್ರವ್ಯಾಪ್ತಿ ನಿರ್ಮಾಣದಿಂದ ಇತರ ಆಂಧ್ರ ಪ್ರಾಂತಗಳ ವಿಂಗಡಣೆಗೆ ಅವಕಾಶವೂ ಭರವಸೆಯೂ ಸಿಕ್ಕಿದೆ. ಇಂದಿನ ನಾಳೆ ಮುಂದಿನ ವರ್ಷದಲ್ಲಿ ತಪ್ಪಿದರೆ ಗಾಬರಿಯಾಗಿ ಮಗಿವುದರೊಳಗೆ ಕರ್ನಾಟಕರಾಜ್ಯ ಖಚಿತವಾಗಿ ನಿರ್ಮಿಸಲ್ಪಡುವುದೆಂದು ನನ್ನ ನಂಬಿಕೆ. ನುಂದಿನ ನಮ್ಮಳಿನದ ಹೊತ್ತಿಗೇ ಆ ಮಂಗಳ ಸಂಭವ. ನೆರವೇರಲಿ!

ಈ ನಂಬಿಕೆಗೆ ನೆರವಾಗುವ ಕಾರಣ ಬೇರೊಂದೂ ಉಂಟು ಈ ಸಮಸ್ಯೆ ವಿಶೇಷವಾಗಿ ದಕ್ಷಿಣ ಭಾರತಕ್ಕೆ ಸೇರಿದ್ದು. ಈಗ ಆಂಧ್ರವೇರೆಯಾಯಿತು ಜಾಣರಾದ ಮಹಾರಾಷ್ಟ್ರದ ಮಹಾ ನಾಯಕರು ತಮ್ಮಲ್ಲಿಯೇ ಒಡಂಬಡಿಕೆಗೆ ಒಂದು ಬೊಂಬಾಯಿ ಮಧ್ಯ ಪ್ರದೇಶಗಳಲ್ಲಿನ ಮಹಾರಾಷ್ಟ್ರ ಜನತೆಯನ್ನು ಜೆದರಿಸಿ ಒಂದು ಹೊಸ ಸಂಸ್ಥಾನವನ್ನು ರಚಿಸಿಕೊಡಬೇಕೆಂದು ಒಮ್ಮತದಿಂದ ಕೇಳುತಿದ್ದಾರೆ. ಅಂಥ ಪ್ರಬಲ ವಿಕೇಂಭೀಕರಣವನ್ನು ನಿವಾರಿಸುವುದ ಯಾರಿಗೂ ಅಶಕ್ಯವಾಗುವುದು ಕೇಂದ್ರವಪರು ಜೇಕೆಂದು ಜೇರೆಯಾಗಿ ನಿಲ್ಲಲೂ ಅವಕಾಶವುಂಟು. ಆಗ, ಖಚಿತವಾಗಿ ಉಳಿದಕನ್ನಡ ಭಾಗಗಳು ಸಂಘಟಿಸಿ ಒಂದಾಗಲು ಸರಮಾನು ಕೂಲ್ಯವುಂಟಾಗುತ್ತದೆ ನಮ್ಮ ವಿಷಯದಲ್ಲಿ ಪ್ರಧಾನಿ ನೆಹರೂರವರೂ ಈಚೆಗೆ ಸುಮುಖರಾದಂತಿದೆ-ಕರ್ನಾಟಕ ವಿಕೇಕರಣ ವಿಷಯ ಕಷ್ಟವಲ್ಲವೆಂದು ಅವರು ತಿಳಿದಿರುವರು. ಜಾಗರೂಕತೆ ತಪ್ಪದೆ, ಅದರ ಸಾಧನೆಗಾಗಿ ಮಾಡಬೇಕಾದ್ದನ್ನೆಲ್ಲ ಮಾಡುತ್ತಲೇ ಣ ಅತುರ ಪಟ್ಟು ಉಗ್ರ ಕ್ರಮ ಕೈಗೊಳ್ಳುವುದು ಬೇಡ "ಕೇಂದ್ರಕ್ಕೆ ಧಿಕ್ಕಾರ" ಎಂಬಂತಹ ಮಾತು ಆಡುವುದೂ ಬೇಡ ಅನು ತಪ್ಪು ಮಾತ್ರವಲ್ಲ—ಅತಿರೇಕವೂ ಆದೀತು. ಎಂದಿಗೂ ಅದು ತಕ್ಕುದಲ್ಲ. ಇಂಥ ಮಾತು ನಡತೆ ಬೆಳೆಯುವುದೆಂಬ ಭಯದಿಂದಲೇ ಈ ಜಟ್ಟಿ ಜೇಡನೆಂದು ನಾಯಕರೂ ನುದಿದಿರಲೂ ಸಾಕು. ಭಾರತದ ಕೇಂದ್ರ ಹೋದರೆ, ಯಾವ ವ್ಯಾಪ್ತಿ ಉಳಿದೀತು? ಅದನ್ನು ಕಾಪಾಡಿಕೊಂಡು ನಾವು ಸ್ವತಂತ್ರ [illegible] ಕೇಂದ್ರದ ಸೆರೆಯ [illegible]

ನೋಟೀಸು.

ಉಡ್ಡಿ ಡಿ. ಮು. ಕೋರ್ಟಿನಲ್ಲಿ.

S. C. No. 640/1953.

T. ಗೋಪಾಲಕೃಷ್ಣ ಪೈ —ಪಾದಿ.
ಮೆತ್ತು
ಮರ್ಬಿನ ಹೆಬ್ಬಾಡಿ ಕೆಂಪೋಡಿ ಮನೆ ಸುಹಾಬುಲ ಸೆಟ್ಟಿ —ಪ್ರತಿವಾದಿ.
ಇವನೊಗಾಗಿ

ಪ್ರತಿವಾದಿ: ಸುರ್ಬಿನ ಹೆಬ್ಬಾಡಿ ಕೆಂಪೋಡಿನವನೆ ಮಹಾಬಲ ಸೆಟ್ಟಿ. ಉಪ್ತಿತಾಲ್ಯು ಹಂದಾಡಿ ಗ್ರಾಮದಲ್ಲಿರುವನ.

ಸದ್ರಿ ಪ್ರತಿವಾದಿಗೆ ಈ ಮೂಲ್ಲ ತಿಳಿಯಪಡಿಸುವುದೇನಂದ್ರೆ ವಾದಿಯ ಅಂಗಡಿಯಲ್ಲಿ ನೀವು ತಾ. 15-11-1950ರ ಲಾಗ್ಗಾಕ್ಕ ನಮ್ಮಿಕೊಂಡು ಬಂದ ಟೀಪಾದೇವಿ ಬಾಬ್ತು ನಮ್ಮ ಮೇಲೆ ಬಾಕಿ ಇರುವ ಲೈಜೇಜನ್ನು ಬರಮಾಡಿಕೊಳ್ಳುವರೆ ದಾಕ್ಲು ಮಾಡಿದ ಮೇಲ್ಕಂಡ ಪಾವೆಯು ನಿನ್ನು ಆಳ್ಪಿರು ನೋಟೀಸು ಬಗ್ಗೆ ತಾ. 19 1 51ಕ್ಕೆ ಇಟ್ಟಿರು ಪಡ್ರಿಂದ ಆ ಕುರಿತು ನಿನ್ನುದೇಶಾದರೂ ಆಕ್ಷೇಪ ಪಗ್ಗೆಲೆ ಇದ ಬ್ಲ ಸದ್ರಿ ದಿನಸ ಪೂರ್ವಾಪ್ಯ ಗಂಟೆ 11ಕ್ಕೆ ನೀಲ್ಲುಂದ ಕೋರ್ಟು ಮುಂತೆ ಹಾಜ್ರಾಗಿ ಜ್ಞಾಪೀತು ಮಾಡಿಕೊಳ್ಳ ತಕ್ಕದ್ದು. ತಪ್ಪಿದಲ್ಲಿ ಕದ್ರಿ ವ್ಯಾಜ್ಯವನ್ನು ಒಂಟಿ ಪಕ್ಷವಾಗಿ ವಿಚಾರಣೆಮಾಡಿದ್ದು, ಅಂತ ನೀಲ್ಲುಂದ ಕೋರ್ಟಿನ ಸ್ಟಂಪು ಪ್ರಕಾರ ತಿಳಿಯಪಡ್ಡಿಯಜೆ.

K. Varadaraya Pai
[illegible]

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ
ನವಜೀವನ
ಎಂಬ
ಸೂತಿಕಾರಸಾಯನ



ಬಾಣಂತಿಯರ ಸಲುವಾಗಿಯೇ ದೇಲೆ ಸುತ್ತು ಸ್ವಕ್ಕತದ ಪೇಪ ಸ್ಥಿತಿಯನ್ನು ಸಿರ್ವೈಸಿ ತಯಾರಿಸಲ್ಪಟ್ಟ ಅಮೋಘ ಫಲವಾದ ಘೃತವನ್ನು ನರಸಿಯಸಿ.

ಪೆ[illegible] ಡಾ. ಯಂ ಸಿ ಶಾಸ್ತ್ರೀ, ಸುರ್ಲ [illegible]
ಕಂಪಿಬಾರ್ [illegible]

(೧೧ನೇ ಪುಟದಿಂದ)

ಪ್ರಾಂತಗಳನ್ನು ಕೈಶಮಾಡಿ. ಕುಗ್ಗಿಸಿ ಕೇಂದ್ರ ಹೇಗೆ ಬಲಗೊಂಡಿತು? ಕನ್ನಡಿಗರ ಚರಿತ್ರೆಯ ಸ್ವರೂಪ ಲಕ್ಷಣವಾಗಿರುವ ಸಭ್ಯತೆಯೂ ನಯ ಸಂಸ್ಕಾರ ತಾಳ್ಮೆಗಳೂ ಇಂಥ ಸಮಯದಲ್ಲಿ ಒದಗಲಿ. ಆದರೆ ಕರ್ನಾಟಕದ ನಿರ್ಮಾಣ, ಹೊಸ ವಿಂಗಡಣೆಯಲ್ಲಿ ಮೊದಲ ಗಣ್ಯತೆಪಡೆಯ ಬೇಕು; ನಮ್ಮ ಪ್ರಾಂತ ಆಗದಿದ್ದರೆ ಎರಡು ಕೋಟಿ ಜನಕ್ಕೆ ಪರಮ ಅನ್ಯಾಯವಾಗುತ್ತದೆ ಈ ಪ್ರಾಂತ ನಿರ್ಮಾಣವಾಗುವ ವರೆಗೂ ನಮ್ಮ ಮನಸ್ಸು ನೆಲೆಗೆನಿಲ್ಲದು. ಇಲ್ಲಿ ಕ್ಕೋದಗಳನ್ನು ನೆಲಸಲು ಬಿಡಬೇಡಿರಿ ಎಂದು ಈ ಸಮ್ಮೇಳನದವರು ಕೇಂದ್ರಕ್ಕೆ ಸ್ಪಷ್ಟವಾಗಿ ತಿಳಿಸೋಣ.

ವ್ಯಾಂತಪ ಪ್ರಗತಿಯಿಂದಲೇ ದೇಶದ ಪ್ರಗತಿಯಾಗಬಲ್ಲದು. ವ್ಯಾಂತಗಳನ್ನು ಕೇಳುವವರ ಬಗೆಗೆ ಕುತ್ಸಿತವಾದ ಮಾತುಗಳನ್ನಾಡಿ ಅವರನ್ನು ನಿರಾಕರಿಗೊಳಿಸದಿರಬೇಡಿರಿ. ಸರ್ವ ಸಮರ್ಥವಾದ ಕೇಂದ್ರ ಸರಕಾರ ಈ ವಿಷಯವನ್ನು ಕೂಲಂಕಷವಾಗಿ ವಿಚಾರಿಸಲಿ ಹಸ್ತು ಜನರಂತೆ ಕನ್ನಡಿಗರೂ ಏಳ್ಗೆಗೆ ಬರಲಿ. ಕನ್ನಡ ನಾಡಿನ ಭಾಗ್ಯ ಬೆಳೆಯಲಿ. ಒಟ್ಟು ರಾಷ್ಟ್ರದ ಇಷ್ಟೈಶ್ವರ್ಯದ ಭಾಗದಲ್ಲಿ ಒಂದಾದರೂ ಪಾಲು ಭಾರತದ ಕೀರ್ತಿ, ಶಕ್ತಿ, ಒಕ್ಕಟ್ಟುಗಳಿಗೆ ಸತತವಾಗಿ ತನ್ನ ಬೆಗಸಿನ ಎಲ್ಲ ವನ್ನೂ ನಿವೇದಿಸಿ ಬಾಗಲಿ; ತಾನು ಬಾಳಿ ಎಲ್ಲರನ್ನೂ ಬಾಳಿಸಲಿ.

ಪತ್ರಿಕೆಗಳ ಕರ್ತವ್ಯ

ಮುಂಬಯಿ ರಾಜ್ಯದ ಉಪಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಸಾಹಿತ್ಯ ಸಮ್ಮೇಳನದ ಅಂಗವಾಗಿ ನಿರ್ಮಿಸಿದ ಕಲಾ ಪ್ರದರ್ಶನವನ್ನು ಉದ್ಘಾಟಿಸಿ ಮಾಡುತ್ತಾ ಸಾರ್ವಜನಿಕರೂ ಸರಕಾರದವರೂ ಕನ್ನಡದ ಕಲಾವಿದರಿಗೆ ಎಲ್ಲ ಬಗೆಯಿಂದ ಪ್ರೋತ್ಸಾಹ ನೀಡಬೇಕೆಂದು ವಿನ್ನವಿಸಿಕೊಂಡರು. ಸ್ವಾಗತಾಧ್ಯಕ್ಷರಾದ ಶ್ರೀ ಎಸ್. ಎ. ಜೈವಂತರು ಮಂತ್ರಿಗಳನ್ನು ಬರಮಾಡಿಕೊಳ್ಳುತ್ತ-"ನಮ್ಮ ಕಲಾಕಾರರು, ಚಿತ್ರಕಾರರು, ಗಾಯಕರು, ನರ್ತಕರು—ದೇವರಿಗೆ ಮುಡಿವೆಂದೇ ತಮ್ಮ ಕಲೆಯನ್ನು ಬೆಳೆಯಿಸಿ, ಬಳಸಿ ಕೃತಾರ್ಥರಾದರು. ನಮ್ಮಲ್ಲಿ ಕಲಾಕಾರರಿಗೆ ಗಾಡಿಕಾರರೆಂದು ಸಾರ್ವಕನುಜ್ಞೆಯಿದೆ. ಇವರು ಶಿಲಾ ಸ್ಥಾಪತ್ಯ ಕಲೆಯಿಂದ ಜಗತ್ತನ್ನೆ ಬೆರಗು ಗೊಳಿಸುವಂತೆ ಕಲೆಯಲ್ಲಿ ಜೀವಕಳೆ ತುಂಬಿರುವರು. ಜೀವನದ ಅಂಗ ಪ್ರತ್ಯಂಗಗಳಲ್ಲಿ ಜೀವತ್ಕಳೆಯಾಗಿ ರಕ್ತವಾಗಿ ಹರಿಯುತ್ತಿರುವ ಈ ಕಲೆಗೆ ರಾಜಾಶ್ರಯ ಮತ್ತು ಜನತೆಯ ಪ್ರೋತ್ಸಾಹ ನಿರಂತರ ಸಲ್ಲಬೇಕಾದುದು ವಿಹಿತ" ಎಂದರು.

ಸಂಯುಕ್ತ ಕರ್ನಾಟಕ ದೈನಿಕದ ಸಹ ಸಂಪಾದಕರಾದ ಶ್ರೀ ನಾಯಕ ವೆಂಕಟ ರಾಯರು ಪತ್ರಿಕಾ ಗೋಷ್ಠಿಯ ಅಧ್ಯಕ್ಷ ಸ್ಥಾನದಿಂದ ಆಶುಭಾಷಣ ಮಾಡಿದರು- "ಸಾಹಿತ್ಯದಲ್ಲಿ ಪತ್ರಿಕಾ ಲೇಖನಾದ ನಿರ್ಣಯನೇಂಬ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಡುವುದು ನಿಜವಾಗಿ ಹಗುರಾದ ವಿಷಯವಲ್ಲ. ಸಾಹಿತ್ಯವು ಜನ ಜೀವನದ ಪ್ರತಿಬಿಂಬವೆಂಬ ಲಕ್ಷಣವು ಸರಿಯೆಂದು ಒಪ್ಪಿದಲ್ಲಿ ಆ ಜನಜೀವನಕ್ಕೆ ಅತ್ಯಂತ ನಿಕಟವರ್ತಿಯಾದ ಪತ್ರಿಕಾ ಲೇಖನವು ಸಾಹಿತ್ಯಕ್ಕೆ ಸಮೀಪದ ಬಂಧುವೆಂದು ಒಪ್ಪಲೇ ಬೇಕಾಗುತ್ತದೆ. ರಾಜಕೀಯ ಸ್ವಾತಂತ್ರ್ಯವು ಪ್ರಾಪ್ತವಾದಂದಿನಿಂದ ಭಾರತೀಯ ಪತ್ರಿಕೋದ್ಯಮವಲ್ಲಿ ಕ್ರಾಂತಿಕಾರಕ ಬದಲಾವಣೆಗಳು ತೊಡಗಿವೆ. ಅವುಗಳಲ್ಲಿ ದೇಶೀಯ ಭಾಷಾ ಪತ್ರಿಕೆಗಳ ಮಹತಿಯು ಬೆಳೆಯುತ್ತಿರುವುದು ಮುಖ್ಯವಾಗಿ ಗಮನಿಸತಕ್ಕ ಅಂಶ. ಆಂಗ್ಲರ ಪ್ರಭುತ್ವಕಾಲದಲ್ಲಿ ಆಂಗ್ಲಭಾಷಾ ಪತ್ರಿಕೆಗಳದ್ದೆ ಆವಸ್ತವ ಮಹತ್ವವು ಇಂದು ಕಡಿಮೆಯ್ಲಾಗುತ್ತಾ ಬರುವುದು ಸುಚಿಹ್ನೆ. ನಿರಾಯಾಸವಾಗಿಯೂ ಸಹಜ ಗತಿಯಿಂದಲೂ ಭಾರತೀಯ ಭಾಷಾ ಪತ್ರಿಕೋದ್ಯಮವು ದಿನದಿನಕ್ಕೆ ಪ್ರಗತಿಯನ್ನು ಹೊಂದುತ್ತಾ ತನ್ನ ನ್ಯಾಯವಾದ ಸ್ಥಾನವನ್ನು ಜನ ಜೀವನದಲ್ಲಿ ಬೇಗನೆ ಪಡೆ ಯುವ ಶುಭ ಶಕುನಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ. ಹಿಂದೀ ಭಾಷೆಯಲ್ಲಿ ಸುದ್ದಿ ಸಮಾಚಾರಗಳನ್ನು ಟೆಲಿಪ್ರಿಂಟರ್‌ನ ಮೂಲಕ ಪತ್ರಿಕೆಗಳಿಗೆ ಒದಗಿಸಬೇಕೆಂಬ ವಿಚಾರ ಗಂಭೀರ ಪರಿಶೀಲನೆಯಲ್ಲಿದೆ. ಅಂತಹ ಸೌಕರ್ಯವು ದೊರೆತರೆ ಕನ್ನಡವೇ ಮೊದಲಾದ ವ್ಯಾದೇಶಿಕ ಭಾಷಾ ಪತ್ರಿಕೆಗಳ ಕೆಲಸ ಹಗುರವಾಗುವುದು. ಆಂಗ್ಲ ಭಾಷೆಯಲ್ಲಿ ಬರುವ ವಾರ್ತೆಗಳನ್ನು ಕನ್ನಡಿಸುವುದಕ್ಕಿಂತ ಹಿಂದೀ ಭಾಷೆಯಲ್ಲಿ ಬರುವ ಸುದ್ದಿಗಳನ್ನು ಕನ್ನಡಿಸುವುದು ಸುಲಭ. ಅನೇಕ ನಾರಿ ಭಾಷಿಕ ಶಬ್ದಗಳು ಭಾರತೀಯ ಭಾಷೆಗಳಿಗೆ ಸಾಮಾನ್ಯವಾಗಿರುವುದರಿಂದ ಭಾಷಾಂತರವು ಕಠಿಣವಾಗುವುದಿಲ್ಲ. ಜನರ ಸ್ವಾಭಾವಿಕ ಪ್ರಗತಿಗೆ ಅನುಕೂಲವಾದ ಭಾರತೀಯ ಭಾಷೆಗಳು ಆನರ ಶಿಕ್ಷಣದ, ರಾಜಕೀಯ ವ್ಯವಹಾರದ, ವಾಣಿಜ್ಯ ವಿನಿಮಯದ, ಸಂಸ್ಕೃತಿಕ ಆದಾನ ಪ್ರದಾನದ ಮಾಧ್ಯಮಗಳಾಗುವುದು ಅಪರಿಹಾರ್ಯ. ಈ ಸಂಗತಿಗಳನ್ನು ಚೆನ್ನಾಗಿ ಲಕ್ಷ್ಯದಲ್ಲಿಟ್ಟುಕೊಂಡು ಅಂತಹ ಆವಶ್ಯಕತೆಗಳಿಗೆ ತಕ್ಕ ಕಸುವನ್ನು ಭರತೀಯ ಭಾಷೆಗಳು ಪಡೆಯುವಂತೆ ವಿಚಾರ ಪೂರ್ವಕ ಪ್ರಯತ್ನಗಳನ್ನು ಈಗಿಂದಲೇ ಭಾರತೀಯ ಭಾಷಾ ಪತ್ರಿಕೆಗಳು ಕೈಗೊಳ್ಳಬೇಕಾಗುವುದು.

ನಿಧಾಯಕ ಮನೋ ಭೂಮಿಕೆ

ಭಾರತದ ರಾಜಕೀಯ ರಂಗದಲ್ಲಿ ಪ್ರಜಾ ಪ್ರಭುತ್ವ ಪದ್ಧತಿಯ ಅಂಗೀಕಾರದಿಂದ ಉಂಟಾದ ಹೊಸ ಸ್ಪಷ್ಟವೇರ್ಪಡ ಸಂಪೂರ್ಣ ಕಲ್ಪನೆಯು ಇಂದಿನ ಹಾಗೂ ಮುಂದಿನ ಪತ್ರಿಕೋದ್ಯಮಿಗಳಲ್ಲಿರುವುದು ಆಗತ್ಯ. ರಾಷ್ಟ್ರದ ಸಾರ್ವಾಂಗಿಕ ಸ್ವಗತಿಯನ್ನು ಸಾಧಿಸುವ ದೃಷ್ಟಿಯಿಂದ ಕೈಕೊಳ್ಳಲಾಗುತ್ತಿರುವ ಮಹಾ ಯೋಜನೆಗಳ ಭಾವ್ಯತೆಯನ್ನು ಮತ್ತು ಅವುಗಳ ಮೂಡಿಯನ್ನು ಹೊರಲುಬ್ಬುಕ್ಕರಾಗಿರುವ ಪ್ರಜಾ ಧುರೀಣರ ಧೈರ್ಯ ಸ್ಥೈರ್ಯಗಳನ್ನು ಹಾಗು ಆ ಯೋಜನೆಗಳ ಯಶಸ್ವಿನಿಂದ ಮಹಾ ಜನಕ್ಕಾಗಲಿರುವ ಅದ್ಭುತ ಪ್ರಯೋಜನವನ್ನು ಲಕ್ಷ್ಯದಲ್ಲಿಟ್ಟುಕೊಂಡು ವಿಧಾಯಕ ಮನೋ ಭೂಮಿಕೆಯನ್ನು ಆಳವರಿಸಿಕೊಂಡು ಕನ್ನಡದ ಪತ್ರಿಕೋದ್ಯಮಿಗಳು ಮುನ್ನಡೆಯುವುದು ನಾಡಿನ ಏಳಿಗೆಗೆ ಹಿತಕರ. ಆರ್ಥಾತ್ ಪ್ರಜಾಪ್ರಭುತ್ವದಲ್ಲಿ ಆತ್ಮಸಂಯಮದ ಅಂಕುಶವೇ ಪ್ರಭಾವಿಯಾಗುವೆಂಬುದನ್ನು ಮನಗೆಂದು, ಅದಕ್ಕನುಸಾರ ವರ್ತಿಸುವ ಮನೋಧರ್ಮವನ್ನು ಜನ ಸಾಮಾನ್ಯರಲ್ಲಿ ನಿರ್ಮಿಸುವ ಗುರುತರವಾದ ಹೊಣೆ ಪತ್ರಿಕೆಗಳ ಮೇಲಿರುತ್ತದೆ. ಇನ್ನು ಜಾಲ್ಯನಸ್ಥಿಯಲ್ಲಿರುವ ಸತ್ರಿಕೋದ್ಯಮಕ್ಕೆ ವಾಜ್ಞಯ ತಪಸ್ಸಿನ ಆವಶ್ಯಕತೆ ವಿಶೇಷವಾಗಿರುತ್ತದೆ. ಆತ್ಮಸಂಯಮದ ಕಟ್ಟಿಗೊಳಗಾಗಿ ಪತ್ರಿಕೋದ್ಯಮಿಯು ತನ್ನ ವೃತ್ತಿ ವ್ಯವಸಾಯವನ್ನು ನಡೆಸಲು ಸರ್ಥರಿಸಿದರೆ ಆತನ ಬದಲಾಗಿಯಲ್ಲಿ ವಿಚಾರ ವಿಕೇಗಳ ಪ್ರಭಾವವು ಹೆಚ್ಚಿಗೆ ಕಂಡು ಬಂದು ವಿಕೃತ ಮನೋಭೂಮಿಕೆಗೆ ಅಸ್ಪದವಿಲ್ಲದಂತಾಗುವುದು. ಆಗ ಆತನ ಮಾತಿಗೆ ಆಸಕ್ತಿಶವಾದ, ಅಪೂರ್ವವಾದ ಮಹತ್ವಪ್ರಾಪ್ತವಾಗುವುದು.

ಈ ಸಂದರ್ಭದಲ್ಲಿ ಶ್ರೀ ಶಿವರಾಮ ಕಾರಂತರು "ಪತ್ರಿಕೋದ್ಯಮದಲ್ಲಿ ಶುಚಿರುಚಿ" ಎಂಬ ಕುರಿತು ಮಾತನಾಡುತ್ತ ಜನರಲ್ಲಿರುವ ಮನೋದೌರ್ಬಲ್ಯವನ್ನು ಹುಡುಕಿಕೊಂಡು, ಅದನ್ನು ಕಣ್ಣು ಕುಕ್ಕಿಸಿ ಮೊಂದಿಡುವುದಷ್ಟೆ ಅಲ್ಲ ಚಿಯೆಂದರು. "ಅನ್ನ ಮಂತ್ರಿಯನ್ನು ಬರಗಾಲ ಮಂತ್ರಿಯನ್ನಾಗುವುದೂ ಸರಿಯಲ್ಲ. ನಮ್ಮವರಿಗೆ ಬುದ್ಧಿದಾರಿದ್ರ್ಯವಿನೆಯೆನ್ನುವುದೂ ಸಲ್ಲದು. ಸಾಧಾರಣಕಾರವರು ವಿಷಯಕ್ಕೆ ಬೇಕಾಗುವಷ್ಟಲ್ಲ ಪರಿಶ್ರಮದಿಂದ ಸಂಗ್ರಹಿಸಿ, ವಿವೇಚಿಸಿ ಬರೆದರೆ ಪತ್ರಿಕೆಯು ಶುಚಿರುಚಿಯಿಲ್ಲದೆ" ಎಂದರು.

ಯಕ್ಷಗಾನ ಕಲೆಯ ಮಹತ್ವ

ಮುಂದೆ ಯಕ್ಷಗಾನ ಗೋಷ್ಠಿ ನಡೆದಾಗ, ಅಧ್ಯಕ್ಷರಾದ ಶ್ರೀ ಕೆ. ಏ. ವೆಂಕಪ್ಪ ಶೆಟ್ಟಿಯವರ ಪರಿಚಯ ಮಾಡಿಕೊಡುತ್ತಾ ಶ್ರೀ ಕಾರಂತರು "ಕಳೆದ ೩೦ ವರ್ಷಗಳಿಂದ ಯಕ್ಷನಾಟಕ ಕಲೆಯನ್ನೂ ಆರಂಭಿಸಿ ಪ್ರಸಿದ್ಧಿ ಪಡೆದ ನಂಕಪ್ಪ ಶೆಟ್ಟರ ಭಾರತದ ಗುರುಕುಲವೆಂಬ ಯಕ್ಷಗಾನ ಪ್ರಬಂಧಕ್ಕೆ ಈ ವರ್ಷ ಮದ್ರಾಸು ಸರಕಾರವ ಬಹುಮಾನ ದೊರೆತಿದೆ" ಎಂದರು. ಅಧ್ಯಕ್ಷರು ಯಕ್ಷಗಾನದ ಪೂರ್ವ ಪರಂಪರೆಯ ಸಿಂಹಾವಲೋಕನವನ್ನು ಮಾಡಿ ಕನ್ನಡ ಸಾಹಿತ್ಯದಲ್ಲಿ ಯಕ್ಷಗಾನಕ್ಕಿರುವ ಮಹತ್ವವನ್ನು ನಿವರಿಸಿದರು. "ಜನಪದ ಸಾಹಿತ್ಯಗಳಲ್ಲಿ. ಯಕ್ಷಗಾನವೇ ಶ್ರೇಷ್ಠ. ದ್ರಾವಿಡ ಭಾಷೆಗಳಲ್ಲಿ ಯಕ್ಷಗಾನವು ಬೇರೆ ಬೇರೆ ಶಬ್ದಗಳಿಂದ ಸಿದ್ಧಿ ಹೊಂದಿದೆ. ಕೇರಳದ ಕಥಕ್ಕಳಿಯಿಲ್ಲರಿಯವ ಶುದ್ಧ ಸೃದಂಗ ಚೆಂಡೆಗಳೆಂಬ ವರ್ಜ್ಯ ವಾದ್ಯಗಳು, ಜಾಗಟೆ, ತಾಳ, ಚಕ್ರತಾಳಗಳೆಂಬ ಘನವಾದ್ಯಗಳು, ವೇಷ ಭೂಷಣಗಳು ಕನ್ನಡದಲ್ಲಿಲ್ಲ ಇವೆ. ಕೇರಳದವರು ಹಸ್ತ ಮುದ್ರಿಕೆಗಳ ಪ್ರದರ್ಶನದಿಂದ ಮನಕ ನಾಟಕವಾಡಿದರೆ, ಕನ್ನಡದ ಬಯಲಾಟದವರು ಪಾತ್ರವರ್ಗದ ವಕ್ತೃತ್ವ ಕಲೆಯನ್ನು ತೋರಿಸುವರು. ಹೀಗೆ ಕನ್ನಡದ ಮೂಕನಾಟಕವು ಅಭಿನಯ ಪ್ರಾಗೂ ನಕ್ತೃತ್ವ ಕಲೆಗಳಿಂದ ಜನಪದಕಲಾ ಶಿರೋಮಣಿ ಎನಿಸಿದೆ. ಮರಾತಿ ನಾಟಕ ಕಲೆಗೆ ಕರ್ನಾಟಕದ ಬಯಲಾಟಗಳೇ ಸ್ಫೂರ್ತಿ ಕೊಟ್ಟವು. ಕನ್ನಡದ ಪಳ್ಳಿ ಮೂಲೆಗಳಲ್ಲಿ ಯಕ್ಷಗಾನ ದರಾವತಾರದ ಬಯಲಾಟಗಳೆಂದರೆ, ಆಮೊಂದು ಹಬ್ಬದೂಟದಂತೆ, ಸಹಭೋತ್ಸವದಂತೆ ಮನನೋಪಕವಾದುದ್ದು. ಗ್ರಾಮಾಂತರಗಳ ಜನರಿಗೆ ರಾಮಾಯಣ, ಮಹಾಭಾರತಗಳ ವಿಭೂತಿ ಪುರುಷರ ಚರಿತ್ರೆಗಳನ್ನು ನಾಟ್ಯಾಭಿನಯ ಪ್ರದರ್ಶನಗಳಿಂದ ಬೋಧಿಸುವ ರಾತ್ರಿ ಶಾಲೆಯೇ ಯಕ್ಷಗಾನ ನಾಟಕ. ಇಂತಹ ಕಲೆ ಸರ್ವಾಂಗ ಸುಂದರವಾಗಬೇಕಿದ್ದರೆ ಅದರ ಪುನರ್ಘಟನೆ ಮಾಡಬೇಕು; ಅದನ್ನು ಉದ್ಧರಿಸಬೇಕು" ಎಂದರು

ವಿಜ್ಞಾನ—ತತ್ವಜ್ಞಾನ

ಬಳ್ಳಾರಿಯ ವೀರಶೈವ ಕಾಲೇಜಿನ ಪ್ರಿನ್ಸಿಪಾಲರಾದ ಪಡುಕೋಣೆ ರಮಾನಂದ ರಾಯರು ವಿಜ್ಞಾನ ಗೋಷ್ಠಿಯ ಅಧ್ಯಕ್ಷ ಸ್ಥಾನದಿಂದ ನಾಡಿದ ಭಾಷಣದಲ್ಲಿ ವಿಜ್ಞಾನ ಮತ್ತು ತತ್ವಜ್ಞಾನಗಳು ಇದೀಗ ತೀರ ಸಮೀಪವರ್ತಿಗಳಾಗಿ ಬರತೊಡಗಿವೆಯೆಂದೂ ನಮ್ಮ ಶ್ರುತಿ, ಸ್ಮೃತಿ, ಪುರಾಣಗಳಲ್ಲಿನ ವಾರ್ತಾನಿಕ ಪರಂಪರೆಗೆ ಹೊಂದಿಕೊಳ್ಳುವ ರೀತಿಯಲ್ಲಿ ಇಂದಿನ ವಿಜ್ಞಾನವಾದವು ಬೆಳೆಯುತ್ತಲಿವೆಯೆಂದೂ ಅಭಿಪ್ರಾಯಪಟ್ಟರು. "ನಮ್ಮ ಪ್ರಾಜ್ಞರೆಲ್ಲ ನಿಸರ್ಗದ ಶೋಧನೆಗಿಂತಲೂ ಹೆಚ್ಚಾಗಿ ಆತ್ಮ ಶೋಧನೆಗೆ ಪ್ರಾಶಸ್ತ್ಯ ಕೊಟ್ಟದರಿಂದಲೇ ಪಾಶ್ಚಾತ್ಯ ದೇಶಗಳಲ್ಲಿ ಬೆಳೆದಂತೆ ನಮ್ಮಲ್ಲಿ ವಿಜ್ಞಾನ ಮುಂದರಿಯಲಿಲ್ಲ. ಹಾಗೆಂದು ನಮ್ಮ ಪೂರ್ವಿಕರು ವಿಜ್ಞಾನವನ್ನು ಸರ್ವಥಾ ಕಡೆಗಾಣಿಸಿರಲಿಲ್ಲ—ವ್ಯವಹಾರಿಕ ವಿಜ್ಞಾನದಲ್ಲೂ ವಿಚಾರಾತ್ಮಕ ವಿಜ್ಞಾನದಲ್ಲೂ ಅವರು ಆಸಕ್ತಿಕ ಸಂಗತಿಗಳಲ್ಲಿ ಆಗಿನ ನಾಗರಿಕ ಜನಾಂಗಗಳಿಗಿಂತಲೂ ಮುಂದರಿದಿದ್ದರು.

ಹೊಸ ಯುಗದಲ್ಲಿ ಕಾಲಿಟ್ಟ ನಮಗೆ ಹೊಸದಾದ ಭಾವನೆಗಳನ್ನು ಒಸಗಿಸಿಕೊಳ್ಳುವುದು ಪಥ್ಯವೆನಿಸಿದೆ—ಈ ಹೊಸ ವಿಚಾರದಂತೆ ನಮ್ಮ ವಿಜ್ಞಾನವನ್ನೆಲ್ಲ ಜಡವಸ್ತು, ಆಕಾಶ ಮತ್ತು ಕಾಲಗಳೆಂಬ ಸೂರಲು ಆಂಶಗಳ ಮೇಲೆ ಹೊಂದಿಸಬಹುದು. ದಿನಾಸ್ಥೀನರು ಕೊಟ್ಟರುವ ವಿಶ್ವದ ಚಿತ್ರದಲ್ಲಿ ವಸ್ತು, ಕಾಲ ಇವುಗಳಿಗೆ ಸ್ವತಂತ್ರವಾದ ವ್ಯಕ್ತಿತ್ವವನ್ನಿಲ್ಲ. ಆಕಾಶ—ಎಂಬ ಲಿಬಿತವ ದ್ರವ್ಯದಲ್ಲಿ ನಮ್ಮ ಅನುಭವಕ್ಕೆ ಬರುವ ವಸ್ತುಗಳೆಲ್ಲ ಬರೀ ಗ್ರಂಥಿಗಳು. ಅದ್ಭುತ ಸಂಶೋಧನ ಸಾಧಿಸಿದ ವಿಜ್ಞಾನದ ಈ ಮಾಹಿತಿಯನ್ನ ವಲೋಕಿಸಿದರೆ ಬ್ರಹ್ಮಾಣ್ಡಕೋಶ ನಿಷ್ಕತ್ತಿನಲ್ಲಿ ಮಹಾ ವಾಕ್ಯಗಳಲ್ಲಿ ಆಡಕವಾಗಿರುವ ಸತ್ಯಕ್ಕೆನೇ ನಮ್ಮ ವಿಜ್ಞಾನವ ಇಂದಿನ ನಿಜಾರಗಳು ಧಾವಿಸುತ್ತಾವೆಂದು ನಿಶಿತವಾಗುತ್ತದೆ" ಎಂದರು.

ಸ್ವೀಕೃತ ಗೊತ್ತುವಳಿಗಳು

ಬಹುರಂಗ ಅಧಿವೇಶನದ ಮಹತ್ವವ ಕೆಲವು ಗೊತ್ತುವಳಿಗಳು ಸ್ವೀಕಾರಗೊಂಡವು. ಇವುಗಳಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸಲು ಆಯೋಗವ ನೇಮಿಸುಗೊಂಡಿರುವುದನ್ನು ಸ್ವಾಗತಿಸಿ ಕರ್ನಾಟಕ ರಾಜ್ಯವು ಬೇಗ ನಿರ್ಮಿಸಲ್ಪಡುವುದೆಂದು ಆಶೋತ್ಕಗೊಳಿಸುವ ರೀತಿಯ ಇಂತಿದೆ-

"ಭಾರತ ಸರಕಾರವು ವ್ಯಾಂತಗಳ ಪುನರ್ರಚನೆಯ ವಿಷಯವನ್ನು ಪರಿಶೀಲಿಸಿ ಸಲಹೆ ಕೊಟ್ಟು ಉಚ್ಚಾಧಿಕಾರಿ ಆಯೋಗ ನೇಮಿಸಿರುವುದನ್ನು ಈ ಸಮ್ಮೇಳನ ಸ್ವಾಗತಿಸುತ್ತದೆ; ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಧೋರಣೆಗೆ ಅನುಸಾರವಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬೆಳವಣಿಗೆಯಾಗುವುದಕ್ಕೆ ನೆರವಾಗುವಂತೆ ಶ್ರೀಸ್ಥಳದಲ್ಲಿ ಕರ್ನಾಟಕಪ್ರಾಂತ ರಚನೆಯಾಗುತ್ತವೆಂದು ನಂಬುತ್ತಾನೆ. ಈ ಸಂದರ್ಭದಲ್ಲಿ ಸಂಬಂಧಪಟ್ಟ ಸೋದರ ಭಾಷಾ ಬಂಧುಗಳು ಸ್ನೇಪ ಸೌಹಾರ್ದಗಳಿಂದ ಸಹಕಾರ ನೀಡುವರೆಂದು ಸಮ್ಮೇಳನ ಆಶಿಸುತ್ತದೆ."

ಸಮ್ಮೇಳನವು ಕನ್ನಡಕ್ಕೊಸ್ಕರ ಪ್ರಯತ್ನಿಸುವ ಮುಮ್ಮನೀಯರ ಸಂಗತಿಯಲ್ಲಿ ಮುಖ್ಯವೈಕ್ಯಪಡಿಸುವ, ಆಕಾಶವಾಣಿಯಲ್ಲಿ ಚಿತ್ರರಿಸಿದ ಕಾರ್ಯಕ್ರಮಗಳ ಸೌಮ್ಯವನ್ನು ಲೇಖಕರಿಗೆ ಕೊಡಬೇಕೆನ್ನುವ, ತಾಲೂಕಿನ ಮುಖ್ಯ ಸ್ಥಳಗಳಲ್ಲಿ ಸಾಹಿತ್ಯ ಸಂಘಗಳ ಸ್ಥಾಪನೆಯಾಗಬೇಕೆನ್ನುವ, ಕನ್ನಡದಲ್ಲಿಯೂ ಕೇಂದ್ರ ಸರಕಾರವು ಸಾಕ್ಷಿ ಚಿತ್ರಗಳನ್ನು ತಯಾರಿಸಬೇಕೆಂಬ ಒತ್ತಾಯಿಸುವ, ಪ್ರಾಚೀನ ಕವಿಗಳ ಕೃತಿಗಳನ್ನು ಪ್ರಕಟಿಸಬೇಕೆಂದು ಸಾಹಿತ್ಯ ಪರಿಷತ್ತನ್ನು ವಿನಂತಿಸುವ, ಯಕ್ಷಗಾನ ನಾಟಕ ಕಲೆಗೆ ಸರಕಾರ ಧನಸಹಾಯ ನೀಡಿ ಪ್ರೋತ್ಸಾಹಿಸಬೇಕೆನ್ನುವ ಗೊತ್ತುವಳಿಗೂ ಅಂಗೀಕೃತವಾದವು.

ಅಧ್ಯಕ್ಷರು ಸಮಾರೋಪ ಭಾಷಣದಲ್ಲಿ "ಸಮ್ಮೇಳನದ ವ್ಯವಸ್ಥೆಯನ್ನು ಚೆನ್ನಾಗಿ ನಾಡಿಸಿ ಸಂಘ ದವರ ಉತ್ಸಾಹ ಮತ್ತು ಪ್ರಯತ್ನಗಳನ್ನು ಪ್ರಶಂಸಿಸಿ, ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನೆರವೇರುವಂತೆ ಸಹಕರಿಸಿದ ಕುಟುಂಬಿಯ ನಾಗರಿಕರಿಗೆ ಆಭಿನಂದನೆಗಳನ್ನು ತಿಳಿಸಿದರು. "ಸಮ್ಮೇಳನಕ್ಕೆ ಕನ್ನಡಿಗರು ಆಭೂತಪೂರ್ವ ಬೆಂಬಲವನ್ನೂ ನೀಡಬೇಕು. ಬರೀ ಟೀಕೆಗಳಲ್ಲಿ ಅನಕ್ತವಾಗುವುದಕ್ಕಿಂತ ವಿಧಾಯಕ ಕೆಲಸಗಳಲ್ಲಿ ಮುನ್ನುಗ್ಗಬೇಕು." ಎಂದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಎ. ಎನ್. ಮೂರ್ತಿ ರಾಯರು ಮುಂದಿನ ಸಮ್ಮೇಳನವನ್ನು ನಡೆಸಲು ಧಾರವಾಡ, ಸ್ಯೆಸೂರುಗಳಿಂದ ಆಧಿಕೃತ ಹಾಗೂ ಬೆಳಗಾಂಖಿಯಿಂದ ಅನಧಿಕೃತ ಆಮಂತ್ರಣಗಳು ಬಂದಿವೆಯೆಂದು ಹೇಳಿದರು.

ಸಮ್ಮೇಳನ ಕಾಲದಲ್ಲಿ ಮನೋರಂಜನೆಗಾಗಿ ಇತರ ಚಟುವಟಿಕೆಗಳನ್ನೊಳಗೊಂಡ ವಿವಿಧ ಕಾರ್ಯಕ್ರಮಗಳು ಜರಗಿ, ನೆರೆದ ಐದಾರುಸಾವಿರ ಜನರ ಮನಸ್ಸಿನ ಉತ್ಸಾಹವನ್ನು ನೀಡಿಸಿದವು.

Published, Printed & Published By K. H. Shetty at the Navayuga Press, Udipi, S. India.

Regd. No M. 3618

Licence No 31
Licensed to Post without Prepayment.

ನವಯುಗ

Vol.33 No.19 14-1-1954 ವರ್ಷ ೩೩ ವಾರ ೧೯

ಏಕೀಕರಿಸುವ ಘಟಕ

ಶಾಂತಿಕಾಲದಲ್ಲಿ ಆರ್ಥಿಕ ಪ್ರಗತಿಯನ್ನೂ ಸಾಮಾಜಿಕ ಆಭ್ಯುದಯವನ್ನೂ ಕೈಗೂಡಿಸುವುದಕ್ಕೆ ಮತ್ತು ಯುದ್ಧದ ಗಳಿಗೆಯಲ್ಲಿ ರಾಷ್ಟ್ರದ ಭದ್ರತೆಯನ್ನು ಕಾಯ್ದುಕೊಂಡು ಸ್ವಾತಂತ್ರ್ಯದ ರಕ್ಷಣೆ ಮಾಡುವುದಕ್ಕೆ ಸಮರ್ಥವಾದ ಸರಕಾರವನ್ನು ಒಂದು ದೇಶ ಪಡೆದಿರುವುದು ಅತ್ಯಗತ್ಯ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಪಕ್ಷಸಂಘಟನೆಯೇ ಆಧಾರಭೂತವಾದ ಶಾಸನಾಂಗ ಅಸ್ತಿತ್ವದಲ್ಲಿದೆ – ಆದುದರಿಂದ ಸರಕಾರ ರಚಿಸುವ ಪಕ್ಷ ಸಬಲವೂ ಸಮರ್ಥವೂ ಆಗಿದ್ದರೆ ಮಾತ್ರ ರಾಷ್ಟ್ರದ ಕಷ್ಟಾರ್ಜಿತ ಸ್ವಾತಂತ್ರ್ಯವು ರಕ್ಷಿಸಲ್ಪಟ್ಟು, ಸಾರ್ವಾಂಗಿಕವಾದ ಏಳಿಗೆಯನ್ನು ಕೈಗೂಡಿಸಲು ಸಾಧ್ಯವಾಗುವುದು ಜನತೆಯ ಬೆಂಬಲವನ್ನು ನಿಃಸಂದಿಗ್ಧವಾಗಿ ಪಡೆದುಕೊಂಡು ಬಾಷ್ಪವನ್ನು ಮುನ್ನಡೆಯಿಸಬಲ್ಲ ಯೋಗ್ಯತೆ ಭಾರತದಲ್ಲಿ ಕಾಂಗ್ರೆಸು ಪಕ್ಷಕ್ಕೆ ಇರುವುದೆಂಬ ಸಂಗತಿ, ಆ ಪಕ್ಷದ ಹೆಸರಿನಲ್ಲಿ ಚುನಾವಣೆಯ ರಂಗದಲ್ಲಿ ಹೋರಾಡಿ ಗೆದ್ದು ಬಂದ ಪ್ರತಿನಿಧಿಗಳೇ ಸರಕಾರದ ಸೂತ್ರವಹಿಸಿರುವುದರಿಂದ, ಜೆನ್ನಾಗಿ ವ್ಯಕ್ತಗೊಂಡಿದೆ. ಆದರೂ ಬೇರೆ ಕೆಲವು ಪಕ್ಷಗಳೂ ಪ್ರಾಬಲ್ಯಕ್ಕೆ ಬಂದಂತೆ ತೋರುತ್ತಿರುವುದರಿಂದ, ಮತ್ತು ಕಾಂಗ್ರೆಸವಬಲ ದಿನೇ ದಿನೇ ಕ್ಷೀಣಿಸುತ್ತಿರುವಂತೆಯೂ ಭಾಸವಾಗುವುದರಿಂದ-ಕಾಂಗ್ರೆಸದ ಮಹತ್ವವನ್ನು ಮನವರಿಕೆ ಮಾಡಿತೊಳ್ಳುವುದೂ ಹೊಸ ಸ್ಫೂರ್ತಿ ಮತ್ತು ಚೈತನ್ಯಗಳು ಈ ಮಹಾ ಸಂಸ್ಥೆಯಲ್ಲಿ ತುಂಬಿಕೊಳ್ಳುವಂತೆ ಮಾಡುವುದೂ ಅಪೇಕ್ಷಣೀಯವಾಗಿರುತ್ತದೆ

ಕಲ್ಯತ್ತೆಯಲ್ಲಿ ಸವಿಾಪದ ಕಲ್ಯಾಣಿಯೆಂಬಲ್ಲಿ ಮುಂದಿನ ವಾರ ಅಖಿಲ ಭಾರತ ಕಾಂಗ್ರೆಸು ಮಹಾಧಿವೇಶನ ಜರಗುತ್ತಿದೆ—ಇದಕ್ಕೋಸ್ಕರ ಸುದೀರ್ಘವಾದ ಕಾರ್ಯಕ್ರಮವೂ ಸಿದ್ಧಗೊಂಡಿದೆ ಬಹುಂಗ ಅಧಿವೇಶನವೇ ಮುಂತಾದ ಮುಖ್ಯವಾದ ಕಾರ್ಯಕ್ರಮಗಳೊಂದಿಗೆ—ಗ್ರಾಮೋದ್ಯೋಗಗಳ ಪ್ರದರ್ಶನದಿಂದ ತೊಡಗಿ ಯುವಕರ ಪರಿಷತ್ತು, ಮಹಿಳಾ ಗೋಷ್ಠಿ, ಬಾಲಕರಕೂಟ, ಮನೋರಂಜನೆಯಂಥ ಗಾಣ ಕಾರ್ಯಕ್ರಮಗಳೂ ನಡೆಯುತ್ತವೆ. ದೇಶದ ಪ್ರಕೃತ ಪರಿಸ್ಥಿತಿಯ ಸಿಂಹಾವಲೋಕನವನ್ನು ಮಾಡಿ, ಯಾವ ಮಾರ್ಗದಲ್ಲಿ ಇನ್ನುಮುಂದೆ ನಡೆಯಬೇಕೆಂದು ತೀರ್ಮಾನಿಸುವುದು ಈ ಬಗೆಯ ಅಧಿವೇಶನಗಳ ವೈಶಿಷ್ಟ್ಯ ಪ್ರಕೃತ ಕಾಂಗ್ರೆಸು ಪ್ರಜ್ಞೆತಿಗಳೇ ಸರಕಾರದ ಸೂತ್ರವನ್ನು ಕೈಗೆ ತೆಗೆದುಕೊಂಡಿರುವುದರಿಂದ, ಕಾಂಗ್ರೆಸಿನ ನಿರ್ಣಯ ಹಾಗೂ ಮಾರ್ಗದರ್ಶನಗಳೇ ರಾಷ್ಟ್ರೀಯ ಧೋರಣೆಯಾಗಿ ಪರಿಣಮಿಸುವುದು ಸಹಜ ಈ ದೃಷ್ಟಿಯಿಂದ ದೇಶದ ವ್ಯವಹಾರವನ್ನು ಕಲ್ಯಾಣಿಯ ಕಾಂಗ್ರೆಸು ತೋರಿಸುವ ಚಟುವಟಿಕೆಗಳ ಕಡೆಗೆ ಗಮನ ಕೊಡಬೇಕಾಗುತ್ತದೆ.

ಕಾಂಗ್ರೆಸು ಸಂಸ್ಥೆಯು ನಿರ್ವಹಿಸಲಿರುವ ದೊಡ್ಡ ಪಾತ್ರದ ಕುರಿತು ಉದ್ದುದ್ದ ಮಾತು ಕೇಳುತ್ತೇವೆ—ಸ್ವಾತಂತ್ರ್ಯ ಪೂರ್ವದಲ್ಲಿ ಯಾವುದೇ ತೆರನಾದ ಸಂಕುಚಿತ ಬಾವನೆಗೆ ಎಡೆ ಇಲ್ಲದೆ, ಉಜ್ವಲ ರಾಷ್ಟ್ರಭಕ್ತಿಯಿಂದಲೂ ಅಪಾರವಾದ ತ್ಯಾಗ ಸಹಿಷ್ಣುತೆಗಳಿಂದಲೂ ಸರ್ವಸ್ವವನ್ನೂ ಬಲಿಗೊಟ್ಟು ಹೋರಾಡುವ ಮನೋಭಾವವು ಕಾಂಗ್ರೆಸಿನಲ್ಲಿ ಆಮೂಲಾಗ್ರವಾಗಿ ವ್ಯಾಪಿಸಿದ್ದಿತು. ನಿಶ್ಚಿತ ಧ್ಯೇಯ ಸುತ್ತ ವನ್ನು ಕೈಗೂಡಿಸುವ ದೃಢವಾದ ಸಂಕಲ್ಪ ಹಾಗೂ ಅದಕ್ಕೆ ತಕ್ಕುದಾದ ಸಮಂಜಸವಾದ ಸಾಧನಾ ಮಾರ್ಗಗಳು ಆಗ ಕಾಂಗ್ರೆಸಿಗರಿಗೆ ಜನಾನುರಾಗನನ್ನೂ ಸಹಾನು ಭೂತಿ ಸಹಕಾರಗಳನ್ನೂ ಸಂಪಾದಿಸಿ ಕೊಟ್ಟವು. ರಾಷ್ಟ್ರದ ಏಳಿಗೆಗೆ ದಾಸ್ಯದ ಬಂಧನವು ಮೊದಲನೆಯ ಆತಂಕವೆಂಬುದರಿಂದಲೇ ಸ್ವಾತಂತ್ರ್ಯಕ್ಕೋಸ್ಕರ ಅಹಿಂಸಾ ನೀತಿಯಂತೆ ಹೋರಾಡಲು ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಆದೇಶವಿತ್ತರು. ರಾಜಕೀಯ ಸ್ವಾತಂತ್ರ್ಯದ ಅಡಿಗಟ್ಟಿನ ಮೇಲೆ ಭದ್ರವಾದ ಕಲ್ಯಾಣ ರಾಷ್ಟ್ರವನ್ನು ನೆಲೆಗೊಳಿಸಬೇಕೆಂಬುದೂ ಅವು ಸರ್ವಶ್ರುತವಾದ, ಸರ್ವಕಾಲಕ್ಕೂ ಸರ್ವ ಜನಾಂಗಕ್ಕೂ ಆದರಣೀಯವಾದ, ಶಾಂತಿ ರಾಜ್ಯಕ್ಕೆ ಸರಿಸಾಟಿಯಾಗಬೇಕೆಂದೂ ಅಪರ ವ್ಯಾಮೋಹಕವಾದ ಅಪೇಕ್ಷೆ ಇದ್ದಿತು ಸ್ವಾತಂತ್ರ್ಯ ಸಂಪಾದನೆಯ ಬಳಿಕ ಕಾಂಗ್ರೆಸದ ಸ್ವರೂಪ ಸೇವಕರು ಈ ದಿಸೆಯಲ್ಲಿ ದುಡಿಯುವ ಆವಶ್ಯಕತೆಯನ್ನು ಬಿಂಬಿಸಲು ಗಾಂಧೀಜಿ ಪ್ರಯತ್ನಿಸುತ್ತಿದ್ದರು. ಪರ್ಯವಸಾನದಿಂದ ಸ್ವತಂತ್ರ ಭಾರತಕ್ಕೆ ಅವರ ಮಾರ್ಗದರ್ಶನ ಏದಾರು ತಿಂಗಳುಗಳಿಗೂ ಹೆಚ್ಚು ಕಾಲ ದೊರೆಯದೆ ಹೋಯಿತು—ತತ್ಪರಿಣಾಮವಾಗಿಯೇ ಕಾಂಗ್ರೆಸಿನಲ್ಲಿ ಶೈಥಿಲ್ಯವೂ ದೌರ್ಬಲ್ಯವೂ ತಲೆದೋರಿದೆಂದೂ ಜನತೆಯ ಪ್ರೀತಿಯನ್ನು ನಿಧಾನವಾಗಿ ಕಳೆದುಕೊಳ್ಳುವಂತಹ ದಾರುಣ ಪರಿಸ್ಥಿತಿಯನ್ನು ಕಾಂಗ್ರೆಸು ಪ್ರಕೃತ ಇದಿರಿಸುತ್ತಿದೆಂದೂ ಚಿಂತೆಯ ಗೆರೆ ಮೂಡುವುದು.

ಏಂದಿನ ಶಿಸ್ತು, ಸಂಯಮ, ದಕ್ಷತೆ, ರಾಷ್ಟ್ರ ಸೇವೆಯನ್ನು ಮಾಡಬೇಕೆಂಬ ಆಕಾಂಕ್ಷೆ, ಸ್ವಾರ್ಥ ತ್ಯಾಗವಾಡಬೇಕೆಂಬ ಸ್ಫೂರ್ತಿ ಇಂದು ಕಾಂಗ್ರೆಸ ಕಾರ್ಯಕರ್ತರಲ್ಲಿ ಕಡಿಮೆಯಾಗತೊಡಗಿದೆ. ಹಳ್ಳಹಳ್ಳಿಯಲ್ಲೂ ಉತ್ತಮ ದರ್ಜೆಯ ಕಾರ್ಯಕರ್ತರ ಮೂಲಕ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯನ್ನು ಅಂದು ಉಜ್ಜೀವಿಸಿದ್ದ ಕಾಂಗ್ರೆಸು ಮಕಾಸಂಸ್ಥೆ ಇಂದು ಆರ್ಥಿಕ ಪುನಾರಚನೆಯ ವಿಷಯದಲ್ಲಿ ಅಂಥ ಕಾತುರವನ್ನು ಮಾಡುವಂತಾದರೆ-ಎಂದೆ ನಿಸುತ್ತದೆಯೇ ಹೊರತು, ಹಾಗೆ ನಡೆಯುವ ಕೆಲಸ ಬಹಳ ನಿಧಾನವಾಗಿ, ಅಸ್ತವ್ಯಸ್ತವಾಗಿ, ಬೇಕೋ ಬೇಡವೋ ಎಂಬಂತೆ ಸಾಗಿದೆ ಕಾಂಗ್ರೆಸಿನ ಸಂಘಟನೆ ಮತ್ತು ನೈತಿಕ ಹಿರಿಮೆಯು ಅಧಿಕಾರದ ವ್ಯಾಮೋಹ ಮತ್ತು ತಜ್ಜನಿತ ವೈರಾಗ್ಯದ ವಿಷಪ್ರಭಾವದಿಂದ ಜಾರ್ಜಿತ ಜೈತನ್ಯ ನಾಶವನ್ನಾಡುತ್ತ ಬಂದಂತೆ ತೋರುತ್ತದೆ ಕಳೆದ ಮಹಾ ಚುನಾವಣೆಗಳ ಕಾಲದಲ್ಲಿ, ಕಾಂಗ್ರೆಸಿನಲ್ಲಿ ಕಾಣಿಸಿಕೊಂಡ ಈ ದೌರ್ಬಲ್ಯಗಳ ಕಡೆಗೆಯೇ ಜೊಟ್ಟು ಮಾಡಿ ತೋರಿಸಿ, ಬೇರೆ ರಾಜಕೀಯ ಪಂಗಡಗಳು ಜನಾಭಿಪ್ರಾಯವನ್ನು ಕಾಂಗ್ರೆಸಿನ ವಿರುದ್ಧ ಸಾಕಷ್ಟು ಎತ್ತಿ ಕಟ್ಟಿದವು. ಈ ಚುನಾವಣೆಯಲ್ಲಿ ಸಾಮಾನ್ಯ ಬಹುಮತವನ್ನು ಕಾಂಗ್ರೆಸು ಗಳಿಸಿ ಕೊಂಡರೂ — ಉಪಚುನಾವಣೆಗಳಲ್ಲಿ ಕಾಂಗ್ರೆಸು ಅನುಭವಿಸಿದ ಸೋಲು ಮುಂದಿನ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸು ಇದಿರಿಸಬೇಕಾದ ಪರಿಸ್ಥಿತಿಯ ಸ್ಥೂಲಚಿತ್ರವನ್ನು ಕೊಡುವಂತಿದೆ.

ಈ ಚಿತ್ರ ಕಾಂಗ್ರೆಸು ಯಶಸ್ಸು ಹೊಂದುವುದೆಂಬ ಭರವಸೆಯನ್ನು ಕೊಡುವುದಿಲ್ಲ—ಎಂದು ಒಂದೇ ಮಾತಿನಲ್ಲಿ ಹೇಳಿಬಹುದು. ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದ ಮಹಾಸಂಸ್ಥೆಯೊಂದು ಸ್ವಾತಂತ್ರ್ಯೋತ್ತರದ ಕೆಲವೇ ವರ್ಷಗಳಲ್ಲಿ ಸಂಪೋಗಾಡ್ತಿರುವುದನ್ನು ಕಂಡು ಯಾರಿಗಾದರೂ ವ್ಯಸನವುಂಟಾಗುತ್ತದೆ. ಈ ವ್ಯಥೆ ಪಾಗೂ ಸಂಸ್ಥೆಯ ಉಜ್ವಲ ಪರಂಪರೆಯನ್ನು ಕಾಯ್ದುಕೊಳ್ಳುವ ಹಂಬಲವೇ ಪತನದ ಹಾದಿಯನ್ನು ಬಿಟ್ಟು ಗೊಟ್ಟು ಕಾಂಗ್ರೆಸಿಗರೆಲ್ಲ ಒಟ್ಟಿಗೆ ಉದ್ಧಾರದ ಮಾರ್ಗವನ್ನು ತುಳಿದು ಸಾಗಬೇಕೆಂಬ ಸದಭಿಪ್ರಾಯವನ್ನು ನೀಡುತ್ತದೆ. ಮುಂದಿನ ಐದು ವರ್ಷಗಳಲ್ಲಿ—ಅಂದರೆ ಭವಿಷ್ಯದ ಎರಡು ಮಹಾ ಚುನಾವಣೆಗಳಲ್ಲಿ – ಕಾಂಗ್ರೆಸು ನಿಃಸಂದಿಗ್ಧ ಬಹುಮತವನ್ನು ಗಳಿಸುವಂತಾದರೆ. ಜನಾನುರಾಗವನ್ನು ಉಳಿಸಿಕೊಳ್ಳಲಲ್ಲದು. ಈ ಹತ್ತು ವರ್ಷಗಳ ಅವಧಿಯಲ್ಲಿ ಕಾಂಗ್ರೆಸು ಮಾಡುವ ಕೆಲಸ, ನೀಡುವ ಸೇವೆ ಮುಂದಿನ ನೂರು ವರ್ಷಗಳ ಕಾಲವಾದರೂ ಉಳಿಸುವಷ್ಟು ಪಲವನ್ನು ಕೊಡುತ್ತದೆ

ಮೂಲಭೂತವಾದ ಈ ತತ್ವಪ್ರಣಾಳಿಯನ್ನು ಮನವರಿಕೆ ಮಾಡಿಕೊಳ್ಳಲು ಕೆಂದು ನೆಹರೂರವರು ಪದೇ ಪದೇ ತಿಳಿಸುತ್ತಿದ್ದಾರೆ—ಕಾಂಗ್ರೆಸ ಕಾರ್ಯಕರ್ತರು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿ ಕೊಟ್ಟಂತೆ, ಆರ್ಥಿಕ ಪ್ರಗತಿಯನ್ನೂ ಸಾಧಿಸಬೇಕಾದದ್ದು ಇವರ ಮೇಲಿನ್ನೈತಿಕ ಹೊಣೆಯೆಂಬುದಾಗಿಯೂ ನೆಹರೂ ಉಪದೇಶಿಸುತಿದ್ದಾರೆ. ಗಾಂಧೀಜಿಯ ಮಾರ್ಗದರ್ಶನ ಲಾಭವಿಲ್ಲದ

(ಬಂಡೆ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತದ ಸುಭದ್ರ ವಿಮಾ ಕಂಪೆನಿಗಳಲ್ಲಿ "ಕೆನರಾ ಮ್ಯೂಚುವಲ್" ಎಂಬ ಇಲ್ಲಿನ ವಿಶಿಷ್ಟ ಸಾಹಸವನ್ನು ಗಳಿಸಿನೆ. ಇದು ಮ್ಯೂಚುವಲ್ ಕಂಪೆನಿಯಾಗಿ ಘಟಿತವಾಗಿದ್ದು, ಪಾಲುದಾರ ಭಂಡವಳಗಿರಿಲ್ಲದಿರುವುದರಿಂದ, ಕಂಪೆನಿಯ ಸರ್ವ ಲಾಭವನ್ನೂ ಪಕ್ಕೆ ಹೊಂದಿಸಿ ಪಾಲಿಸಿದಾರರೇ ತನ್ನಲ್ಲಿ ಪಾಲುದಾರಿಕೆಯನ್ನು ಹೊಂದಿಸಿಕೊಳ್ಳುವರು. ಪ್ರಾರಂಭಿಕ ವಿಮಾಪಾಲಿಸಿಯ ತಳಪಾಯವು ಮೊತ್ತ ಸಡಿಸಿದ ತನ್ನೆಲ್ಲಾ ವಿಮಾ ಯೋಜನೆಗಳಲ್ಲಿ ಉಳಿಕಾಯವನ್ನು ತೋರಿಸಿದುದು ಮಾತ್ರವಲ್ಲದೆ, ಸ್ಥಾಪಿತವಾದಂದಿನಿಂದಲೂ ಇದು ಬೋನಸ್ಸು ಪಾಲಿಸಿದಾರರ ಹಿತಸ್ಫೂರ್ತಿಯೇ ಧ್ಯೇಯವಾಗಿಟ್ಟುಕೊಂಡಿದೆ. ನಿಮ್ಮ ಜೀವನ ಸುರಕ್ಷೆಯ ಕಾರ್ಯವನ್ನು ಕೆನರಾ ಮ್ಯೂಚುವಲ್ ಕಂಪೆನಿಯಲ್ಲಿ ಇಂದೇ ಏಜೆಂಟರಾಗಿ, ನಿಮ್ಮ ಕುಟುಂಬದ ಬದ್ಧತೆಯನ್ನು ಕಾಯ್ದುಕೊಳ್ಳಿರಿ.

THE CANARA MUTUAL ASSURANCE COMPANY, LTD.

Estd 1935] [Head Office UDIPI, S. INDIA

ಸೇನೆಯ ಜವಾನರ ನಾಗರಿಕ ಚಟುವಟಿಕೆ

ಯುದ್ಧೇತರ ಕ್ಷೇತ್ರದಲ್ಲಿ ಚಿರಸ್ಮರಣೀಯ ಕಾರ್ಯ

ಪರಾಕ್ರಮಣವನ್ನು ಯಶಸ್ವಿಯಾಗಿ ಪ್ರತಿಘಟಿಸಿ, ರಾಷ್ಟ್ರದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಹೋರಾಡುವುದು ನಮ್ಮ ಸೈನ್ಯ ಪಡೆಗಳ ಪ್ರಥಮ ಕರ್ತವ್ಯವಾಗಿರುತ್ತದೆಯಷ್ಟೆ! ಗುರುತರವಾದ ಈ ಜವಾಬ್ದಾರಿಕೆಯನ್ನು ನಿರವೇರಿಸುವುದಕ್ಕೆ ಸೇನೆಯ ಭೂ, ಜಲ ಹಾಗೂ ವಾಯು ವಿಭಾಗಗಳು ಸದಾ ಕಾಲವೂ ಸನ್ನದ್ಧವಾಗಿರಬೇಕು. ಇದಕ್ಕೋಸ್ಕರ ಯೋಗ್ಯ ತರಬೇತಿಯನ್ನೂ ಹೊಂದುತ್ತಿರಬೇಕು. ಈ ನಡುವೆಯೂ ನಮ್ಮ ಸೇನಾ ಪಡೆಗಳು ಆಂತರಿಕ ಭದ್ರತೆಯನ್ನು ಶಾಯ್ದು ಶಾಂತಿ ಸ್ಥಾಪನೆಗೆ ನೆರವಾಗುವಲ್ಲಿ ನಾಗರಿಕ ಅಧಿಕಾರಿಗಳೊಡನೆ ಸಹಕರಿಸುತ್ತವೆ. ಮಾತ್ರವಲ್ಲ ಸ್ವಾತಂತ್ರ್ಯಾನಂತರದ ಈ ವರ್ಷಗಳಲ್ಲಿ ಪ್ರಕೃತಿಯ ಕೋಪಕ್ಕೆ ಬಲಿಯಾದ ಹಾಗೂ ಇನ್ನಿತರ ಕಷ್ಟನಷ್ಟಗಳಿಗೆ ಗುರಿಯಾದ ಜನತೆಯ ನೆರವಿಗೂ ರಾಷ್ಟ್ರಪುನಃ ನಿರ್ಮಾಣನ ಕೆಲಸಕ್ಕೂ ಮುಂಬಂದು ಅನುಪಮವಾದ ಚಿರಸ್ಮರಣೀಯವಾದ ಸೇವೆಯನ್ನು ಸಲ್ಲಿಸಿರುತ್ತವೆ. ಶಾಂತಿ ಕಾಲದಲ್ಲು ಸೇನೆಯಿಂದ ಪ್ರಯೋಜನ ಪೊಂಕಿಸಿಕೊಳ್ಳುವ ಈ ಉಪಕ್ರಮದಿಂದ ಹೊಸ ವೈಪಲ್ಯವನ್ನೆ ಸ್ವಾದಿಸಿದಂತಾಗಿರುತ್ತದೆ.

ನಿರಾಶ್ರಿತರಿಗೆ ನೆರವು

ನಮ್ಮ ಸೇನೆಯ "ಜವಾನ" ರು ಯುದ್ಧಕ್ಕೆ ಸಂಬಂಧಿಸಿಲ್ಲದ ನಾಗರಿಕ ಚಟುವಟಿಕೆಗಳಲ್ಲಿ ಭಾಗವಹಿಸುವಾಗ ಕಾರ್ಯಕ್ಷಮತೆಯನ್ನೂ ಉತ್ಸಾಹವನ್ನೂ ಅಭಿಮಾನವನ್ನೂ ಚಿನ್ನಾಗಿಯೇ ವ್ಯಕ್ತಗೊಳಿಸಿರುವುದು ಅಭಿನಂದನೀಯ. ತಮ್ಮ ಹೊಣೆಗಾರಿಕೆಗೆ ಒಪ್ಪಿಸಲ್ಪಟ್ಟ ಕೆಲಸವನ್ನೆಲ್ಲ ನಿಶ್ಚಿತ ಅವಧಿಯೊಳಗೆ ಸರ್ವ ಪ್ರಯತ್ನಗಳನ್ನೂ ಕೈಗೊಂಡು ಪೂರೈಸುವುದು ಲೀಲಾ ಜಾಲವಾಗಿ ಅವರಿಗೆ ತೋರಿದೆ. ಶ್ರಮ್ಯ, ಸ್ಥೈರ್ಯ, ನಿರ್ಧಾರಮತ್ತು ಪರಸ್ಪರ ಕೂಡಿ ಕೆಲಸ ಮಾಡುವ ಮನೋಭಾವಗಳನ್ನು ಈ ಸೈನಿಕ ವೃಂದ ಪ್ರದರ್ಶಿಸಿ, ದೃಢ ಚಿತ್ತದಿಂದ ಎಂತಹ ಕಠಿಣ ಕಾರ್ಯವನ್ನೂ ಈಡೇರಿಸಲು ಸಾಧ್ಯವೆಂದು ನಾಗರಿಕರಿಗೆ ಮನವರಿಕೆಮಾಡಿಕೊಟ್ಟಿದೆ

ಭೂ ಸೇನೆಯು ಭಾರತದ ವಿಶಾಲ ಭೂ ಭಾಗದಲ್ಲಿ ಅನೇಕ ಕೇಂದ್ರಗಳಲ್ಲಿ ಚದರಿರುವುದರಿಂದ ಎಲ್ಲಿ ಬೇಕೆಂದರೆ ಅಲ್ಲಿ ಯಾವಾಗ ಬೇಕೆನಿಸಿದರೆ ಆಗ, ಉಚಿತ ಸಹಾಯವನ್ನು ನೀಡಲು ಸಾಧ್ಯವಾಗಿದೆ. ವಾಯು ಸೇನೆಯು ಚಿಕ್ಕ ಪ್ರಮಾಣದಲ್ಲಿದ್ದರೂ ಸಹ, ಅದು ಮಹಾ ಸೇವೆಯನ್ನೆ ನೀಡಿರುತ್ತದೆ ನೆಲ ಹಾಗೂ ಜಲ ಮಾರ್ಗಗಳಿಂದ ಉಪಕಾರ ಮಟ್ಟಲಾಗದ ಗಂಡಾಂತರದ ಪ್ರಸಂಗಗಳಲ್ಲಿ ಸೇನೆಯ ವಿಮಾನಗಳು ನೊಂದವರಿಗೆ ಅನ್ನ ಬಟ್ಟೆಗಳನ್ನು ಒದಗಿಸಿ ಉಚಿತ ಉಪಕಾರವನ್ನೆಸಗಿವೆ. ಜಲ ಸೇನೆಯು ಕರಾವಳಿಗೆ ಹೊಂದಿಕೊಂಡೇ ತನ್ನ ಚಟುವಟಿಕೆಗಳನ್ನು ತೋರಿಸಬೇಕಿದ್ದರೂ— ಅದರ ಮಹತ್ವ ಕಡಿಮೆಯಾಗಿಲ್ಲ

ಭಾರತದ ವಿಭಜನೆಯಾದ ಬಳಿಕ ಸಾವಿರಾರು ಸಂಖ್ಯೆಯಲ್ಲಿ ಪಾಪದ ಮುಕ್ಕಳು, ಮುದುಕರು, ಹೆಂಗಸರು, ಗಂಡಸರು ನಿರಾಶ್ರಿತರೆಂದು ಓಡಿಬರುತ್ತಿದ್ದಾಗ ಸೈನಿಕರು ತುಂಬ ದಕ್ಷತೆಯಿಂದ ನಡೆದುಕೊಂಡು ಸುರಕ್ಷಿತವಾಗಿ ಈ ದುಃಖಿತರನ್ನು ಸಾಗಿಸುವಲ್ಲಿ ನೆರವು ನೀಡಿದರು. ಭೂ ಹಾಗೂ ವಾಯು ಸೇನೆಗಳ ಸೌಹಾರ್ದಯುತವಾದ ಸಹಾಯವಿಲ್ಲದಿರುತಿದ್ದರೆ, ದೊಡ್ಡ ಸ್ವರೂಪದ ಈ ಉಪಕ್ರಮವು ಯಶಸ್ವಿಯಾಗುತ್ತಿದ್ದಿಲ್ಲ. ಹೀಗೆ ಸಾಗಿಸಲ್ಪಟ್ಟ ನಿರಾಶ್ರಿತರನ್ನು ನೆಲೆಗೊಳಿಸುವುದರಲ್ಲಿಯೂ ಸೇನೆ ಪೆಚ್ಚಿನ ಪರಿಶ್ರಮವನ್ನು ವಹಿಸಿದೆ. ಹೊಸ ದೆಹಲಿಗೆ ಸಮೀಪದ ಕುರುಕ್ಷೇತ್ರ ನಿರಾಶ್ರಿತರ ನಿಲಯವನ್ನು ಸೇನೆಯೇ ನಿರ್ಮಿಸಿಮ್ಮಿ, ನಡೆಸಿಕೊಂಡು ಬರುತ್ತದೆ. ಎರಡೂವರೆಲಕ್ಷ ಜನರಿಗೆ ವಸತಿಯೊದಗಿಸುವ ಈ ಕೇಂದ್ರವನ್ನು ಅತ್ಯಲ್ಪ ಕಾಲದಲ್ಲಿಯೇ ಡೇರೆಗಳಿಂದ ಸಜ್ಜುಗೊಳಿಸುವುದು ಸುಲಭಸಾಧ್ಯವಲ್ಲ.

ಜಮ್ಮು — ಕಾಶ್ಮೀರದಲ್ಲಿ

ಕಾಶ್ಮೀರದಲ್ಲಿ ಆಕ್ರಮಣಕಾರರನ್ನು ಓಡಿಸುವಲ್ಲಿ ಸೇನೆಯು ನೆರವಾಗಿರುವುದು ಸರಿಯಷ್ಟೆ — ಇದರ ಜೊತೆಗೆ ಗುಡ್ಡಗಾಡು ಪ್ರದೇಶದ ಗುಂಡಾಗಳ ಹಾವಳಿಯಿಂದ ನೊಂದ ಕಾಶ್ಮೀರಿ ಪ್ರಜೆಗಳಿಗೆ ಯೋಗ್ಯ ಸಹಾಯವನ್ನೂ ಸೇನೆಯು ಸಕಾಲದಲ್ಲಿ ಮುಟ್ಟಿಸಿದೆ. ರಾಳಿಕಾರರು ನಾಶ, ರೋಗ ಹಾಗೂ ಸಂಕಟಗಳ ವಿಪತ್ತಿನಲ್ಲಿ ನಾಗರಿಕರನ್ನು ಪಾರುಕಿಸಿದ್ದರು— ಇದರಿಂದ ಪಾರಾಗುವಂತೆ ಉತ್ತಮ ವೈದ್ಯಕೀಯ ಚಿಕಿತ್ಸೆಯನ್ನು ಸೇನೆ ಒದಗಿಸಿತಲ್ಲದೆ ಅಪಾಯಕರವಾದ ಪ್ರದೇಶಗಳಿಂದ ನಾಗರಿಕರನ್ನು ಸ್ಥಳಾಂತರಿಸುವ ಕೆಲಸವನ್ನೂ ಮಾಡಿತು ಯುದ್ಧವಿರಾಮ ಒಪ್ಪಂದವಾದ ಬೆನ್ನಿಗೆಯೇ ಕಾಶ್ಮೀರ ಕೊಳ್ಳದಲ್ಲಿ ಜನರ ಜೀವನ ಮಟ್ಟವನ್ನು ಎತ್ತರಿಸುವ ಪ್ರಯತ್ನವನ್ನೂ ಸೇನೆ ಕೈಗೊಂಡಿತು. ಪ್ರಾಥಮಿಕ ಶಾಲೆಗಳನ್ನು ತೆರೆಯೂ, ದುರ್ಗಮವಾದ ಗುಡ್ಡಗಾಡುಗಳಲ್ಲಿ ವಾರ್ಗಗಳನ್ನು ರಚಿಸಿಯೂ, ವೈದ್ಯಕೀಯ ಸೌಲಭ್ಯವನ್ನು ಒದಗಿಸಿಯೂ ಸೇನೆ ಪ್ರಜೆಗಳ ಪ್ರೀತಿ ಸಂಪಾದಿಸಿತು. ಮಹಾಪೂರ, ಅಗ್ನಿ ಪ್ರಳಯ ಸಾಂಕ್ರಾಮಿಕ ರೋಗಗಳಿಂದ ಜನರು ಭಯಗ್ರಸ್ತರಾದಾಗ—ಸೇನೆಯ ಜವಾನರು ದಿಟ್ಟತನದ ಹೆಜ್ಜೆಯಿಂದ, ಆಸರನ್ನು ಸಂರಕ್ಷಿಸಲು ಧಾವಿಸಿದರು.

ಅಸಾಮಿನಲ್ಲಿ ೧೯೫೦ರಲ್ಲಿ ಭಯಂಕರ ಭೂಕಂಪವುಂಟಾದಾಗ ಮತ್ತು ಜಲ ಪ್ರಳಯದ ಭೀತಿ ಬಾಧಿಸಿದಾಗ ಭೂ ಹಾಗೂ ವಾಯು ಸೇನೆಗಳು ಜನಕ್ಕೆ ನೀಡಿದ ಸೇವೆಯನ್ನೂ ಮರೆಯುವಂತಿಲ್ಲ. ವಿಮಾನಗಳು ಆಕಾಶದಲ್ಲಿ ಹಾರಾಡುತಿದ್ದಂತೆಯೇ ಉತ್ತರ ಲಕಿಂಪುರ, ದಿಬ್ರೂಗಡ ಮತ್ತು ಸದಿಯಾ ಜಿಲ್ಲೆಯ ಸಂಕಟ ಪೀಡಿತ ಜನರಿಗೆ ಆಹಾರವನ್ನು ಒದಗಿಸಿದವು. ನೂರಾರು ಈಡೆ ಸೈನಿಕರು ಜನರನ್ನು ಬಚುಕಿಸಲು ಶತಪ್ರಯತ್ನ ಮಾಡಿದರು. ಮಹಾಪೂರದಿಂದ ಬಳಿದು ಹೋದ ಮಾರ್ಗ ಹಾಗೂ ಸಂಕಗಳನ್ನು ಎರಳಿ ಕಟ್ಟುವುದಕ್ಕೆ ಸೈನ್ಯ ನೆರವಾಯಿತು. ಪ್ರಧಾನ ಮಂತ್ರಿಗಳ ಸಹಾಯ ನಿಧಿಗೆ ಒಂದು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿತು. ೧೯೫೦ನೇ ಜೂನು ತಿಂಗಳಲ್ಲಿ ನೆರೆ ಹಾವಳಿ ತಲೆದೋರಿದಾಗಲೂ ಅಸಾಮಿನಲ್ಲಿ ಸೈನ್ಯ ಪಡೆಯು ಆಹಾರ ಪೂರೈಕೆ ಮಾಡಿತು

ಬಂಗಾಳದಲ್ಲಿಯೂ ಬಿಹಾರದಲ್ಲಿಯೂ ಸೈನ್ಯ ಕಡೆ ನೆರೆಪೀಡಿತ ಜನರಿಗೆ ಸಕಾಲದಲ್ಲಿ ಸಹಾಯ ಸಲ್ಲಿಸಿದೆ. ತಮಗೆ ಸಿಗುತಿಬ್ಬ ರೇಶನಿನಲ್ಲಿ ಉಳಿತಾಯವನ್ನು ಸಾಧಿಸಿ, ಅನ್ನಾನ್ನಗತಿಕರಾದ ಜನರಿಗೆ ೧೦೦೦೦ ಮಣ ಅಕ್ಕಿಯನ್ನು ಬಿಹಾರದಲ್ಲಿ ಸೈನ್ಯ ಪೂರೈಸಿದೆ. ಮನೆಮಾರುಗಳನ್ನು ಕಳೆದುಕೊಂಡವರಿಗೆ ಗುಡಾರ ಕಟ್ಟಿ ಕೊಳ್ಳಲು ಬಟ್ಟೆಯನ್ನೂ ಸೈನ್ಯ ಒದಗಿಸಿದೆ.

ವಿಧಾಯಕ ಕಾರ್ಯಗಳು

ರಾಷ್ಟ್ರೀಯ ಪುನರಭ್ಯುದ್ಧಿಯ ಕ್ಷೇತ್ರದಲ್ಲಿಯೂ ಭಾರತೀಯ ಸೇನೆ ಮಹತ್ವದ ಸೇವೆಯನ್ನು ಸಲ್ಲಿಸಿದೆ. ವಿಭಜನೆಯ ಬಳಿಕ ಅಸಾಮು ರಾಜ್ಯವು ಭಾರತದೊಡನೆ ನೇರಾದ ಸಂಪರ್ಕವನ್ನು ಕಳೆದುಕೊಂಡಾಗ ೧೪೫ ಮೈಲು ಉದ್ದದ ರೈಲು ಮಾರ್ಗವನ್ನು ಸೇನೆಯು ತ್ವರಿತದಲ್ಲಿಯೇ ನಿರ್ಮಾಣ ಮಾಡಿತು. ಭಾರಿ ಮುಸೂನು ಮಳೆಯನ್ನೂ ಘನವಾದ ಅರಣ್ಯಗಳ ತಡೆಯನ್ನೂ ಲೆಕ್ಕಿಸದೆ ಸೇನೆಯ ಇಂಜೀನಿಯರರು ಇಲ್ಲಿ ಮನಸಾರೆ ದುಡಿದರು.

ತುಂಗ ಭದ್ರೆಯ ಜಲಾಶಯದಿಂದ ಮುಳುಗಿ ಹೋಗುವ ೭೦ ಹಳ್ಳಿಗಳ ನಿವಾಸಿಗಳನ್ನು ೧೯೫೩ನೇ ಮೇ ತಿಂಗಳಲ್ಲಿ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸುವುದರಲ್ಲಿಯೂ ಸೈನ್ಯ ಉತ್ಸಾಹ ತೋರಿಸಿತು. ಬೇಕಾದ ಸಾರಿಗೆ ಸೌಕರ್ಯಗಳನ್ನು ಒದಗಿಸಿದ್ದಲ್ಲದೆ, ಸ್ಥಳಾಂತರ ಗೊಂಡವರು ಉಳಕೊಳ್ಳವದಕ್ಕೋಸ್ಕರ ಒಂದು ನೂರು ಇಟ್ಟಿಗೆಯ ಮನೆಗಳನ್ನು ಕಟ್ಟಿಕೊಟ್ಟಿತು. ನೀರಿನ ಪೂರೈಕೆಯ ವ್ಯವಸ್ಥೆಯನ್ನೂ ಏರ್ಪಡಿಸಿತು.

ರಾಯಲ ಸೀಮಾ ಪ್ರದೇಶದಲ್ಲಿ ೧೯೫೩ನೇ ಎಪ್ರೀಲು ಮಾಸದಲ್ಲಿ ಕುಡಿಯಲು ನೀರು ಸಿಗದೆ, ಜನರು ಸಂಕಟಕ್ಕೆ ಈಡಾದರು. ಆ ಗಳಿಗೆಯಲ್ಲಿ ಸೇನೆಯು ಸಿಪಾಯಿಗಳು ಕ್ಷೀಪ್ರದಲ್ಲಿಯೇ ಜೊಕ್ಕ ಕ್ರಮ ಕೈಗೊಳ್ಳದಿರುತ್ತಿದ್ದಲ್ಲಿ, ಪರಿಣಾಮ ಬಹಳ ಭೀಕರವೂ ಚಿಂತಾಜನಕವೂ ಆಗುತಿತ್ತು. ಸುದೈವದಿಂದ ನಮ್ಮ ಜವಾನರು ಆರು ವಾರಗಳ ವರೆಗೆ ಬೆವರಿಳಿಸಿ ದುಡಿದು ಯಥೇಷ್ಟ ನೀರಿನ ಪೂರೈಕೆ ಮಾಡುವ ೧೫ ಬಾವಿಗಳನ್ನು ತೋಡಿದರು. ಸುಮಾರು ಎಂಟು ಸಾವಿರ ಚದರ ಮೈಲು ವಿಸ್ತೀರ್ಣ ಪ್ರದೇಶದಲ್ಲಿ ಮಿಲಿಟರಿ ಲಾರಿಗಳು ನೀರು ತುಂಬಿಕೊಂಡು ಓಡಾಡಿ ಜನರ ಜಲಬಾಧೆಯನ್ನು ತೀರಿಸಿದವು. ದಿನಕ್ಕೆ ೫೦೦೦೦ —೬೦೦೦೦ ಗೆಲನುಗಳಷ್ಟು ನೀರು ಒದಗಿಸುವ ಎರಡು ಕೇಂದ್ರಗಳನ್ನೂ ಸೇನೆ ಸ್ಥಾಪಿಸಿತು.

ಉತ್ತರ ಪ್ರದೇಶದಲ್ಲಿ ಲಲಿತಪುರ ಆಣೆಕಟ್ಟನ್ನು ಮಿಲಿಟರಿ ಇಂಜಿನಿಯರರು ಸೇರಿ ನಿರ್ಮಿಸಿದರು. ಕುಂಭಮೇಳದಂತಹ ಭಾರೀ ಜನ ಸೇರುವ ಉತ್ಸವಗಳಲ್ಲಿ ಸುವ್ಯವಸ್ಥೆಯನ್ನು ಏರ್ಪಡಿಸಲೂ ಆ ಜಾಗವನ್ನು ವಸತಿ ಯೋಗ್ಯ ಮಾಡಲೂ ಸೇನೆ ದುಡಿಯುತ್ತದೆ.

ಹೆಚ್ಚಿನ ಆಹಾರೋತ್ಪತ್ತಿ

ಅಧಿಕ ಆಹಾರ ಬೆಳೆಸುವ ಚಳವಳಿಯನ್ನು ರಾಷ್ಟ್ರವ್ಯಾಪ್ತಿಯಂತೆ ತೊಡಗಿದಾಗ ಸೇನೆಯೂ ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸಿತು. ಸಾಧ್ಯವಿರುವಲ್ಲೆಲ್ಲ ಹೊಸ ಜಮೀನನ್ನು ಹಸನುಗೊಳಿಸಿ, ಅಲ್ಲಿ ಆಹಾರ ಧಾನ್ಯಗಳನ್ನೂ ತರಕಾರಿಯನ್ನೂ ಸೇನೆಯವರು ಬೆಳೆಸಿದರು. ಹೀಗೆ ವ್ಯವ

[೧೦ನೇ ಪುಟ ನೋಡಿರಿ]

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ತನು ಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೪—೦
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ
ದಾವಣಗೆರೆ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಧರ್ಮಾರ್ಥ—ಸುಕ್ಕಟೆ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇನೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial Chambers (N. U.)
Bhandari Street,
BOMBAY—3

ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವ ಕ್ರಮ

ದಕ್ಷಿಣ ಕನ್ನಡ ಜಿಲ್ಲೆಯ ರೈತರ ಒಕ್ಕೊರಲಿನ ಬೇಡಿಕೆಗೆ ಮನ್ನಣೆ

ನಮ್ಮ ಜಿಲ್ಲೆಯ ರೈತರ ಬೇಡಿಕೆಗಳಲ್ಲಿ ಪ್ರಾಮುಖ್ಯವಾದದ್ದು ಒಕ್ಕಲು ಹಿತ ರಕ್ಷಣೆಯ ಶಾಸನಕ್ರಮವೊಂದು ಇಲ್ಲಿ ಜ್ಯಾರಿಗೆ ಬರಬೇಕೆಂಬುದು. ಸ್ವಾತಂತ್ರ್ಯೋತ್ತರದಲ್ಲಿ ಜಿಲ್ಲೆಯನ್ನು ಸಂದರ್ಶಿಸಿದ ಪ್ರತಿಯೊಬ್ಬ ಮಂತ್ರಿಗೆ ಒಪ್ಪಿಸಿದ ಮನವಿಯಲ್ಲೂ ಈ ವಿಷಯ ಪ್ರಸ್ತಾಪಿಸಲ್ಪಟ್ಟಿದೆ; ಇದಲ್ಲದೆ ರೈತರ ಪ್ರತಿನಿಧಿಗಳನೇಕರು ಸರಕಾರಕ್ಕೆ ಶಿಷ್ಟಮಂಡಲಗಳನ್ನು ಕಳಿಸುವುದರ ಮೂಲಕವೂ ಈ ಕುರಿತು ಸರಕಾರವನ್ನು ಒತ್ತಾಯಿಸಿದ್ದುಂಟು. ಚುನಾವಣೆಗಳ ಬಳಿಕ ಜಿಲ್ಲೆಯ ಶಾಸನ ಸಭಾ ಸದಸ್ಯರೆಲ್ಲರೂ ಒಕ್ಕಲುಗಳ ಹೆಚ್ಚುಬಾಧ್ಯತೆಗಳಿಗೆ ಮನ್ನಣೆ ದೊರೆಯಬೇಕೆಂದೂ, ಅನ್ಯಾಯವಾಗಿ ಒಕ್ಕಲೆಬ್ಬಿಸುವ ಪೈವೃತ್ತಿಯನ್ನು ಪ್ರತಿಬಂಧಿಸಬೇಕೆಂದೂ ಒಮ್ಮತದ ಅಭಿಪ್ರಾಯವನ್ನು ಪ್ರಕಟಿಸಿದ್ದರು. ಜೊತೆಗೆ, ಶ್ರೀ ನರ್ಸಪ್ಪಯ್ಯನವರ ಮುಂದಾಳುತನದಲ್ಲಿ ಅಂಧದೊಂದು ಒಕ್ಕಲು ಹಿತ ಮಸೂದೆಯ ಕರಡನ್ನು ಸಿದ್ಧಗೊಳಿಸಿ, ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸುವುದಕ್ಕೋಸ್ಕರ ಅದನ್ನು ಪ್ರಚಾರ ಮಾಡಿದ್ದರು. ಮೊನ್ನೆ ತಾನೆ ಮಂಗಳೂರಿಗೆ ಮುಖ್ಯ ಮಂತ್ರಿ ರಾಜಾಜಿಯವರು ಆಗಮಿಸಿದಾಗ ದಕ್ಷಿಣ ಕನ್ನಡದ ರೈತರ ಮತ್ತು ಅವರ ಪರವಾಗಿ ಒಮ್ಮತದಿಂದ ವಾದ ಹೂಡುವ ಶಾಸನ ಸಭಾಸದಸ್ಯರ ಬೇಡಿಕೆಯನ್ನು ಸಹಾನುಭೂತಿಪೂರ್ವಕ ವಿಚಾರಿಸಿ, ಬೇಗನೇ ಯೋಗ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು. ಆದರೆ ಈ "ಬೇಗನೇ" ತೆಗೆದುಕೊಳ್ಳುವ ಕ್ರಮ ಇನ್ನೆಷ್ಟು ಕಾಲ ವಿಳಂಬಿಸಬಹುದೋ ಎಂಬ ಸಂಶಯವಿದ್ದಿತು. ಆ ಸಂಶಯ ಇನ್ನೂ ಮಾಯವಾಗಿಲ್ಲವಾದರೂ-ಸರಕಾರವು ತುರ್ತಿನ, ಅಗತ್ಯದ ವಿಶಿಷ್ಟ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಒಕ್ಕಲೆಬ್ಬಿಸುವುದನ್ನು ತಾತ್ಕಾಲಿಕವಾಗಿ ಪ್ರತಿಬಂಧಿಸಲು ಕಾನೂನೊಂದನ್ನು ಮಾಡಿರುತ್ತಿದೆ.

ಒಕ್ಕಲೆಬ್ಬಿಸುವುದಕ್ಕೆ ಪ್ರತಿಬಂಧ

ಜನವರಿ ಐದನೇ ದಿನಾಂಕ ಸರಕಾರದವರು ಗಜೆಟಿನಲ್ಲಿ ಜಿಲ್ಲೆಯ ರೈತರನ್ನು ಒಕ್ಕಲೆಬ್ಬಿಸಲ್ಪಡುವುದರಿಂದ ತಡೆಯುವ ಉದ್ದೇಶದಿಂದ ಮಸೂದೆಯೊಂದನ್ನು ಪ್ರಕಟಪಡಿಸಿದರು ಮುಂದೆ ಎಂಟನೇ ದಿನಾಂಕ, ಮದ್ರಾಸು ಶಾಸನ ಸಭೆಯು ಪ್ರಶ್ನೋತ್ತರ ವೇಳೆಯ ಬಳಿಕ, "ದಕ್ಷಿಣ ಕನ್ನಡ ಕೃಷಿ ನಿರತ ಒಕ್ಕಲುಗಳ ರಕ್ಷಣಾ ಮಸೂದೆ"ಯನ್ನು ಜರ್ಜಿಗೆ ತೆಗೆದುಕೊಂಡು, ಕೆಲವೇ ತಾಸುಗಳಲ್ಲಿ ಅದಕ್ಕೆ ಮನ್ನಣೆಯನ್ನು ನೀಡಿತು ಮಸೂದೆಯನ್ನು ಶಾಸನ ಸಭೆಯ ಮುಂದೆ ಮಂಡಿಸುತ್ತಾ ಕಂದಾಯ ಮಂತ್ರಿ ಶ್ರೀ ಮಾಣಿಕ್ಯವೇಲು ನಾಯಕರು ಹೀಗೆಂದು ಹೇಳಿದರು—"ಕಳೆದ ಹಲವಾರು ತಿಂಗಳುಗಳಿಂದ ಸಂಕಾರದ ಕಡೆಗೆ ಹಲವಾರು ಮನವಿಗಳು ಬಂದಿದ್ದು, ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲಿಕರು ಬಹಳ ದೊಡ್ಡ ಪ್ರಮಾಣದಲ್ಲಿ ಒಕ್ಕಲುಗಳನ್ನು ಎಬ್ಬಿಸುತ್ತಿದ್ದಾರೆಂದೂ ಹೀಗೆ ಧನಿ-ಒಕ್ಕಲುಗ ಳೊಳಗಿನ ಸಂಬಂಧವು ಕ್ಲೇಶಮಯವಾಗಿ ಪರಿಣಮಿಸಿದೆಯೆಂದೂ ಹೇಳಲ್ಪಟ್ಟಿದೆ. ಈ ಶಾಸನ ಸಭೆಯಲ್ಲಿರುವ ದಕ್ಷಿಣ ಕನ್ನಡದ ಸದಸ್ಯರು ಒಕ್ಕಲುಗಳ ಹಿತ ರಕ್ಷಣೆಯ ಉದ್ದೇಶದಿಂದ ಧನಿಗಳ ಈ ಪ್ರವೃತ್ತಿಯನ್ನು ಪ್ರತಿಬಂಧಿಸಲು ಏನಾದರೊಂದು ಉಚಿತ ಕ್ರಮ ವನ್ನು ಕೈಗೊಳ್ಳಬೇಕಾಗಿ ಒತ್ತಾಯಿಸುತಿದ್ದರು. ಸರಕಾರದವರು ಯಾವುದೇ ಕ್ಷಣದಲ್ಲಿ ಭೂಸುಧಾರಣಾ ಕಾಯಿದೆಯನ್ನು ಮಾಡಿಯಾರೆಂಬ ಹೆದರಿಕೆಯಿಂದಲೇ ಭೂಮಾಲಿಕರು ಒಕ್ಕಲೆಬ್ಬಿಸುವುದಕ್ಕೆ ತೊಡಗಿರುವರೆಂದು ನಂಬಲು ಸರಕಾರದೊಡನೆ ಸಾಕಷ್ಟು ಕಾರಣಗಳಿವೆ. ವ್ಯಾಪಕವಾದ ಭೂಸುಧಾರಣಾ ಕಾಯಿದೆಯನ್ನು ಜ್ಯಾರಿಗೆ ತರುವುದಕ್ಕೆ ಮುಂಚೆ, ದಕ್ಷಿಣ ಕನ್ನಡದ ಪರಿಸ್ಥಿತಿಯತ್ತ ಕೂಡಲೇ ಗಮನಹರಿಸಿ, ಕೃಷಿನಿರತರಾದ ಒಕ್ಕಲುಗಳು ಅನಗತ್ಯವಾಗಿ ತೊಂದರೆಗೊಳಗಾಗದಂತೆ ಮಾಡಬೇಕೆಂದು ಸರಕಾರ ಭಾವಿಸಿತು. ಅಂತೆಯೇ ಚಾಲ್ತಿ ಗೇಣಿಯನ್ನು ನಿಯಂತ್ರಣಮಾಡಿದ ಪಕ್ಷದಲ್ಲಿ, ಮಸೂದೆಯು ಕಾಯಿದೆಯಾಗಿ ಜ್ಯಾರಿಗೆ ಬಂದ ಒಂದು ವರ್ಷದ ವರೆಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೃಷಿ ನಿರತನಾದ ಯಾವುದೇ ಒಕ್ಕಲನ್ನು ಎಬ್ಬಿಸಬಾರದೆಂದು ಈ ಮಸೂದೆಯು ಹೇಳುತ್ತದೆ. ಕಾನೂನಿಗೋದು ತಾಲೂಕಿನ ಪಿಲಿಹೆಳಿಗಳಿಗೆ ಮಲಬಾರು ಒಕ್ಕಲುಹಿತ ಮಸೂದೆ (೧೯೫೨) ಅನ್ವಯಿಸುವುದರಿಂದ, ಪ್ರಕೃತದ ಮಸೂದೆಯ ಕ್ಷೇತ್ರವಲ್ಲಿ "ಪ್ರದೇಶ ಬರುವುದಿಲ್ಲ"

ತ್ರಿವಿಧ ಒಕ್ಕಲುಗಳು

ಚರ್ಚೆಯ ಕಾಲದಲ್ಲಿ ಶ್ರೀಗಳಾದ ಎಲ್. ಸಿ. ಪಾಯಸ್ (ಮಂಗಳೂರು), ಯೆ.ಡ್ತರೆ ಮಂಜಯ್ಯ ಶೆಟ್ಟಿ (ಕುಂದಾಪುರ), ಟಿ. ಅನಂತ ಪೈ (ಉಡುಪಿ) ಇವರು ಮುಖ್ಯ ಮಾತ್ರವನ್ನು ವಹಿಸಿ ಮಾತನಾಡಿದರು. "ಈ ಮಸೂದೆಯನ್ನು ತಂದು ದಕ್ಕೋಸ್ಕರ ನಾನು ಸರಕಾರವನ್ನೂ ಮುಖ್ಯ ಮಂತ್ರಿಗಳನ್ನೂ ಅಭಿನಂದಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು ಬಗೆಯ ಒಕ್ಕಲುಗಳಿರುವರು. ಮೂಲಗೇಣಿ ಒಕ್ಕಲುಗಳು ಹೆಚ್ಚುಕಡಿಮೆ ಕಾಯಂ ಒಕ್ಕಲುಗಳೇ ಆಗಿದ್ದು, ಅವರಿಗೆ ಯಾರಿಂದಲೂ ಯಾವುದೇ ತರದ ಸಂರಕ್ಷಣೆ ಬೇಕಾಗಿಲ್ಲ. ಉಳಿದೆರಡು ವರ್ಗದ ಒಕ್ಕಲುಗಳಿಗೆ ಭದ್ರತೆ ಬೇಕು. ವಾಯಿದೆ ಗೇಣಿ ಒಕ್ಕಲುಗಳು ಒಂದು ನಿರ್ದಿಷ್ಟ ಅವಧಿಯವರೆಗೆ ಭೂಮಿ ಸಾಗುವಳಿ ಮಾಡುವರು. ಆ ಅವಧಿಯಲ್ಲಿ ಅವರನ್ನು ಯಾರೂ ತೊಂದರೆಗೊಳಪಡಿಸುವಂತಿಲ್ಲ. ಅವಧಿ ಮಿಾರಿದೊಡನೆ ಯೇ ಅವರು ಭೂಮಾಲಿಕರ ಇಚ್ಛೆಯಂತೆ ಬೇಸಾಯ ಮಾಡುವ ಯಾ ಬಿಡುವ ಪ್ರಸಂಗ ಬರುತ್ತದೆ. ಚಾಲಗೇಣಿ ಒಕ್ಕಲುಗಳಂತೂ ಧನಿಗಳ ಮರ್ಜಿಯ ಮೇಲೆ ಬೇಸಾಯ ಮಾಡುವವರಾಗಿದ್ದಾರೆ. ಇವರಿಗೆ ಭೂಮಿಯ ಮೇಲೆ ಯಾವುದೇ ತರದ ಕೃತಗಳನ್ನು ಮಾಡಿ, ಊರ್ಜಿತ ಗೊಳಿಸಲಿಕ್ಕೆ ಅಧಿಕಾರವಿಲ್ಲ. ಒಂಸೊಮ್ಮೆ ಮಾಡಿದರೂ ಅದಕ್ಕೆ ಪರಿಹಾರವನ್ನು ಕೊಡದೆಯೇ ಅವರನ್ನು ಒಕ್ಕಲೆಬ್ಬಿಸಲು ಅಭ್ಯಂತರವಿಲ್ಲ. ಮದ್ರಾಸಿನಲ್ಲಿ ಪ್ರಕಾಶಂ ಮಂತ್ರಿ ಮಂಡಳಿಯು ಬಂದ ಕ್ಷಣದಿಂದ, ಭೂಮಾಲಿಕರು ಭೂಸುಧಾರಣಾ ಕಾಯಿದೆ ಬರುವುದೆಂದು ಯೋಚಿಸಿ, ಒಕ್ಕಲೆಬ್ಬಿಸುವುದಕ್ಕೆ ತೊಡಗಿದರು. ಇದು ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಸಲ್ಲಿಸಲ್ಪಟ್ಟ ಮನವಿಗಳು ದುರ್ಲಕ್ಷಿಸಲಾದವು—ಈಗ ಕೊನೆಗಾದರೂ ಇಂಥದ್ದೊಂದು ಕ್ರಮ ತೆಗೆದುಕೊಳ್ಳುವುದಕ್ಕೆ ನನಗೆಸಂತೋಷವಾಗಿದೆ. ಜಿಲ್ಲೆಗೆ ಜಿಲ್ಲೆಯೇ ಇಷ್ಟನ್ನು ವಿಂಗಡಿಸಿಬಿಟ್ಟು ದೆಂದು ನಂಬುತ್ತೇನೆ"ಎಂದು ಶ್ರೀ ಪಾಯಸರು ಹೇಳಿದರು. ಮುಂದುವರಿದು ಅವರು ಹೀಗೆಂದರು- "ಒಳ್ಳೆಯ ಒಕ್ಕಲುಗಳಿಗೆ ಸಂರಕ್ಷಣೆ ಕೊಡಬೇಕೆಂದು ಹೇಳಿದಾಗ ತುಂಬ ಗೇಣಿಯನ್ನು ಬಾಕಿಮಾಡಿಕೊಂಡಿರುವ ಕೆಟ್ಟ ಒಕ್ಕಲುಗಳೂ ಇದ್ದಾರೆಂಬುದನ್ನು ಸರಕಾರ ಗಮನಿಸಬೇಕು. ವ್ಯಾಪಕವಾದ ಭೂಸುಧಾರಣಾ ಕಾಯಿದೆಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ತರುವಾಗ ವಿಷಯದ ಈ ಮುಖವನ್ನೂ ಸರಕಾರ ಲಕ್ಷದಲ್ಲಿಟ್ಟು ಕೊಳ್ಳಲಿ. ಅಂಥ ಕಾಯಿದೆ ಮಾಡುವಾಗ, ಭೂಮಾಲಿಕರೆಂದು ಸಾಮಾನ್ಯವಾಗಿ ಬೀಳ್ಕಡುವವರಲ್ಲಿ ಹೆಚ್ಚಿನವರು ಭೂಮಿಯ ಮೇಲಿಂದ ತಮಗೆ ಸಿಗುವ ಅಲ್ಪಸ್ವಲ್ಪ ಗೇಣಿಯ ಮೇಲಿಂದಲೇ ಜೀವನ ನಿರ್ವಹಿಸುವವರೆಂಬುದನ್ನೂ ಸರಕಾರ ಮರೆಯದಿರಲಿ. ಗೇಣಿಯನ್ನು ಇಂತಿಷ್ಟೆ ಯೆಂದು ನಿರ್ಣಯಿಸುವ ಕಾಲಕ್ಕೆ, ಭೂಮಾಲಿಕನು ದೃಶ್ಯದಿಂದ ಮಾಯವಾಗಿ ಹೋಗುವ ಪ್ರಸಂಗ ಬರಲಾಗದು. ಇನ್ನು ಕೆಲವು ಒಕ್ಕಲುಗಳು ಹಲವಾರು ವರ್ಷಗಳಿಂದ ಒಂದೇ ಭೂಮಿಯಲ್ಲಿ ವ್ಯವಸಾಯ ನಿರತರಾಗಿದ್ದು, ತುಂಬ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದುಂಟು. ಅವರಿಗೆ ಕಿರುಕುಳವಾಗ ಕೂಡದು. ಯಾವುದೇ ಒಕ್ಕಲನ್ನು ಎಬ್ಬಿಸುವಾಗ, ಅವನು ಮಾಡಿದ ಕೃತಕ್ಕೆ ಯೋಗ್ಯ ಪ್ರತಿಫಲವನ್ನು ಕೊಟ್ಟು ತೀರಬೇಕು."

ರಾಜಾಜಿಯ ಉಪಕಾರ

ಮುಂದೆ ಮಾತಾಡಿದ ಶ್ರೀ ಪಂಜ ಯ್ಯ ಶೆಟ್ಟರು ಅನ್ಯಾಯವಾಗಿ ಒಕ್ಕಲೆಬ್ಬಿಸುವುದನ್ನು ಪ್ರತಿಬಂಧಿಸುವ ಈ ಮಸೂದೆ ಗೋಸ್ಕರ ಸರಕಾರವನ್ನು ಅಭಿನಂದಿಸಿದರು. "ಜಿಲ್ಲೆಯಿಂದ ಒಂದರ ಹಿಂದೊಂದು ಬರುತಿದ್ದ ಜ್ಞಾಪನೆಗಳನ್ನು ಒಪ್ಪಿಸಿ, ಸರಕಾರವು ಅಂಶಿಕವಾಗಿ ರೈತರ ಬೇಡಿಕೆಯನ್ನು ಈ ಮಸೂದೆಯಿಂದ ಪೂರೈಸಿದೆ. ಈ ರಾಜ್ಯಕ್ಕೆ ಶ್ರೀರಾಜಾಜಿಯಂಥ ಅದ್ವಿತೀಯ ವ್ಯಕ್ತಿಯ ವರ್ಚಸ್ಸಿನ ಸೌಭಾಗ್ಯ ದೊರೆತಿದೆ ಮನುಷ್ಯನ ಸಮಸ್ಯೆಗಳನ್ನೂ, ಕಷ್ಟಗಳನ್ನೂ ಮನಗಾಣುವ ಬುದ್ಧಿಯು ಅವರಲ್ಲಿದೆ. ರಾಜಾಜಿಯವರು ಪ್ರತ್ಯಕ್ಷಗತವಾಗಿ ಈ ಮಸೂದೆಯಲ್ಲಿ ಆಸ್ಥೆ ವಹಿಸದಿರುತಿದ್ದರೆ, ಇಂಥ ಕ್ರಮ ಬ್ಯಾರಿಗೆ ಬರುತ್ತಿರಲಿಲ್ಲ." ಎಂದವರು ಮುಖ್ಯ ಮಂತ್ರಿಗಳನ್ನು ಶ್ಲಾಘಿಸಿದರು. ಮುಂದುವರಿದು ಹೀಗೆಂದರು- "ಈ ಮಸೂದೆಯಿಂ ದಗೆ ತ ಸಂರಕ್ಷಣೆಯು ಸಾವಿರಾರು ಕೃಷಿಕರು ತಮ್ಮ ವ್ಯವಸಾಯ ಕ್ಷೇತ್ರದಲ್ಲಿ ಚಿಂತೆ ಬಿಟ್ಟು ಕೆಲಸ ಮಾಡುವುದಕ್ಕೆ ಸೆಚ್ಚಿನ ಸ್ಥೈರ್ಯ ಕೊಟ್ಟಂತೆ ತೋರಿದರೂ, ಇಷ್ಟರಿಂದಲೇ ಜಿಲ್ಲೆಯ ಒಕ್ಕಲುಗಳ ಕೃಷಿ ಸಮಸ್ಯೆ ಸಂಪೂರ್ಣ ಪರಿಹಾರವಾಗಲಿಲ್ಲ. ರೈತರಿಗೆ ಇನ್ನೂ ವ್ಯಾಪಕವಾದ, ಸ್ಥಿರವಾದ ಒಕ್ಕಲುತನ ಮತ್ತು ಗೇಣಿಯ ಭರವಸೆ ಇರುವ, ಧನಿ ಒಕ್ಕಲುಗಳ ನಡುವೆ ಸಮರಸದ ಭಾವನೆ ತುಂಬಿರುವ ಪರಿಸ್ಥಿತಿಯನ್ನು, ನಿರ್ಮಾಣಮಾಡುವ ಸುಖಶಾಂತಿ ಸಮೃದ್ಧಿ ಸಂತೋಷಗಳನ್ನು, ತರಬಲ್ಲ ಭೂಸುಧಾರಣಾ ಕಾಯಿದೆ ಬೇಕಾಗಿರುತ್ತದೆ. ಎಲ್ಲ ವರ್ಗದ ಜನರಿಗೂ ನ್ಯಾಯದಾನ ಮಾಡುವ ರೀತಿಯಲ್ಲಿ ತಲೆಯಿರುವ ವ್ಯಾಪಕವಾದ ಭೂಸುಧಾರಣಾ ಕಾಯಿದೆಯನ್ನು ರಚಿಸುವಾಗ ಸರಕಾರ ಇದನ್ನು ನೆನಪಿನಲ್ಲಟ್ಟುಕೊಳ್ಳಬೇಕು."

ಶ್ರೀ ಅನಂತ ಪೈಗಳು ಸರಕಾರಕ್ಕೆ ಕೃತಜ್ಞತೆಯನ್ನು ಅರ್ಪಿಸಿದರಲ್ಲದೆ, ಜಿಲ್ಲೆಯಲ್ಲಿ ಭೂಸುಧಾರಣೆಯ ಪ್ರಶ್ನೆಯು ಕೆಲವು ಕಷ್ಟಗಳನ್ನು ಇದಿರಿಸಬೇಕಾಗಿರುತ್ತದೆಂದೂ ನುಡಿದರು. "ಒಂದು ವರ್ಷದ ವರೆಗೆ ಈ ಮಸೂದೆಯು ಒಕ್ಕಲುಗಳಿಗೆ ಸಂರಕ್ಷಣೆಯನ್ನು ಕೊಡುತ್ತದೆ. ಅಷ್ಟು ಸಮಯದಲ್ಲಿ ಭೂಮಾಲಿಕರೂ ಒಕ್ಕಲು

[ಉಳಿದ ಭಾಗ ನೋಡಿರಿ]

ಮುಖ್ಯ ಪ್ರಕಟಣೆ

"ಆನಂದ ಸುಧೆ" ನಮ್ಮ ಆನಂದ ಸುಧೆ ಸುಮಸ್ತ ಜನಗಳಿಗೆ ಬಲವನ್ನು ಬಂದ ಪುಷ್ಟಿಯನ್ನು ಕಲಿಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ಆ ಟಿ. ಸೀಸೆ ಒಂಕ್ಕೆ ರೂ. ೩—೦—೦.

"ಸ್ತ್ರೀ ಸುಧೆ" ನಮ್ಮ ಸ್ತ್ರೀ ಸುಧೆ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಮತ್ತು ದೋಷಗಳನ್ನು, ಮತ್ತು ಕೂರೆ, ಸರಿಯಾಗಿ ಜತಿಸಿಕ್ಕೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. ೪— ೦ — ೦.

"ಬಾಲ ಸುಧೆ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕಮ್ಮ, ನೀರ, ಮಲಬದ್ಧತೆ, ಹೆಚ್ಚಾಗಿ ಛಿದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸುಟ್ಟಾಗುವಿಕೆ, ಕಿವಿ ಚಿಲಿಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿಕ್ಕಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ವೀರಪಲ್ಲಿ ಆನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ಒಂಕ್ಕೆ ರೂ. ೨—೦—೦.

ಹೆಚ್ಚಾ ಫೀರ್:

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುವರ್ಣ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

ಏಕೀಕರಣದ ಬೇಡಿಕೆ ಈಡೇರುವುದೇ ನಿಜ

ಕನ್ನಡಿಗರಿಗೆ ಉಪರಾಷ್ಟ್ರಾಧ್ಯಕ್ಷ ರಾಧಾಕೃಷ್ಣನ್ನರ ಹಿತೋಕ್ತಿ

ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ॥ ರಾಧಾಕೃಷ್ಣನ್ನರು ಕೆಲವೇ ತಿಂಗಳುಗಳ ಪೂರ್ವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ನೂತನ ಭವನದ ಉದ್ಘಾಟನಾ ಕಾರ್ಯವನ್ನು ನೆರವೇರಿಸುವ ನ್ಯಾಯದಲ್ಲಿ ಉತ್ತರ ಕರ್ನಾಟಕಕ್ಕೆ ಸಂದರ್ಶನ ನೀಡಿದರು. ನೊನ್ನೆ ಪುನಃ ಅವರು ಹುಬ್ಬಳ್ಳಿಯನ್ನು ಸಂದರ್ಶಿಸಿದ್ದರಿಂದ, ಆ ಪ್ರದೇಶದ ನಾಗರಿಕರಿಗೆ ತುಂಬ ಸಂತೋಷವಾಯಿತು. ಉಪರಾಷ್ಟ್ರಾಧ್ಯಕ್ಷರು ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಕಾರ್ಯಾಲಯದಲ್ಲಿ ನೆರೆದ ಕಾಂಗ್ರೆಸ ಕಾರ್ಯಕರ್ತರನ್ನು ಉದ್ದೇಶಿಸಿ ಕೆಲವು ಹಿತೋಕ್ತಿಗಳನ್ನಾಡಿದರು. ಪ್ರದೇಶ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹಳ್ಳಿ ಕೇರಿಯನವರು ರಾಧಾಕೃಷ್ಣನ್ನರನ್ನು ಸ್ವಾಗತಿಸುತ್ತ ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕೆಂದು ಒತ್ತಾಯಿಸುವ ಮತ್ತು ಈ ವಿಷಯದಲ್ಲಿ ಉಪರಾಷ್ಟ್ರಾಧ್ಯಕ್ಷರು ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸಲು ನೇಮಕಗೊಂಡ ಆಯೋಗದ ಮೇಲೆ ಪ್ರಭಾವ ಬೀರಬೇಕೆನ್ನುವ ಮನವಿಯೊಂದನ್ನು ಅರ್ಪಿಸಿದರು. ಇದಕ್ಕೆ ಉತ್ತರ ಕೊಡುತ್ತಾ ರಾಧಾಕೃಷ್ಣನ್ನರು ಹೀಗೆಂದರು—"ಕರ್ನಾಟಕಿಗರಾದ ನೀವು ನಿಮ್ಮ ಬೇಡಿಕೆಯನ್ನು ಒಕ್ಕೊರಲಿನಿಂದ ಮತ್ತು ಬಲವತ್ತಾದ ರೀತಿಯಲ್ಲಿ ಈ ಆಯೋಗದ ಮುಂದೆ ಮಂಡಿಸಿದ ಪಕ್ಷದಲ್ಲಿ ಆಯೋಗಕ್ಕೆ ನಿಮ್ಮ ಬೇಡಿಕೆಯನ್ನು ಮಾನ್ಯಮಾಡಲೇ ಬೇಕಾಗಿ ಬರುವುದು" ಈ ವಿಷಯವನ್ನು ಆಭ್ಯಸಿಸಿ ಬೇಡಿಕೆಯ ಅರ್ಜಿಯನ್ನು ತಯಾರಿಸಲು ಸ್ವಲ್ಪ ಕಾಲಾವಕಾಶಬೇಕು. ಆದರೆ ಇಂದು ಹೆಚ್ಚು ಗಟ್ಟಿಯಾಗಿ ಕೂಗಾಡುವವರ ಕೆಲವರಗಳು ನಿರಾಯಾಸವಾಗಿ ಕೈಗೂಡುವೆಂಬ ತಪ್ಪು ಕಲ್ಪನೆ ಹುಟ್ಟುತ್ತದೆ—ಈ ತಪ್ಪು ಭಾವನೆಗೊಳಗಾಗಿ ಕನ್ನಡಿಗರು ಯಾರೂ ಗದ್ದಲ ಮಾಡುತ್ತ ಹೋಗಬಾರದು." ಉಪರಾಷ್ಟ್ರಾಧ್ಯಕ್ಷರು ಗಾಂಧೀಜಿಯವರೊಡನೆ ತಾವು ಈ ವಿಷಯದಲ್ಲಿ ಬಹಳ ಹಿಂದೆ ನಡೆಸಿದ ಮಾತುಕತೆಯನ್ನು ಸ್ಮರಿಸಿಕೊಂಡರು. ಈ ಹಿನ್ನಲೆಯಲ್ಲಿ ಉಚ್ಚ ಅಧಿಕಾರದ ಆಯೋಗ ನೇಮಕಗೊಂಡಿರುವುದನ್ನು ನೋಡಿದರೆ, ಭಾಷಾ ರಾಜ್ಯದ ಪುರಸ್ಕರ್ತರು ನಿರಾಸರಾಗುವುದಕ್ಕೆ ಕಾರಣ ವಿಲ್ಲೆಂದು ಅವರು ಅಭಿಪ್ರಾಯಪಟ್ಟರು. ಕರ್ನಾಟಕ ಏಕೀಕರಣದ ಪ್ರಶ್ನೆಯು ಎಲ್ಲ ರಾಜಕೀಯ ಭಿನ್ನಾಭಿಪ್ರಾಯಗಳನ್ನೂ ಮೀರಿ ಮೇಲೇರಿ ನಿಲ್ಲುವ ಜೀವಾಳದ ಪ್ರಶ್ನೆಯಾದುದರಿಂದ ಇಲ್ಲಿ ಪಕ್ಷ ಪಂಗಡಗಳ ಭೇದವಿಲ್ಲದೆ ಸಕಲರೂ ಸೌಹಾರ್ದಯುತವಾಗಿ, ಒಗ್ಗಟ್ಟಿನಿಂದ ಕೆಲಸ ಮಾಡಬೇಕು: ಯಾವುದೇ ತರದ ಹಿಂಸಾ ಕಾರ್ಯಗಳಲ್ಲಿ ಪ್ರವೃತ್ತರಾಗದೆ ಶಾಂತ ರೀತಿಯಿಂದ, ವಿರಾಮಾಮಕಾರಿ ದಾಖಲೆಗಳನ್ನು ಒದಗಿಸುವುದರ ಮೂಲಕ— ಆಯೋಗಕ್ಕೆ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಡಬೇಕು.

ಆಂಧ್ರ ರಾಜಧಾನಿಯ ಪ್ರಶ್ನೆ

ಭಾಷಾ ರಾಜ್ಯದ ಚಳುವಳಿಯು ಹೆಡೆದ ಆಂಧ್ರ ರಾಜ್ಯವೆಂಬ ಜೋಡ್ಚಿಲು ಮಗು ಹಲವು ಬಗೆಯ ಕಾಯಿಲೆಗಳನ್ನು ಎದುರಿಸಬೇಕಾಗಿ ಬಂದಿರುವುದು ಪೌರ್ವಾರ್ಯ ವೆಂದೇ ಹೇಳಬೇಕು. ಹಿಂದೊಮ್ಮೆ ಹೇಳಿದಂತೆ ಆಂಧ್ರ ರಾಜ್ಯವೇ ಭಾಷಾ ರಾಜ್ಯಗಳ ಬೇಡಿಕೆಯನ್ನು ಮನ್ನಿಸುವುದಕ್ಕೂ ತಿರಸ್ಕರಿಸುವುದಕ್ಕೂ ಕಳಪೆದಿಯಾಗುವುದಾದರೆ, ಕನ್ನಡಿಗರಿಂದ ತೊಡಗಿ ಎಲ್ಲ ಭಾಷಾ ಪ್ರೇಮಿಗಳೂ ನಿರಾಶರಾಗುವ ಪ್ರಮೇಯ ಬಂದೀತು. ಸ್ಥಿರವಾದ ಭದ್ರವಾದ ಸರಕಾರವನ್ನು ರಚಿಸುವುದಕ್ಕೋಸ್ಕರ, ಅಧಿಕಾರತ್ ಗವರ್ನರರರ ರಾಜ್ಯ ಭಾರ ಕೃಮವನ್ನು ಕಪ್ಪಿಸುವುದಕ್ಕೋಸ್ಕರ—ಆಂಧ್ರರಲ್ಲಿ ನಡೆದ ರಾಜಕೀಯ ಚದುರಂಗದಾಟವು ಜುಗುಪ್ಸೆ ತರುವಂತಿದ್ದರೂ, ಆಂಧ್ರ ರಾಜ್ಯದ ಹಿತದೃಷ್ಟಿಯಿಂದ ಎಲ್ಲರೂ ಶುಭವಾಗಲೆಂದೆ ಮನದೊಳಗೆ ಹಾರೈಸಿ ಸುಮ್ಮನುಳಿದರು. ವಿರಾಮಾನದಲ್ಲಿ ಆಸ್ತಿತ್ವಕ್ಕೆ ಬಂದ ಸಮ್ಮಿಶ್ರ ಮಂತ್ರಿಮಂಡಲದಲ್ಲಿ ಒಡಕು ಪ್ರಾರಂಭದಿಂದಲೂ ಇತ್ತೆಂಬುದಕ್ಕೆ ಶ್ರೀ. ಲಚ್ಚಣ್ಣನವರು ತಾವಿರಿಸಿದ ಕೃಷಿಕರ ಲೋಕಪಕ್ಷದ ಆದೇಶನ ಮೇರೆಗೆ ರಾಜೀನಾಮೆ ಕೊಟ್ಟು ಹೊರಬಂದುದೇ ಸಾಕ್ಷಿ. ಆಂಧ್ರ ರಾಜ್ಯದ ಪ್ರಥಮ ಶಾಸನ ಸಭಾಧಿವೇಶನದಲ್ಲಿ ರಾಜಧಾನಿಯ ಪ್ರಶ್ನೆಯನ್ನು ಪುನಃ ಎತ್ತಬಾರದೆಂದು ಏನೋ ಹಸಿಬಿಸಿಯಾಗಿ ನಿರ್ಣಯದನ್ನು ಮಾಡಿ, ವ್ಯಕಾಶಮರು ಸಮಾಧಾನದ ಉಸಿರೆಳೆದಿದ್ದರು. ಆದರೆ, ಈ ಸಲದ ಬಜೆಟು ಅಧಿವೇಶನದಲ್ಲಿ ಮತ್ತೆ ಈ ಪ್ರಶ್ನೆಯನ್ನು ಎತ್ತಲು ಪ್ರಯತ್ನ ನಡೆಯಿತು ಕೃಷಿಕರ ಲೋಕಪಕ್ಷದವರು ವಿಜಯವಾಡಾ— ಗುಂಟೂರುಗಳೇ ರಾಜಧಾನಿಯಾಗಲು ಯೋಗ್ಯವೆಂಬ ತಮ್ಮ ಪೂರ್ವದ ನಿಲುವಿಗೆ ಅಂಟಿಕೊಂಡುದರಿಂದ, ಕರ್ನೂಲಿನಲ್ಲಿ ಸರಕಾರೀ ಕಟ್ಟಡಗಳನ್ನು ರಚಿಸುವುದಕ್ಕೋಸ್ಕರ ಮುಂಗಡ ಪತ್ರದಲ್ಲಿ ಸೂಚಿಸಿದ ವೆಚ್ಚಕ್ಕೆ ಸಮ್ಮತಿಯನ್ನು ನೀಡಲಾಗದೆ ಹೊರಬಂದರು ಈ ನೆಚ್ಚವನ್ನು ಮುಂಜೂರು ಮಾಡಬೇಕೆಂಬ ಸೂಚನೆಯ ಚರ್ಚೆಯ ಕಾಲಕ್ಕೆ ಶ್ರೀ. ಪುಂಡರೀಕಾಕ್ಷ ಎಂಬವರು ಕಡಿತದ ಸೂಚನೆ ಮಂಡಿಸಿ, ಈ ವರ್ಷದ ಒಕ್ಕೋಬರಪೊಳಗೆ ಗುಂಟೂರು ವಿಜಯವಾಡ ಗಳಿಗೆ ರಾಜಧಾನಿಯನ್ನೊಯ್ಯಬೇಕೆಂದೂ ಮದ್ರಾಸಿನಲ್ಲಿರುವ ಆಂಧ್ರ ರಾಜ್ಯದ ಪ್ರದೇಶಗಳು ಇದೇ ಎಸ್ರಿಲಪೊಳಗೆ ಗುಂಟೂರು ವಿಜಯವಾಡಗಳಿಗೆ ಸ್ಥಳಾಂತರಿಸಬೇಕೆಂದೂ ಆಗ್ರಹಪಟ್ಟರು ಸುದೈವದಿಂದ ಮುತದಾನ ಕಾಲಕ್ಕೆ ಬದು ಬಹುಮತಗಳಿಂದ ಸರಕಾರಕ್ಕೆ ಜಯಲಭಿಸಿತು ಹೀಗೆ ರಾಜಧಾನಿಯ ಪ್ರಶ್ನೆ ಸದ್ಯಕ್ಕೆ ಹಿಂದೊಡಲ್ಪಟ್ಟಿತು.

ವ್ಯಕಾಶಮರ ಜೆವರಿಕೆ

ಪ್ರಕಾರಮರು ಇದರಿಂದ ಧೈರ್ಯ ತಾಳಿ-ವಂತೆ ಮಾತ್ರ ಇಲ್ಲವೆಂಬುದನ್ನು ಈ ಮತದಾನದ ಪ್ರಸಂಗವೇ ಎತ್ತಿ ಹೇಳುತ್ತದೆ ತನ್ನ ಮಂತ್ರಿ ಮಂಡಳದ ಮೇಲೆ ವಿಶ್ವಾಸನವನ್ನು ವ್ಯಕ್ತಗೊಳಿಸಬೇಕೆಂದೂ ಅನ್ಯಥಾ ಈಗಿಂದೀಗಲೇ ರಾಜೀನಾಮೆ ಒಪ್ಪಿಸುವುದಾಗಿಯೂ ಅವರು ಸಾರಿದರು ಸಭಾಧ್ಯಕ್ಷರು ವಿಶ್ವಾಸ ಪ್ರದರ್ಶಿಸುವುದಕ್ಕೆ ಸಂದರ್ಭವನ್ನು ಕೊಡದೆ, ಕಡಿತದ ಸೂಚನೆಯ ಮೇಲೆ ಮತದಾನ ಮಾಡುವುದಕ್ಕೆ ನೇರಾದ ಅವಕಾಶ ಕಲ್ಪಿಸಿದರು. ಹಾಗೆಂದು ಪ್ರಕಾಶಮರ ಈ ಬೆದರಿಕೆ ವಾಂಛಿತ ಫಲವನ್ನು ನೀಡಿತು— ಕೃಷಿಕರ ಲೋಕಪಕ್ಷದ ೧೧ ಸದಸ್ಯರಲ್ಲಿದ್ದ ಒಗ್ಗಟ್ಟನ್ನು ಇದು ಮುರಿಯಿತು ಒಬ್ಬ ಸದಸ್ಯರು ಸರಕಾರಕ್ಕೆ ಬೆಂಬಲ ನೀಡಿದರೆ, ಇನ್ನೊಬ್ಬರು ಮತದಾನ ಕಾಲಕ್ಕೆ ಯಾರ ತಂಟೆಯೂ ಬೇಡವೆಂದು ಮೆಲ್ಲನೆದ್ದು ಹೊರ ಹೋದರು ಹಲವು ಸಮಯದಿಂದ ಕಾಮಿಲೆ ಪೀಡಿತರಾಗಿದ್ದ ಕಾಂಗ್ರೆಸ ಸದಸ್ಯರೊಬ್ಬರು ಈ ಸಭೆಗೆ ಬಂದು, ಸರಕಾರಕ್ಕೆ ತಮ್ಮ ಮತವನ್ನು ನೀಡಿದರು. ತಮಗೆ ಬಹುಮತ ದೂರೆಯುವೆಂಬ ಅಂಜಿಕೆ ಸರಕಾರಕ್ಕೆ ಇದ್ದಿತೆನ್ನುವುದಕ್ಕೆ ಇದು ನಿದರ್ಶನ. ಆದರೆ ಕಾಂಗ್ರೆಸ ಪಕ್ಷದಲ್ಲೂ ಒಡಕು ಇದ್ದು, ಮೂರು ಮಂದಿ ಸರಕಾರದ ವಿರುದ್ಧ ಮತ ಕೊಟ್ಟರೆಂಬುದನ್ನು ನೆನೆದರೆ, ಆಂಧ್ರದಲ್ಲಿ ರಾಜ್ಯದ ಒಟ್ಟು ಹಿತಕ್ಕಿಂತಲೂ ಸದಸ್ಯರ ವ್ಯಕ್ತಿಗತ ಆಸೆ ಆಪೇಕ್ಷೆ ವ್ಯಾಮೋಹಗಳಿಗೆ ಅಧಿಕ ಹಾಗೂ ಅನುಚಿತ ಪ್ರಾಧಾನ್ಯ ದೊರೆತಿದೆಯೆಂದೆನಿಸುವುದು. ಆಂಶ ಒನ್ಮೆ ಸರಕಾರದಸೂಚನೆ ಪಾಸಾದುದರಿಂದ, ತಾತ್ಕಾಲಿಕ ರಾಜಧಾನಿಯಾದ ಕರ್ನೂಲಿನಲ್ಲಿ ೫೦೦ ಸರಕಾರಿ ನೌಕರರ ವಸತಿ ಗೃಹಗಳೂ ಸೆಕ್ರೆಟೇರಿಯಟ್ ಮತ್ತು ಆಧಿಕಾರಿಗಳು ಇರುವುದಕ್ಕೋಸ್ಕರ ಮನೆಗಳೂ, ಒಂದು ಸರಕಾರೀ ಅತಿಥಿ ಗೃಹವೂ ಪ್ರೆಸ್ಸಿದಲ್ಲಿಯೇ ರಚಿಸಲ್ಪಡುವುದು. ಕೇಂದ್ರ ಸರಕಾರದವರು ಇಲ್ಲಿ ವಿಮಾನ ನಿಲ್ದಾಣವನ್ನು ಕಟ್ಟಿಸುವ ವಿಚಾರವನ್ನು ಮಾಡುತ್ತಿರುವರು. ಈ ಬಗೆಯಾಗಿ ರಾಜಧಾನಿಯ ಸೌಂದರ್ಯ ಹೆಚ್ಚಿಸಲು ಅನುಕೂಲವಾಗಿದೆ— ಸರಿಯಾಗಲೀ ತಪ್ಪಾಗಲೀ ಒಮ್ಮೆ, ಶಾಸನ ಸಭಾ ಸದಸ್ಯರೆಲ್ಲ ಸೇರಿ ಬಹುಮತದಿಂದ ಕರ್ನೂಲನಲ್ಲಿಯೇ ರಾಜಧಾನಿ ಇರಬೇಕೆಂಬ ನಿರ್ಧರಿಸಿಯಾಗಿದೆ ಇನ್ನು ವಿಶಾಲಾಂಧ್ರದ ರಚನೆಯಾಗುವ ತನಕ ಕರ್ನೂಲನ್ನೆ ತಮ್ಮ ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳುವುದು ವಿಹಿತ. ಅದು ಬಿಟ್ಟು ಹೀಗೆ ಪದೇ ಪದೇ ಕೆರುಕುಳದ ಪ್ರಶ್ನೆಗೆ ಅವಕಾಶ ಮಾಡಿಕೊಡುವುದು ಸರಿಯಲ್ಲ. ಆದರೆ ಆಂಧ್ರ ರಾಜ್ಯದ ವೈಶಿಷ್ಟ್ಯವೇ ಇದಾಗಿದ್ದೀತು—ಕಳೆದ ಅಧಿವೇಶನದಲ್ಲಿ ಮಂತ್ರಿಗಳಿಗೆ ತಿಂಗಳೊಂದಕ್ಕೆ ೫೦೦ ರೂಪಾಯಿಗಳ ಸಂಬಳವಿರಬೇಕೆಂದೂ ಅವರ ಕೈಕೆಳಗಿನ ಪಾರ್ಲಿಮೆಂಟರಿ ಕಾರ್ಯದರ್ಶಿಗಳಿಗೆ ೬೦೦ ರೂಪಾಯಿಗಳ ಮಾಸಿಕ ವೇತನ ದೊರೆಯಬೇಕೆಂದೂ ಶಾಸನ ಸಭಾ ಸದಸ್ಯರು ತೀರ್ಮಾನಿಸಿದ್ದರು! ಕಾರಣ ಆಂಧ್ರದ ಗವರ್ನರರು ಈ ನಿರ್ಣಯವು ಸಮರ್ಪಕವಾಗಿಲ್ಲವೆಂದೂ ಆದ ಕಾರಣ ಅವನ್ನು ಪುನರಾಲೋಚಿಸಬೇಕೆಂದೂ, ಮಂತ್ರಿಗಳು ತಮ್ಮ ಸ್ಥಾನದ ಘನತೆ ಗೌರವಗಳನ್ನು ಗಾಪಾಡಿಕೊಳ್ಳುವುದಕ್ಕೋಸ್ಕರ ಸಂಬಳದ ಮಿತಿಯನ್ನು ಏರಿಸಬೇಕೆಂದೂ ಹೇಳಿ, ಮಸೂದೆಯನ್ನು ಮರಳಿ ಶಾಸನ ಸಭೆಗೆ ಕಳಿಸುವ ಪ್ರಸಂಗ ಬಂದಿತು. ಶಾಸನ ಸಭಾ ಸದಸ್ಯರು ತಿಳಿದು ತಿಳಿದು ಇದೇ ಬಗೆಯಲ್ಲಿ ತಪ್ಪಿ ಬೀಳುತಿದ್ದರೆ, ಆ ರಾಜ್ಯದ ಭವಿಷ್ಯದ ಬಗ್ಗೆ ನಾವು ಯಾವ ಆಶೆಯನ್ನು ಕಟ್ಟಿಕೊಳ್ಳೋಣ?

ವೇತನ ದೊರೆಯುವ ಪ್ರತಿ ದಿವಸದಲ್ಲೂ ಸೇವಿಂಗ್ಸ್ ಬ್ಯಾಂಕ್ ಲೆಕ್ಕಪತ್ರದಲ್ಲಿ ಹಣವಿಡಲು ಪ್ರಾರಂಭಿಸಿರಿ.

ನಿಮ್ಮ ಸಂಸಾರದಲ್ಲಿ ನೀವು ಉಳಿಸಿಕೊಳ್ಳುವ ಆಂತರ್ಯ ಅತೀ ಮುಖ್ಯವಸ್ತು. ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನಲ್ಲಿ ಸಪಸ್ಸಾರು ಮುಂದಿ ಸೇವಿಂಗ್ಸ್ ಡಬ್ಬ ತೆರೆದು ತಾವು ಉಳಿಸುವ ಹಣವನ್ನು ವ್ಯವಸ್ಥಿತ . . ಆಪೇಕ್ಷಿತ ವಸ್ತುಗಳನ್ನು ಕೊಂಡುಕೊಳ್ಳಿರಿ . . ಹೆಚ್ಚಿಗೆ, ಆನಂರೀಕ್ಷಿತ ಸ್ಥಿತಿಗತಿಗಳಿಗಾಗಿ ನಿಮಾಸಲಿದುತ್ತಾರೆ. ಹಲ್ಲಿರುವಾಗಲೆ ಪುರಿಗಡಲೆ ಎಂಬಂತೆ ನೀವು ಸಂಪಾದನೆ ಮಾಡುವ ಈ ಸಮಯವೇ ಹಣ ಉಳಿಸುವ ಪರ್ವಕಾಲವಾಗಿದೆ. ಪ್ರತಿ ತಿಂಗಳ ನಿಮ್ಮ ಸಂಬಳದಲ್ಲಿ ಕೇಳಪಾ 10 ರೂಪ್ಯನ್ನು ಸೇವಿಂಗ್ಸ್ ರೆಪ್ಪಿದಲ್ಲಿರಿಸಿ ನಿಮ್ಮ ಆರ್ಥಿಕ ಅಭಿವೃದ್ಧಿ ಹಾಗೂ ಭಾವೀ ಭದ್ರತೆಯನ್ನು ಕಾಪಾಡಿಕೊಳ್ಳಲು ಮುಂದಾಗಿರಿ.

ವ್ಯವಹಾರ ವಹಿವಾಟು ರೂ. 5,00,00,000

THE CANARA INDUSTRIAL & BANKING SYNDICATE LTD.,
Estd: 1925 H. O UDIPI. S. India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ: ೧೯೨೫] [ಪ್ರಧಾನ ಕಛೇರಿ: ಉಡುಪಿ ದ. ಭಾರತ.

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ದರ್ಜೆಯ
—ವಸತಿ ಮತ್ತು ಭೋಜನಗೃಹ—

ಸ್ವಸ್ತಿಕ್ ಲೋಜ್

ಪಳನೀರು ರಸ್ತೆ, ಮಂಗಳೂರು.

ಗಾಳಿ ಬೆಳಕುಗಳಿದ್ದು ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!
ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು!
ಉಪಾಹಾರಿಗಳಿಗೆ ಸುರುಚಿ ಬ್ರಾಹ್ಮಣ ಆಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ಪರ ಸುಲಭ! ಸಂಪರ್ಕಿಸಿ ಸಮಾಧಾನ ಪಡೆಯಿರಿ!!

ಚಿತ್ತರಂಜನದ ನೂರನೇ ರೈಲ್ವೇ ಯಂತ್ರ

ಸ್ವತಂತ್ರ ಭಾರತದ ಪ್ರಗತಿಯಲ್ಲೊಂದು ಮೈಲುಗಲ್ಲು

ಕಲ್ಕತ್ತೆಯ ಚಿತ್ತರಂಜನ ರೈಲ್ವೆ ಯಂತ್ರ ಕಾರ್ಖಾನೆಯು ಕಳೆದವಾರ ಸ್ವತಂತ್ರ ಭಾರತದ ಪ್ರಗತಿಯನ್ನು ಅಳೆಯಬಹುದಾದ ಒಂದು ನಿಶ್ಚಿತ ಮಟ್ಟವನ್ನು ಮುಟ್ಟಿತು. ಕಾರ್ಖಾನೆಯಲ್ಲಿ ಉತ್ಪಾದಿತವಾದ ನೂರನೇ ರೈಲ್ವೆ ಯಂತ್ರವನ್ನು ಅಂದು ಹಳಿಗಳ ಮೇಲೆ ಓಡಾಡಿಸಿದರು. ಸ್ವತಃ ರೈಲ್ವೆ ಮಂತ್ರಿ ಶ್ರೀ ಲಾಲಬಹದ್ದೂರ ಶಾಸ್ತ್ರಿಗಳೇ ರೈಲ್ವೆಯನ್ನು ನಡೆಸಿಕೊಂಡು ಕೆಲವು ಗಜ ದೂರ ಬಂದರು. ಪಶ್ಚಿಮ ಪಂಜಾಬದ ಮುಖ್ಯ ಮಂತ್ರಿ ಡಾ. ಬಿ. ಸಿ ರೊಯ್ ಅವರೂ ಇಂಜಿನದ ಕಾಲ್ಕಣಿಯ ಮೇಲೆ ನಿಂತು ಕೊಂಡು ಲಾಲಬಹಾದ್ದೂರ ಶಾಸ್ತ್ರಿಗಳು ನಡೆಸುತಿದ್ದ ರೈಲ್ವೆಯ ಮೂಲಕ ಸಮಾರಂಭ ಜರಗುವ ಜಾಗಕ್ಕೆ ಆಗಮಿಸಿದರು. ದಿವಂಗತ ದೇಶಬಂಧು ಚಿತ್ತರಂಜನ ದಾಸರ ಧರ್ಮಪತ್ನಿ ಶ್ರೀಮತಿ ಬಸಂತಿ ದೇವಿಯವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಯಂತ್ರದ ಮೇಲೆ ಕೆತ್ತಲ್ಪಟ್ಟಿದ್ದ "ಚಿತ್ತರಂಜನ ೧೦೦" ಎಂಬ ಫಲಕವನ್ನು ಅನಾವರಣ ಮಾಡಿದರು. ರೈಲ್ವೆ ಮಂತ್ರಿಗಳು ಕಾರ್ಖಾನೆಯ ಕೆಲಸಗಾರರ ಕಾರ್ಯಕ್ಷಮತೆಯನ್ನು ಪ್ರಶಂಸಿಸಿ ಮಾತನಾಡಿದರಲ್ಲದೆ, ಬೇಗನೇ ಇಲ್ಲಿಯ ಉತ್ಪಾದನಾ ಮಟ್ಟವನ್ನು ಸರಾಸರಿ ಮಿತಿಗೆ ಏರಿಸಬೇಕೆಂದು ಅಭಿಪ್ರಾಯಪಟ್ಟರು. ಕಳೆದ ವರ್ಷ ನಿರ್ದಿಷ್ಟಪಡಿಸಿದಕ್ಕಿಂತ ಎರಡು ಯಂತ್ರಗಳು ಹೆಚ್ಚಾಗಿಯೇ ಈ ಕಾರ್ಖಾನೆಯಲ್ಲಿ ಸಿದ್ಧಗೊಂಡಿವೆ. ೧೯೫೫ನೇ ಇಸವಿಯ ಸುಮಾರಿಗೆ ನಮಗೆ ಬೇಕಾದಷ್ಟು ಯಂತ್ರಗಳನ್ನು ಈ ಕಾರ್ಖಾನೆಯೇ ಪೂರೈಸುವ ನಿರೀಕ್ಷೆ ಸಹ ಇದೆ. ವಿದೇಶಗಳಿಂದ ಬಿಡಿ ಭಾಗಗಳನ್ನು ಎಷ್ಟು ಅವಶ್ಯಕವೋ ಅಷ್ಟು ಮಾತ್ರ ತರಿಸಲಾಗುತ್ತಿದೆ ಈ ಯಂತ್ರಗಳ ಉತ್ಪಾದನೆಯಲ್ಲಿ ನೂರಕ್ಕೆ ೯೫ ಭಾರತದಲ್ಲಿಯೇ ತಯಾರಾದ ಬಿಡಿಭಾಗಗಳು ಉಪಯೋಗಿಸಲ್ಪಡುತ್ತಿವೆ. ಈ ಕಾರ್ಖಾನೆಯಲ್ಲಿ ಪ್ರಕೃತ ತಿಂಗಳಿಗೆ ಆರರಂತೆ ಯಂತ್ರಗಳು ನಿರ್ಮಾಣಗೊಳ್ಳುತ್ತಿವೆ ಈ ಪ್ರಮಾಣವನ್ನು ಸುಲಭದಲ್ಲಿಯೇ ಹನ್ನೊಂದಕ್ಕೆ ಏರಿಸಬಹುದೆಂದು ಜವಾನೀ ತಜ್ಞರು ಅಭಿಪ್ರಾಯ ವ್ಯಕ್ತಗೊಳಿಸಿರುವರು.

ಉದ್ದಿಮೆದಾರರ ಅಭಿಪ್ರಾಯ

ಇದು ಸಾಧ್ಯವಾಗಬೇಕಾದರೆ ಕೆಲಸಗಾರರ ಸಹಕಾರದೊಂದಿಗೆ ನಿರಾತಂಕವಾಗಿ ಕಚ್ಚಾ ವಸ್ತುಗಳ, ಬಿಡಿಭಾಗಗಳ ಪೂರೈಕೆಯಾಗುತ್ತಿರಲೂ ಬೇಕು ನಮ್ಮ ರೈಲ್ವೆ ಯಂತ್ರಗಳೆಲ್ಲ ಬಹಳ ಹಳೆಯದಾಗಿರುವುದರಿಂದ, ಅವುಗಳನ್ನು ತೆಗೆದು ಹೊಸ ಯಂತ್ರಗಳನ್ನು ಸ್ಥಾಪಿಸುವ ಕೆಲಸವು ವಿಳಂಬಿಸಿಲ್ಲದೆ ನಡೆಯಬೇಕಾಗಿರುವುದು. ಚಿತ್ತರಂಜನದ ಇಂಜಿನುಗಳುಮಾತ್ರವೇ ನಮ್ಮ ಆವಶ್ಯಕತೆಯನ್ನು ಪ್ರಕೃತ ಪೂರೈಸಲಾರವು. ಆದ ಕಾರಣ ಹೊರಗಿನ ಸಹಾಯವನ್ನು ಈ ವಿಷಯದಲ್ಲಿ ನಾವು ಪಡೆಯಲೇ ಬೇಕಾದ ಪ್ರಸಂಗ ಬಂದಿರುತ್ತದೆ. ಕೊಲೊಂಬೋ ಯೋಜನೆಯಂತೆ ಕೆನಡಾ ದೇಶವು ಭಾರತಕ್ಕೆ ೧೫೦ ರೈಲ್ವೆ ಯಂತ್ರಗಳನ್ನು ಒದಗಿಸುತ್ತದೆ. ಅಮೇರಿಕಾ ದೇಶವು ಒಂದು ನೂರು ಯಂತ್ರಗಳನ್ನು ಐದು ಸಾವಿರ ಬಂಡಿಗಳನ್ನು ವಿದೇಶಗಳಿಂದ ತರಿಸಿಕೊಳ್ಳಲು ಸಾಕಷ್ಟು ಧನ ಸಹಾಯವನ್ನು ಕೊಡುತ್ತದೆ ಈ ಸಹಾಯಕ್ಕೋಸ್ಕರ ನಾವು ಕೃತಜ್ಞರಾಗಿರುವುದಲ್ಲದೆ, ಇತ್ತ ಭರದಿಂದ ಉತ್ಪಾದನೆಯನ್ನು ಹೆಚ್ಚಿಸಲೂ ನೋಡಬೇಕು. ದೇಶೀಯ ಕೈಗಾರಿಕೆಗಳ ಸಹಕಾರವನ್ನು ಈ ಕಾರ್ಖಾನೆ ಅಧಿಕ ಪ್ರಮಾಣದಲ್ಲಿ ಒದಗಿಸಿಕೊಂಡರೆ, ಆಗ ಬೇಗ ಬೇಗನೇ ಯಂತ್ರಗಳನ್ನು ಕಟ್ಟಿಕೊಳ್ಳಲು ಚಿತ್ತರಂಜನ ಕಾರ್ಖಾನೆಗೆ ಸಾಧ್ಯವಾಗುತ್ತದೆ. ಈ ಕಾರ್ಖಾನೆಯನ್ನೂ ದಾಮೋದರ ಕಣಿವೆ ಯೋಜನೆ, ಸಿಂಧ್ರಿಯ ಗೊಬ್ಬರ ಕಾರ್ಖಾನೆ ಮುಂತಾದ ಸರಕಾರ ನಡೆಸುವ ಬೇರೆ ಉದ್ಯಮಗಳನ್ನೂ ಇತ್ತೀಚೆಗೆ ಖಾಸಗಿ ಉದ್ದಿಮೆದಾರರ ತಂಡವೊಂದು ಸಂದರ್ಶಿಸಿ, ಇಲ್ಲಿ ವಿದ್ಯಮಾನವಿರುವ ಪರಿಸ್ಥಿತಿಯ ಅಧ್ಯಯನವನ್ನು ಮಾಡಿತು. ಈ ಸಂಬಂಧದಲ್ಲಿ ಸರಕಾರಕ್ಕೆ ಒಪ್ಪಿಸಿದವರದಿಯಲ್ಲಿ ಖಾಸಗಿ ಉದ್ದಿಮೆದಾರರು ದೇಶವನ್ನು ಪ್ರಗತಿಪಥದಲ್ಲಿ ಮುಂದೊಯ್ಯುವ ಈ ಕೈಗಾರಿಕೋದ್ಯಮಗಳ ಕುರಿತು ಮೆಚ್ಚಿಗೆ ವ್ಯಕ್ತಪಡಿಸಿದ್ದಲ್ಲದೆ-ಇನ್ನೂ ಹೆಚ್ಚಿನವನ್ನು ಕಾಣುವಂತಾಗಬೇಕೆಂದು ಅತ್ಯಮೂಲ್ಯ ಸಲಹೆಗಳನ್ನೂ ನೀಡಿರುವರು. ಉದಾಹರಣೆಗೆ ಚಿತ್ತರಂಜನ ಕಾರ್ಖಾನೆಯವರು ಈಗ ವಿದೇಶಗಳಿಂದ ಆಮದು ಮಾಡಿಕೊಳ್ಳುವ ಕೆಲವೊಂದು ಸರಕುಗಳು ದೇಶದೊಳಗೆಯೇ ಉತ್ಪಾದಿಸಲಾಗುತ್ತವೆಂದೂ ಅವುಗಳನ್ನು ಉಪಯೋಗಿಸಿದರೆ ಖಾಸಗಿ ಉದ್ದಿಮೆದಾರಿಕೆಯು ವೃದ್ಧಿಯಾಗುವುದೆಂದೂ ಹೇಳಿರುವರು ಮುಖ್ಯವಾದ ಉದ್ದಿಮೆಯನ್ನು ನಡೆಸುತಿದ್ದಂತೆಯೇ ಕೆಲವು ಉಪ ಸಾಮಗ್ರಿಗಳ ಕೈಗಾರಿಕೆಗೂ ಅವಕಾಶ ಕಲ್ಪಿಸಿಕೊಡಬೇಕೆಂಬುದು ಈ ಖಾಸಗಿ ಅಧ್ಯಯನಮಂಡಳದವರು ನೀಡಿದ ಇನ್ನೊಂದು ವಿಶಿಷ್ಟ ಸೂಚನೆ. ಇವರು ಮಾಡಿದ ಮೂರನೆಯ ಸೂಚನೆಯು ಇನ್ನೂ ಮಹತ್ವದ್ದಾಗಿರುತ್ತದೆ—ಸರಕಾರದ ಕಡೆಯಿಂದ ನಡಿಸಲ್ಪಡುವ ಉದ್ದಿಮೆಗಳಲ್ಲಿ ವೈವಹಾರಿಕ ಜಾಣ್ಮೆ ಮತ್ತು ವ್ಯಾಪಾರೀ ಕೌಶಲ್ಯಗಳಿಗೆ ಅವಕಾಶ ಸಾಕಷ್ಟು ತೋರುತ್ತಿಲ್ಲ. ಈ ನ್ಯೂನತೆಯನ್ನು ಹೋಗಲಾಡಿಸಿ ಪರಿಸ್ಥಿತಿಯನ್ನು ಊರ್ಜಿತ ಗೊಳಿಸುವುದಕ್ಕೋಸ್ಕರ ನಾಲ್ವರು ಸರಕಾರೀ ಪ್ರತಿನಿಧಿಗಳೂ, ನಾಲ್ವರು ಖಾಸಗಿ ಉದ್ದಿಮೆದಾರರ ಪ್ರತಿನಿಧಿಗಳೂ ಒಬ್ಬ ಆಡಳಿತಾಧಿಕಾರಿಯೂ ಇರುವ ಆಡಳಿತ ಮಂಡಳಿಗಳನ್ನು ಸರಕಾರ ರಚಿಸಬೇಕೆಂದು ಉದ್ದಿಮೆದಾರರ ಅಭಿಪ್ರಾಯ.

ಮದ್ರಾಸು ಶಾಸನ ಸಭೆಯಲ್ಲಿ

ಮದ್ರಾಸಿನಲ್ಲಿ ಕಳೆದ ವಾರ ಶಾಸನ ಸಭೆ ತೋರಿಸಿದ ಚಟುವಟಿಕೆಗಳೆಲ್ಲವೂ ರೈತರ ಹಿತರಕ್ಷಣೆಯ ಘನೋದ್ದೇಶವನ್ನೆ ಕಣ್ಣುಮುಂದಿಟ್ಟುಕೊಂಡಿದ್ದಂಥ ವಿಧೇಯಕಗಳು ಮಂಡಿತವಾದವು. ಕೃಷಿಕರ ಋಣಭಾರವನ್ನು ಕಡಿಮೆಗೊಳಿಸಲು ಸಾಲಗಾರರ ಸಂಘಗಳನ್ನು ಸ್ಥಾಪಿಸಲು ಸರಕಾರ ಸಹಾಯ ಮಾಡುವ ವಿಧೇಯಕವೊಂದು ಮಂಡಿತವಾಯಿತು. ಸಾಲಗಾರರ ಸಂಘಗಳಿಗೆ ಸರಕಾರ ಸಾಲ ಕೊಡುವ ಮೊತ್ತವನ್ನು ಹೆಚ್ಚಿಸಲು ಸಹಕಾರ ಸಂಘಗಳ ಕಾಯಿದೆಗೆ ತಿದ್ದುಪಡಿ ತರುವ ವಿಧೇಯಕವೂ ಮಂಡಿತವಾಯಿತು. ಸಾಲಗಾರರ ಸಂಘಗಳಿಗೆ ಸರಕಾರ ಕೊಡುವ ಸಾಲದ

NAVAYUGA
Popular Kannada Weekly.
Founder:—
Sri **A. B. SHETTY,**
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯಮಂತ್ರಿ.
ವಾ. ಚಂದಾ: ರೂ. 5-12-0
ಬಿಡಿಪ್ರತಿ: 0- 2-0

ನ ವ ಯು ಗ
ಉಡುಪಿ, ಗುರುವಾರ ೧೪-೧-'೫೫

ಒಕ್ಕಲುಗಳಿಗೆ ಭದ್ರತೆ

"ಹೂವಿನ ಸ್ಥಾನದಲ್ಲಿ ಹೂವಿನ ಎಸಳು" ಎಂಬಂತೆ, ದಕ್ಷಿಣಕನ್ನಡ ಜಿಲ್ಲೆ ಗೊಂದು ವ್ಯಾಪಕವಾದ ಒಕ್ಕಲುಹಿತ ಮಸೂದೆಯ ಆವಶ್ಯಕತೆ ಇದ್ದ ಗಳಿಗೆಯಲ್ಲಿ ಅನ್ಯಾಯುಬಾಗಿ ಒಕ್ಕಲೆಬ್ಬಿಸುವು ದನ್ನು ತಾತ್ಕಾಲಿಕವಾಗಿ ಒಂದು ವರ್ಷದ ವರೆಗೆ ತಡೆಗಟ್ಟುವ ಶಾಸನಬದ್ಧ ಕ್ರಮ ವೊಂದನ್ನು ಮದ್ರಾಸು ಸರಕಾರ ತಂದಿ ರುತ್ತದೆ. ಜಾಲ್ತಿ ಗೇಣಿಯನ್ನು ಮಸೂದೆ ಜ್ಯಾರಿಗೆ ಬಂದ ಒಂದು ತಿಂಗಳಿನೊಳಗೆ ಪಾವತಿ ಮಾಡಿದ ಪಕ್ಷದಲ್ಲಿ ಧನಿಯು ಅಂಥ ಒಕ್ಕಲನ್ನು ಭೂಮಿಯಿಂದ ಬಿಡಿಸ ಲಾರನು. ಈ ತಾತ್ಕಾಲಿಕ ತಡೆಯಾಜ್ಞೆಯ ಅವಧಿಯು ಮುಗಿಯುವುದರೊಳಗೆ, ಅಂದರೆ, ಇನ್ನು ಒಂದು ವರ್ಷದಲ್ಲಿ ಸರ ಕಾರವು ವ್ಯಾಪಕವಾದ ಭೂಸುಧಾರಣಾ ಮಸೂದೆಯನ್ನು ಜ್ಯಾರಿಗೆ ತರುವದೆಂಬ ಭರವಸೆಯು ಮಂತ್ರಿಗಳಿಂದ ದೊರೆತಿರು ವುದರಿಂದ ರೈತರೆಲ್ಲರೂ ಹೆಚ್ಚಿನ ಭರವಸೆ ಗಾವುದು ಸ್ವಾಭಾವಿಕ. ಶಾಸನ ಸಭೆಯ ಲ್ಲಿ ಪ್ರಸ್ತುತದ ಕ್ರಮದ ಮೇಲೆ ಚರ್ಚೆ ನಡೆದ ಕಾಲ ಕ್ಕೆ ಜಿಲ್ಲೆಯ ಎಲ್ಲ ಸದಸ್ಯರೂ ಆದನ್ನು ಬೆಂಬಲಿಸಿಯೂ ಸ್ವಾಗತಿಸಿಯೂ ಮಾತನಾಡಿದರು. "ಈ ಮಸೂದೆಯು ಸರಿಯಾದ ದಾರಿಯಲ್ಲಿಟ್ಟ ಹೆಜ್ಜೆ" ಎಂದು ಸದಸ್ಯರೊಬ್ಬರು ವರ್ಣಿಸಿ ದುದರಲ್ಲಿ ಅತಿಶಯೋಕ್ತಿಯಿಲ್ಲ. ಅದರಂತೆ "ಈ ಕ್ರಮದ ಆವಶ್ಯಕತೆಯು ಬಹಳ ಹಿಂದಿನಿಂದಲೂ ಇದ್ದ ಕಾರಣ ಎಂದೋ ಈ ಮಸೂದೆ ಬರಬೇಕಿತ್ತು. ತಡವಾಯಿ ಕ್ರಮ ತೆಗೆದುಕೊಂಡುದರಿಂದ ಅನ್ಯಾಯ ವಾಗಿ ಎಷ್ಟೋ ಒಕ್ಕಲುಗಳು ಎಬ್ಬಿಸಲ್ಪ ಟ್ಟರು, ಇನ್ನೆಷ್ಟೊ ಮಂದಿ ಕೋರ್ಟಿನ ಖಾಗಿಲಿಗೆಳೆಯಲ್ಪಟ್ಟರು" ಎಂದು ಮತ್ತೊಬ್ಬ ಸದಸ್ಯರು ಹೇಳಿದುದೂ ವಾಸ್ತವಾಂಶವಾಗಿರುತ್ತದೆ ದಕ್ಷಿಣ ಕನ್ನಡ ಜಿಲ್ಲೆಯ ಒಕ್ಕಲುಗಳು ಸಮಾನ ಹಕ್ಕು ಬಾಧ್ಯತೆಗಳು ಹಾಗೂ ಭದ್ರತೆಯ ವಿಷಯದಲ್ಲಿ ಹೆಚ್ಚಿನ ಆಸ್ಥೆಯುಳ್ಳವರಾಗಿರು ವರೆಂದು ಬೇರೊಬ್ಬ ಸದಸ್ಯರು ಹೇಳಿದ ಸಂಗತಿಯೂ ಜನಾಭಿಪ್ರಾಯವನ್ನು ಸರಿ ಯಾಗಿ ಬಿಂಬಿಸುತ್ತದೆ. ಹೀಗೆ ನಮ್ಮ ಜಿಲ್ಲೆಯ ಪ್ರತಿನಿಧಿಗಳಲ್ಲಿ ಎಲ್ಲರೂ ಒಕ್ಕಲು ಗಳಿಗಾಗುತ್ತಿರುವ ಅನ್ಯಾಯವನ್ನು ಪ್ರತಿ ಭಟಿಸಿಯೂ ಅವರ ಉತ್ಕರ್ಷಕ್ಕೆ ನೆ ರವಾಗುವ ಕ್ರಮವನ್ನು ಜ್ಯಾರಿಗೆ ತರುವಂತೆ ಒತ್ತಾಯಿಸಿಯೂ ಒಮ್ಮತದಿಂದ, ಒಗ್ಗಟ್ಟಿನಿಂದ ಕೆಲಸ ಮಾಡುತ್ತಿರುವುದು ಶ್ಲಾಘನೀಯವಾದ ದ್ದು. ನಮ್ಮ ರೈತ ಬಾಂಧವರೆಲ್ಲರೂ ಮಾನ್ಯ ಸದಸ್ಯರುಗಳಿಗೆ ಹೃತ್ಪೂರ್ವಕವಾದ ಬೆಂಬಲವನ್ನಿತ್ತು, ಪ್ರತಿನಿಧಿಗಳ ಸ್ವರಕ್ಕೆ ತೂಕಬರುವಂತೆ ಉತ್ತೇಜನನೀಡಬೇಕು ಮತ್ತು ತನ್ಮೂಲಕ ತಮ್ಮ ಆಶೋತ್ತರಗ ಳನ್ನು ನ್ಯಾಯವಾದ ರೀತಿಯಲ್ಲಿ ತ್ವರಿತದ ಲ್ಲಿಯೇ ನೆರವೇರಿಸಿಕೊಳ್ಳಬೇಕು. ಸುಬ್ರ ಹ್ಮಣ್ಯಂ ಸಮಿತಿಯು ಮಾಡಿದೊಂದು ಸ ಲಹೆಯು ಪರಿಣಾಮವಾಗಿ ಭೂಮಾಲಿಕ ರು ಒಕ್ಕಲುಗಳ ಗೇಣಿಯನ್ನು ಹೆಚ್ಚಿಸಲು ಉದ್ಯುಕ್ತರಾಗಿ, ಹಾಗೆ ಅಧಿಕ ಗೇಣಿಯ ನ್ನು ಕೂಡಲೊಪ್ಪದವರನ್ನು ಒಕ್ಕಲೆಬ್ಬಿ ಸುವುದಕ್ಕೆ ತೊಡಗಿದರು. ಇದರಿಂದ ಸಂ ತ್ರಸ್ತರಾದ ಒಕ್ಕಲುಗಳ ಬಲವನ್ನು ಸಂ ಪಾದಿಸುವುದಕ್ಕೋಸ್ಕರ ಭೂಸುಧಾರಣೆ ಯನ್ನು ಅನುಲಿಗೆ ತರುವುದಾಗಿ ಚುನಾವ ಣಾಗಾಳಿಯಲ್ಲಿ ಪ್ರಚಾರ ಸಂದೇಶಗಳು ತೂರಿಬಿಡಲ್ಪಟ್ಟವು. ಈಗಲೂ ಸರಕಾರದ ವರು ಸಾರ್ವಜನಿಕ ಅಭಿಪ್ರಾಯದ ಒತ್ತ ಡಕ್ಕೆ ಕಟ್ಟುಬಿದ್ದೆಂಬಂತೆ ಶಾಸನ ಸಭೆಯ ಮುಂದೆ ತಂದ ಈ ಮಸೂದೆಯು ತಮ್ಮ ಪ್ರಯತ್ನಗಳಿಂದಲೇ ದಿನವ ಬೆಳಕು ಕ್ಕಿ ತೆನ್ನುವ ಪಕ್ಷಪಂಗಡಗಳಿಗೆ ಕಡಿಮೆ ಇಲ್ಲ. ಖಾಸಗಿಯಾಗಿ ಸದಸ್ಯರು ಶಾಸನ ಸಭೆ ಯಲ್ಲಿ ತಂದ ಯಾವ ಗೊತ್ತುವಳಿಯೂ ಸ್ವೀಕಾರಗೊಳ್ಳುವ ಉದಾಹರಣೆ ನಮ್ಮ ಮುಂದಿಲ್ಲವಾದುದರಿಂದ, ಎಲ್ಲ ಮಸೂದೆ ಗಳಿಗೂ ಪ್ರೇರಣೆಯಾಗಿ ಮಂತ್ರಿ ಮಂಡ ಳದ ಸದಸ್ಯರೇ ಇರುವರೆಂಬುದು ಸ್ಪಷ್ಟ ಸಿದ್ಧ. ರಾಜ್ಯದಲ್ಲಿ ಪ್ರಕೃತ ಕಾಂಗ್ರೆಸ ಮಂ ತ್ರಿಮಂಡಳವಿಯುವುದರಿಂದ, ಪಕ್ಷದ ದೃಷ್ಟಿ ಯಿಂದ ಶ್ರೇಯಸ್ಸೇನಾದರೂ ಸಲ್ಲುವು ದಿದ್ದರೆ, ಅದು ಕಾಂಗ್ರೆಸ್ಸಿಗೆ ಸೇರಬೇಕೆಂ ದು ತೋರುತ್ತದೆ—ಆದರೆ ಹೀಗೆ ಕೀರ್ತಿ ಬಯಸುವುದೂ ತಪ್ಪು. ಬದಲು ಇದ ಕ್ಕೋಸ್ಕರ ಪ್ರಯತ್ನ ಮಾಡಿದ ಎಲ್ಲರೂ ಒಕ್ಕಲುಗಳಿಗೆ ಮಸೂದೆಯ ಅಶಯವನ್ನು ಜ್ಞೆನ್ನಾಗಿ ತಿಳಿಸಿ ಹೇಳಬೇಕು. ಓದು ಬರಹ ಬಾರದ ಹೆಳ್ಳಿಯ ರೈತರಿಗೆ ಮ ಸೂದೆಯ ಕಲಮುಗಳ ಪರಿಜ್ಞಾನವಿರ ಲಿಕ್ಕಿಲ್ಲ—ಮಾತ್ರವಲ್ಲ ಮಸೂದೆ ಶಾಸನ ಸಭೆಯ ಮುಂದೆ ಬಂದು, ಅಂಗೀಕಾರ ಗೊಂಡಿದೆ ಎಂಬುದರ ಸುಳಿವೂ ಹತ್ತದ ಒಕ್ಕಲುಗಳು ಹಲವಾರು ಇದ್ದಾರೆ. ಈ ಅಜ್ಞಾನಿ ಒಕ್ಕಲುಗಳನ್ನು ಧನಿಗಳು ಬಲ ತ್ಕಾರ, ಹಾಗೂ ಭಯ ಬೆದರಿಕೆಗಳಿಂದ ಈಗಿಂದೀಗ ಒಕ್ಕಲೆಬ್ಬಿಸಲು ನೋಡುತ್ತಿ ರುವುದನ್ನೂ ಕಾಣಬಹುದು. ಒಕ್ಕಲುಗಳ ಭದ್ರತೆಗಳಿಗೋಸ್ಕರ ಶ್ರದ್ಧೆಯಿಂದ ಮಾಡಿ ದ ಎಲ್ಲರೂ ಈಗ ಅಂಥ ಸಂಕಟ ಗ್ರಸ್ತ ಒಕ್ಕಲುಗಳ ಸಂರಕ್ಷಣೆಗೆ ಧಾವಿಸಬೇಕಾ ದುದು ನ್ಯಾಯವು ಮತ್ತು ಅಪೇಕ್ಷಣೀಯ. ಆದರಂತೆ, ನಾಳೆ ವ್ಯಾಪಕವಾದ ಮಸೂ ದೆ ಬಂದ ಬಳಿಕ, ನಿಶ್ಚಿತ ಗೇಣಿ ಮತ್ತು ಸಾಗುವಳಿ ಮಾಡುವ ಭೂಮಿಯ ಮೇಲೆ ಅಧಿಕಾರಬಂಧ ಬಳಿಕ, ಆತನ ಸ್ಥಿತಿ ಸು ಧಾರಿಸುವುದಕ್ಕೋಸ್ಕರ ಈಗಿಂದೀಗಲೇ ತಕ್ಕ ಉಪಾಯಗಳನ್ನು ಯೋಜಿಸಬೇಕು. ಗೇಣಿ ಕಡಮೆ ಮಾಡಿದರೆ, ಒಕ್ಕಲುತನದ ಭದ್ರತೆ ಕೊಟ್ಟರೆ, ಭೂಸುಧಾರಣೆಯು ಉ ದ್ದೇಶ ನೆರವೇರಿತೆಂದೂ ಒಕ್ಕಲುಗಳ ಸು ಖ ಸಂತೋಷ ಹೆಚ್ಚುವುದೆಂದೂ ಅಭಿ ಪ್ರಾಯಪಡುವುದು ಸರಿಯಲ್ಲ. ಮುಂಬ ಯಿಯಲ್ಲಿ ಹೊಲ ಸಾಗುವಳಿ ಕಾಯಿದೆ ಯು ಧನಿಗೆ ಸಂದಾಯವಾಗುವ ಗೇಣಿ ಯ ಅಂಶ ಉತ್ಪನ್ನದ ಮೂರರಲ್ಲಿ ಒಂ ದುಪಾಲು ಎಂದಿದ್ದುದನ್ನು ಅರರಲ್ಲಿ ಒಂದಂ ಶಕ್ಕೆ ಇಳಿಸಿತು; ಮೇಲಾಗಿ ಕೀರ್ನೆಯನ್ನೂ ಧನಿಯೇ ಕಟ್ಟಬೇಕೆಂದು ಹೇಳಿತು. ಆದ ರೂ ಒಕ್ಕಲುತನ ಅಭಿವೃದ್ಧಿ ಹೊಂದಲಿಲ್ಲ. ಭೂಮಿಯೊಡೆತನ ಪಡೆದ ಅಭಿಮಾನದ ಭರದಲ್ಲಿ, ಉತ್ಪಾದನೆಯನ್ನೇನು ರೈತ ಹೆಚ್ಚಿಸಲಿಲ್ಲ. ರೈತನಿಗೆ ಎತ್ತು ಕೋಣಗಳು ಗೊಬ್ಬರ ಬೀಜಗಳು, ನೀರಾವರಿಯ ಅ ನುಕೂಲತೆ ಇತ್ಯಾದಿ ಬೇಕಾಗಿನೆಯೆಂಬಂ ತೆ ಆರ್ಥಿಕ ಸಹಾಯವೂ ತುಂಬ ಆವಶ್ಯಕ ವೆಂದೂ ಕಂಡು ಬಂದಿದೆ. ಮುಂಬರುವ ವ್ಯಾಪಕವಾದ ಭೂಸುಧಾರಣಾ ಕಾಯಿ ದೆಯು ಪ್ರಶ್ನೆಯ ಈ ಮಹತ್ವದ ಮುಖ ವನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕೆಂದು ಶ್ರೀ ಆನಂತ ಪೈಗಳು ಶಾಸನ ಸಭೆಯಲ್ಲಿ ಹೇಳಿರುವುದನ್ನು ನಾವೂ ಅನುಮೋದಿಸು ತ್ತೇವೆ; ಮತ್ತು ರೈತರ ಉದ್ಧಾರದಲ್ಲಿ ಆಸ ಕ್ತಿಯುಳ್ಳ ಪ್ರತಿಯೊಬ್ಬನೂ ಗ್ರಾಮಾಂತರದ ಕೃಷಿ ಪದ್ಧತಿಯು ಮುಂದಿರುವ ಈ ಸಮಸ್ಯೆಯನ್ನು ಜೆನ್ನಾಗಿ ಅಭ್ಯಸಿಸಿ, ಸರ ಕಾರದ ಮುಂದೆ ಸಕಾಲದಲ್ಲಿಯೇ ಉತ್ತ ಮ ಸಲಹೆಗಳನ್ನಿಯಬೇಕೆಂದೂ ಸೂಚಿ ಸುತ್ತೇವೆ.

ಕೊರಿಯಾದ ಕುರಿತು ಭಾರತದ ಸೂಚನೆ

ರಾಷ್ಟ್ರಸಂಘದ ಸಾಮಾನ್ಯಾಧಿವೇಶನ ಸೇರಿಸುವ ಪ್ರಯತ್ನ

ಜನವರಿ ೨೨ನೇ ದಿನಾಂಕ ಸಮಾಪಿಸಿ ದಂತೆ ಜಾಗತಿಕ ರಾಜಕಾರಣಿಗಳೆಲ್ಲರ ದೃಷ್ಟಿಯೂ ಕೊರಿಯಾದ ಕಡೆಗೆ ಹರಿಯು ತೊಡಗಿದೆ — ಕೊರಿಯಾನಲ್ಲಿ ಯುದ್ಧ ಜ್ವಾಲೆ ಕಿಡಿಯುಗುಳುತ್ತಿರುವುದನ್ನು ನಿಲ್ಲಿ ಸಲು ಶತಪ್ರಯತ್ನಗಳು ಮಾಡಬೇಕಾ ದವು ಇದರಲ್ಲಿ ಭಾರತದದು ಮಹತ್ವದ ಪಾತ್ರವನ್ನು ವಹಿಸಿತು, ಮಾತ್ರವಲ್ಲದೆ, ಯುದ್ಧ ವಿರಾಮ ಒಪ್ಪಂದಕ್ಕೆ ಆಡ್ಡಿಯಾ ಗಿ ನಿಂತಿದ್ದ ವಿನಿಮಯಕ್ಕೊಪ್ಪದ ಯು ದ್ಧ ಕೈದಿಗಳ ಪ್ರಶ್ನೆಯನ್ನು ಇತ್ಯರ್ಥಗೊ ಳಿಸಲು ಒಂದು ಸೂತ್ರವನ್ನೂ ಸಿದ್ಧಗೊಳಿ ಸಿತು. ಪರಿಣಾಮದಲ್ಲಿ ತನ್ನ ಮೇಲೆ ಬಿದ್ದ ಗುರುತರವಾದ ಹೊಣೆಗಾರಿಕೆಯನ್ನು ಸಂ ತೋಷದಿಂದ ಸ್ವೀಕರಿಸಿ, ಶಾಂತಿ ನೆಲೆಗೊ ಳಿಲೆಂದು ಕಷ್ಟಗಳನ್ನು ಧಿಕ್ಕರಿಸಿ ನಡೆ ಯಿತು. ಆದರೆ ಯುದ್ಧವಿರಾಮ ಒಪ್ಪಂ ದದ ಮುಖ್ಯವಾದ ಎರಡು ಕಲಮುಗಳು ಯಥಾರ್ಥವಾಗಿ ಆಚರಣೆಯಲ್ಲಿ ಬಾ ರಲ್ಲಿ—(೧) ೯೦ದಿನಗಳ ಅವಧಿಯಲ್ಲಿ ವಿನಿ ಮಯಕ್ಕೊಪ್ಪದ ಯುದ್ಧ ಕೈದಿಗಳಿಗೆ ವಿವರಣೆಯನ್ನು ಕೊಡಬೇಕೆನ್ನುವ ಶ ರ್ತಿನ ಪ್ರಕಾರ ಕೆಲಸ ನಡೆಯಲಿಲ್ಲ. ೯೦ ದಿನಗಳ ಅವಧಿ ಮುಗಿದರೂ ಕೇವಲ ಹತ್ತು ದಿನಗಳು ಮಾತ್ರ ವಿವರಣೆಯ ಕಾರ್ಯ ನಡೆಯಿತು. ಮೊದಲಿಗೆ ಸಂ ಯುಕ್ತ ರಾಷ್ಟ್ರ ಸಂಘ, ಆ ಮೇಲೆ ಕ ಮ್ಯೂನಿಸ್ಟ ಪಕ್ಷದ ಕಡೆಯಿಂದ ವಿವರಣಾ ಕಾರ್ಯಕ್ಕೆ ಅತಂಕ ಒದಗಿತು (೨) ಯು

ದ್ಧ ವಿರಾಮ ಒಪ್ಪಂದದಲ್ಲಿ ಉಲ್ಲೇಖಿಸಲ್ಪ ಟ್ಟಿದ್ದ ಕೊರಿಯಾ ರಾಜಕೀಯ ಸಮ್ಮೇಳ ನವು ಇನ್ನೂ ಸೇರಿಲ್ಲ. ಇಲ್ಲಿ ಸಹ ಉಭ ಯ ಪಕ್ಷಗಳೂ ದುರಾಗ್ರಹವನ್ನೆ ಹಿಡಿದ ವು. ಕುಂಟುತ್ತಲಾದರೂ ನಡೆಯುತಿದ್ದ ಪೂರ್ವ ಭಾವಿ ಸಮಾಲೋಚನೆಯನ್ನು ನುಡುಕುತನದಿಂದ ಅಮೇರಿಕಾದ ಪ್ರತಿನಿ ಧಿ ಆರ್ಥರ್ ದೀನರು ನಿಲ್ಲಿಸಿಬಿಟ್ಟರು.

ಭಿನ್ನಾಭಿಪ್ರಾಯ

ಇವರಿಂದ ಮುಂದೇನೆಂಬ ಪ್ರಶ್ನೆ ಸಹ ಜವಾಗಿಯೇ ಉದ್ಭವಿಸುತ್ತದೆ. ಭಾರತೀ ಯ ರಕ್ಷಣಾ ಪಡೆಯು ಯೋಗಕ್ಷೇಮದ ಲ್ಲಿ ೨೨ ಸಾವಿರಕ್ಕಿಂತಲೂ ಅಧಿಕ ಸಂಖ್ಯೆ ಯಲ್ಲಿ ಯುದ್ಧ ಕೈದಿಗಳು ಇರುವರು. ಅವರ ಭವಿಷ್ಯವೇನು? ಅವರನ್ನು ಜನವರಿ ೨೨ನೇ ದಿನಾಂಕ ಮಧ್ಯರಾತ್ರಿ ಹನ್ನೆರಡು ಹೊಡೆವ ಮುಂಚಿತವಾಗಿ ಬಿಡುಗಡೆಮಾಡಬೇಕೆಂದು ಸಂಯುಕ್ತ ರಾಷ್ಟ್ರ ಸಂಘದ ನೇತಾಧಿಪತ್ಯ ಹೇಳುತ್ತ ದೆ. ಈ ವಿಷಯದಲ್ಲಿ ತಟಸ್ಥ ರಾಷ್ಟ್ರ ಮಂಡಳದ ಬಹುಮತದ ನಿರಧಿಯನ್ನು ಅದು ಒಪ್ಪಲು ಸಿದ್ಧವಿಲ್ಲ. ಕಮ್ಯುನಿಸ್ಟ ವಿರೋಧಿ ಕೈದಿಗಳನ್ನು ಸ್ವಾಗತಿಸಿ, ಕರೆ ದೊಯ್ಯಲು ರಾಷ್ಟ್ರ ಸಂಘದ ಸೇನಾಧಿಪತ್ಯವು ನಿಃಸೈನೀಕೃತ ಪ್ರದೇಶದ ಪೊರಗ ಡೆ ವ್ಯಾಪಕವಾದ ವ್ಯವಸ್ಥೆಗಳನ್ನು ಮಾಡಿ ರುತ್ತದೆ. ಅಲ್ಲದೆ ದಿನಾಂಕ ೧೫ರಂದು ಸರ್ವ ಸೇನಾಧಿಪತಿ ಜನರಲ್ ಹಲ್ಲರು ಫ್ರೊರ್ಮೋಸಾ ದ್ವೀಪದ ತೈಪೆಗೂ ಆಗಮಿ ಸಿ, ಚಿಯಾಂಗ್ ಕೈಶೇಕರನ್ನು ಕಂಡು ಈ ಕೈದಿಗಳ ಮರುವಸತಿಯ ಕುರಿತು ವಿಚಾರ ವಿನಿಮಯ ನಡೆಸಿದರೆಂದೂ ತಿಳಿ ಯುತ್ತದೆ. ಆದರೆ ಕಮ್ಯುನಿಸ್ಟರ ನಿಲುವೆ ತದ್ವಿರುದ್ಧವಾಗಿರುತ್ತದೆ. ರಾಜಕೀಯ ಸ ಮ್ಮೇಳನವು ಜರಗಿದ್ದುವಾರುವರಿಂದ ಯು ದ್ಧ ಕೈದಿಗಳನ್ನು ಈಗಲೇ ಬಿಡುಗಡೆ ಮಾ ಡುವುದು ನ್ಯಾಯುವಲ್ಲವೆಂದೂ, ಅವರು ಮುಂದೆ ಕೂಡ ಭಾರತೀಯ ಪಡೆಯ ರ ಕ್ಷಣೆಯಲ್ಲಿರಬೇಕೆಂದೂ ಅವರ ಅಭಿಪ್ರಾಯ. ಈ ಮಾತನ್ನೂ ಕೈದಿಗಳಿಗೆ ವಿವರ ಣೆ ನೀಡುವ ಅವಧಿಯನ್ನು ವಿಸ್ತರಿಸ ಬೇಕೆಂಬ ಅವರ ಒತ್ತಾಯವನ್ನೂ ರಾಷ್ಟ್ರ ಸಂಘದ ಸೇನಾಧಿಪತ್ಯ ನಿರ್ವಾಕ್ಷೇಣ್ಯವಾಗಿ ತಿರಸ್ಕರಿಸಿದೆ. ರಾಜಕೀಯ ಸಮ್ಮೇಳನದ ಕುರಿತು ಪೂರ್ವಭಾವಿ ಸಮಾಲೋಚನೆಗಳನ್ನು ಪುನಃ ತೊಡಗಬೇಕೆಂಬ ಪ್ರಯತ್ನವೂ ಈ ನಡು ವೆ ನಡೆದುದ್ದು, ಉಭಯ ಪಕ್ಷದ ಪ್ರತಿನಿ ಧಿಗಳು ಇವೇ ಗುರುವಾರ (ದಿನಾಂಕ೧೫) ದಿನ ಸಭೆ ಸೇರುವರೆಂದು ಕೇಳುತ್ತೇನೆ. ಆದರೆ ಇದರಿಂದ ವಾಂಛಿತ ಫಲ ದೊರ ಕುವ ಭರವಸೆ ಈಗ ವಿನೇನೂ ಉಳಿದಿಲ್ಲ.

ಭಾರತದ ಸೂಚನೆ

ತಟಸ್ಥ ರಾಷ್ಟ್ರ ಮಂಡಳದ ಅಧ್ಯಕ್ಷರಾ ದ ಭಾರತದ ಜನರಲ್ ತಿಮ್ಮಯ್ಯನವರು ಹೇಳಿಕೆಕೊಟ್ಟು ಉಭಯ ಪಕ್ಷಗಳೂ ಪರ ಸ್ಪರ ಸಮ್ಮತಿಯಿಂದ ಒಪ್ಪಿಕೊಂಡ ಹೊರ ತು ಕೈದಿಗಳನ್ನೆಲ್ಲ ಬಿಡುಗಡೆ ಮಾಡಬೇ ಕಾಗಿ ಬರುವುದೆಂದು ಅಭಿವ್ಯಾಯ ವ್ಯಕ್ತ ಗೊಳಿಸಿರುವರು, ಈ ವಿಷಯದಲ್ಲಿ ಭಾರತ

ಸರಕಾರದ ಅಭಿಪ್ರಾಯವೇನೆಂಬುದು ಸ್ಪಷ್ಟವಾಗಿ ತಿಳಿದಿಲ್ಲವಾದರೂ — ಇಡೀ ಪ್ರಶ್ನೆಯನ್ನು ಸಂಯುಕ್ತರಾಷ್ಟ್ರ ಸಂಘದ ಸಾಮಾನ್ಯಾಧಿವೇಶನಕ್ಕೆ ಒಪ್ಪಿಸ ಬೇಕೆಂಬ ಕುರಿತು ಪ್ರಯತ್ನಗಳು ನಡೆಯುತ್ತಿವೆ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಕೊಟ್ಟಿದ್ದ ಹೇಳಿಕೆಯು ಹಿನ್ನೆಲೆಯಲ್ಲಿ ಅವರು ಶ್ರೀ ಕೃಷ್ಣ ಮೆನೊನ್ನು, ಹಾಗೂ ವಿದೇಶಾಂಗ ನಚಿವಾಲಯದ ಇತರ ಪ್ರಮುಖರೊಡನೆ ಈವಿಷಯ ನೊನ್ನೆನಡೆಸಿದ ಮಾತುಕತೆಗಳನ್ನು ನಾವು ಪರಿಶೀಲಿಸಿದರೆ, ಈ ಸಾತಿ ಸ್ಪಷ್ಟವಾಗುತ್ತದೆ. ಈಗ ತಾನೆ ಬಂದ ವರದಿಯಂತೆ, ಭಾರತ ಸರಕಾರವು ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಅಧಿವೇಶನದ ಅಧ್ಯಕ್ಷೆಯಾದ ಭಾರತದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ವಿಧ್ಯುಕ್ತವಾಗಿ ಪತ್ರವನ್ನು ಬರೆದು ಕೊರಿಯಾದ ಪ್ರಶ್ನೆಯನ್ನು ವಿಚಾರಿಸಲು ಬೇಗನೆ ರಾಷ್ಟ್ರಸಂಘದ ಸಾಮಾನ್ಯ ಅಧಿವೇಶನವನ್ನು ಕರೆಯಬೇಕಾಗಿ ಪ್ರಾರ್ಥಿಸಿದೆ. ಶ್ರೀಮತಿ ಪಂಡಿತರು ಈ ಸಂದೇಶವನ್ನು ರಾಷ್ಟ್ರಸಂಘದ ಮುಖ್ಯಾಧಿಕಾರಿಯಾದ ಶ್ರೀ ಡಾಗ ಹೆಮ್ಮರ್ ಶೆಲ್ಡ್‌ರಿಗೆ ಕಳುಹಿಸಿ, ಸದಸ್ಯ ರಾಷ್ಟ್ರಗಳಿಗೆಲ್ಲ ಇದನ್ನು ರವಾನಿಸ ಬೇಕೆಂದೂ ಕೊರಿಯಾ ವಿಷಯದಲ್ಲಿ ಸಮತರವಾದ ಜವಾಬ್ದಾರಿಯನ್ನು ಪ್ರತಿಯೊಂದು ಸದಸ್ಯ ರಾಷ್ಟ್ರವೂ ಪಡೆದಿರುವುದರಿಂದ ಈ ತಿಂಗಳು ೩೨ನೇ ತಾರೀಕಿನ ಒಳಗೆ ತನ್ನ ಅಭಿಪ್ರಾಯವನ್ನು ತಿಳಿಸ ಬೇಕೆಂದೂ ಕೇಳಿಕೊಂಡಿರುವರು. ಈ ತಾರೀಕಿನೊಳಗೆ ಉತ್ತರ ಸಿಗದಿದ್ದಲ್ಲಿ, ಅಂಥ ಸಭೆಯನ್ನು ಕರೆಯಲು ಪ್ರಾನ ಪ್ರಮತಿಯನ್ನು ವ್ಯಕ್ತಗೊಳಿಸಿದಂತಾಗುವುದೆಂದೂ ಶ್ರೀಮತಿ ಪಂಡಿತರು ಹೇಳಿರುವರು. ಬಹು ಮತದ ಬೆಂಬಲ ದೊರೆತ ಪಕ್ಷದಲ್ಲಿ ಸಾಮಾನ್ಯಾಧಿವೇಶನವು ಫೆಬ್ರುವರಿ ತಿಂಗಳ ೧೨ನೇ ತಾರೀಕಿಗೆ ಸೇರುವ ನಿರೀಕ್ಷೆ ಇದೆ.

ಸೈನಿಕ ಒಪ್ಪಂದ

ಪಾಕಿಸ್ತಾನವು ಅಮೇರಿಕೆ ಯೊಡನೆ ಮಾಡಿಕೊಳ್ಳ ಬೇಕೆಂದಿರುವ ಮಿಲಿಟರಿ ಒಡಂಬಡಿಕೆಯಿಂದ ಭಾರತ ಸರಕಾರವಾಗಲೀ ಜನತೆಯಾಗಲೀ ಬೆಂತೆಗೊಳಗಾಗುವುದು ಅನಾವಶ್ಯಕವೆಂಬ ಮಾತನ್ನು ಮುಹಮ್ಮದಾಲಿಯವರು ಹೇಳುತ್ತಲೇ ಇದ್ದಾರೆ. ಉಭಯರಾಷ್ಟ್ರಗಳಲ್ಲಿ ಸ್ನೇಹ ಸೌಹಾರ್ದಗಳುಳಿಯ ಬೇಕೆಂಬುದೇ ತಮ್ಮ ಇಚ್ಛೆಯೆಂದೂ ಅವರಿನ್ನುತ್ತಾರೆಭಾರತದಲ್ಲಿ ಈ ಒಡಂಬಡಿಕೆಯ ನಿಲುವಿದ್ದ ಜನತವು ಸಂಘಟಿತವಾಗುವುದೆ ಕ್ಕೋಸ್ಕರ ಅವರು ವ್ಯಸನ ಸೂಚಿಸಿ, ಅದನ್ನು ತಡೆಯ ಬೇಕೆಂದು ಪ್ರಧಾನಿ ನೆಹರೂರನ್ನು ವಿನಂತಿಸುತ್ತಾರೆ. ವಿದೇಶಿಯರಿಗೆ ಸೈನ್ಯ ರಾಜ್ಯಗಳನ್ನು ಕೊಡುವ ಪ್ರಶ್ನೆಯೇಇಲ್ಲ ವೆಂದು ಹೇಳುತಿದ್ದಂತೆಯೇ 'ಜರೂರು ಪರಿಸ್ಥಿತಿಯಲ್ಲಿ ನಿಮ್ರರಾಷ್ಟ್ರಗಳ ಸೈನ್ಯವನ್ನು ಆಹ್ವಾನಿಸುವುದಕ್ಕೆ ಆಡ್ಡಿ ಇಲ್ಲ" ಎಂಬುದಾಗಿಯೂ ಅದನ್ನು ಸ್ಪಷ್ಟೀಕರಿಸುತ್ತಾರೆ. ಈ ನಡುವೆ ಅಮೇರಿಕಾದ ನುರಿತ ಬರೆಹಗಾರ ಲೂಯಿಫಿಶರರು ಮುಂಬಯಿಯ ಭಾಷಣಸೊಂದರಲ್ಲಿ ಈ ಒಡಂಬಡಿಕೆಯ ವಿಷಯವನ್ನು ಪ್ರಸ್ತಾಪಿಸುತ್ತಾ, ಭಾರತ ಸಂರಯದ ವೆಡಂ ಭೂತಕ್ಕೆ ಬಲಿಯಾಗಕೂಡದೆಂದು ಹಿತೋಪದೇಶಕ್ಕೆ ತೊಡಗಿದರು. ಪಾಕಿಸ್ತಾನವು ಕಾಶ್ಮೀರದ ಮೇಲೆ ಮರಳಿ ದಾಳಿ ನಡೆಸಿ ಅದನ್ನು ಆಕ್ರಮಿಸಿಕೊಳ್ಳಬಹುದೆಂಬ ಭೀತಿ ಭಾರತಕ್ಕೆ ಇದ್ದಂತೆ, ಪೂರ್ವ ಪಾಕಿಸ್ತಾನವನ್ನು ಭಾರತ ನುಂಗಿಕೊಂಡು ನೀರು ಕುಡಿದೀತೆಂಬ ಹೆದರಿಕೆ ಪಾಕಿಸ್ತಾನದಲ್ಲಿ ಹಬ್ಬಿದೆ ಯೆಂದೂ ಇವರು ಹೇಳಿದರು ಚರ್ಚೆದರಿಂದ ಪಾಕಿಸ್ತಾನ—ಅಮೇರಿಕೆಗಳೊಳಗಿನ ಮಿಲಿಟರಿ ಒಡಂಬಡಿಕೆಯ ಸರಿಯಾದೇವನ್ನು ಪ್ರಶ್ನಿಸುವುದು ಸರಿಯಲ್ಲವೆಂದು ಅವರು ಅಭಿಪ್ರಾಯಿಸಿದರು. ಆದರೆ ಅವರೇ ಹೇಳಿದಂತೆ ಕಮ್ಯೂನಿಸ್ಟರ ವಿರುದ್ಧ ಈ ಒಕ್ಕೂಟ ನಡೆಯುತ್ತಿದೆ ಎನ್ನುವ ರಾಷ್ಟ್ರಗಳೇ ಸನುತೋಲ ಕೆಡುವುದಕ್ಕಿಂತಲೂ ರಕ್ತಯಾದ ಗನುನವನ್ನು ಅಗ್ಗೀಯ ಸಂಸ್ಥೆಯ ಕಡೆಗೆ ಆಕರ್ಷಿಸಿ ಯುದ್ಧ ಪ್ರಜೋದನೆಯನ್ನುಂಟುಮಾಡುವ ಕ್ರಮವಾಗಿ ಇದು ಪರಿಣಮಿಸುತ್ತದೆಭಾರತದಂಥ ವೈವ್ಯಪ್ತಿಯಿಂದ ಪರ್ಯಾಲೋಚಿಸಿ ಈ ಸಂಭಾವ್ಯ ವಿಪತ್ತನ್ನು ದೂರೀಕರಿಸಲು ಬಯಸಿ, ಪಾಕಿಸ್ತಾನ ಸರಕಾರದ ಆತುರವನ್ನು ಖಂಡಿಸುತ್ತದೆ. ವಿವೇಕ ಶೀಲರೆಲ್ಲರೂ ಭಾರತದ ನಿಲುವೆಯ ಸಮರ್ಥಕರೆಂಬುದಕ್ಕೆ ಲಂಡನ್ನಿನ 'ಟೈಮ್ಸ್"ದಂಥ ಪ್ರಸಿದ್ಧ ಪತ್ರಿಕೆ ನೊನ್ನೆ ಬರೆದ ಸಂಪಾದಕೀಯ ಬರೆಹ ಇತ್ತೀಚಿನ ಸಾಕ್ಷಿ.

ಇಂಡೋ ಚೀನದಲ್ಲಿ

ಕಮ್ಯುನಿಸ್ಟರ ಆಕ್ರಮಣದಿಂದ ಫ್ರೆಂಚ್ ಸೈನ್ಯಪಡೆದು ಜೇತರನಿಸಿಕೊಳ್ಳಬಾಗದೆ ಇಂಡೋ ಚೀನಾದಲ್ಲಿ ಮುಗ್ಗರಿಸಿ ಬೀಳುತ್ತಿದೆ ಪೋಚಿ ಮಿನ್ಹರು ಲಾವೋಸದ ಪತನದಷ್ಟಕ್ಕೆಯೇ ನಿಲ್ಲದೆ, ಮುಂದೆಹೋಗಿ ಥೈಲೆಂಡವನ್ನು ಆಕ್ರಮಿಸುವ ಗತ್ತುಗಾರಿಕೆಯನ್ನು ತೋರಿದ್ದಾರೆ. ಥೈಲೆಂಡದಲ್ಲಿ ಜರೂರು ಪರಿಸ್ಥಿತಿಯನ್ನು ಹಿಂದಯೇ ಘೋಷಿಸಿದ್ದರು—ಈಗ ಕರ್ಫ್ಯೂ ಆಜ್ಞೆ ಜಾರಿಗೊತ್ತಟ್ಟಿದೆ. ಫ್ರೆಂಚರ ಅಭಿಪ್ರಾಯವು ಈ ಯುದ್ಧವನ್ನು ಹೇಗಾದರೂ ಕೊನೆಗಾಣಿಸಿ ಯೋಚಿಮಿನ್ಹರೊಡನೆ ಸಂಧಾನ ಮಾಡುವುದಕ್ಕೆ ಅನುಕೂಲವಾಗಿ ತೋರುತಿದ್ದರೂ, ಆಮೇರಿಕದ ವರ್ಚಸ್ಸಿನಿಂದ ಉದಿಸಿರುವುದಲ್ಲಿ ಯಶಸ್ವಿಪ್ರಯತ್ನಗಳಾಗುತ್ತಿಲ್ಲ.

ಬರ್ಲಿನ ಪರಿಷತ್ತು

ನಾಲ್ಕು ಮಹಾರಾಷ್ಟ್ರಗಳ ವಿದೇಶಾಂಗ ಸಚಿವರು ಬರ್ಲಿನದಲ್ಲಿ ಜನವರಿ ೨೫ನೇ ದಿನಾಂಕ ಸಭೆಗೂಡುವುದೆಂಬ ಒಪ್ಪಿಕೊಂಡಿದ್ದು, ಪೂರ್ವ ಥೀ ಮೂಲಿಯೇ ಚಿನೆಗೆಳು ಈಗಾಗಲೇ ಬರ್ಲಿನದಲ್ಲಿ ನಡೆಯ ತ್ತಿವೆ. ಹೆಚ್ಚಿನ ಆತಂಕವನ್ನು ಯಾರೊಬ್ಬರೂ ಕಟ್ಟಿಕೊಳ್ಳುವಂತಿಲ್ಲ ಉಭಯ ಪಕ್ಷದವರಿಗೂ ಇಣುಕಿ ನೋಡ್ಡಿದೆ ಗುಟ್ಟು ಸಿಕ್ಕಿರುವುದರಿಂದ ಈಗ ಪ್ರತ್ಯಕ್ಷ ಯುದ್ಧ ಪ್ರಯೋಜನಕ್ಕೆ ಬಾರದೆಂದು ಜಗನ್ನಾಗಿ ಮನವರಿಕೆಯಾಗಿರುತ್ತದೆ. ಆದ ಕಾರಣ ಪ್ರಚ್ಛನ್ನ ಯುದ್ಧಕ್ಕೆ ಕಾರಣೆಂದು ಕಾಲಹರಣ ಮಾಡುವುದಕ್ಕೆ ಈ ಪರಿಷತ್ತು ನೆಪವಾಗಬಲ್ಲುದು.

ಉಡುಪಿ

ಬೋರ್ಡು ಹೈಸ್ಕೂಲಿನಲ್ಲಿ ವಸ್ತು ಪ್ರದರ್ಶನ—ಉಡುಪಿ ಬೋರ್ಡ್ ಹೈಸ್ಕೂಲಿನ ಸಾಯನ್ಸ್ ಕ್ಲಬ್ಬಿನ ನೇತೃತ್ವದಲ್ಲಿ ಏರ್ಪಡಿಸಲಾದ ವಸ್ತು ಪ್ರದರ್ಶನವನ್ನು ತಾ. 10ರಂದು ಬೆಳಿಗ್ಗೆ ಕರ್ನಾಟಕ ಎಂಜಿನಿಯರಿಂಗ್ ಕಾಲೇಜಿನ ಪ್ರೊಫೆಸರ್ ಶ್ರೀ ಕೆ. ಪಿ. ಆನಂದ ನೆನ್, ಅವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಕ್ಲಾಡ್ ಬರ್ನಾರ್ಡ್‌ರ ಭಾವಚಿತ್ರ ಅನಾವರಣಗೊಳಿಸಲಾಯಿತು. ಹೆಡ್ ಮಾಸ್ಟರ್ ಶ್ರೀ ಎ. ರಾಮಕೃಷ್ಣ ರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಯೂ. ಸುಬ್ರಾಯ ಭಾಯರ್‌ರು ಕಾರ್ಯೋಚಿತ ಭಾಷಣಗಳನ್ನಾಡಿದರು. ಶ್ರೀ ಟಿ. ವಿಠಲ ಪೈಗಳು ಧನ್ಯವಾದ ಸಮರ್ಪಿಸಿದರು.

ಅಕ್ಕಿ ಹೊರೆ ಇದೇ ತಿಂಗಳ ತಾ 17 ರಲ್ಲಿ ಬೈಲ್ಕೂರ್ ಶ್ರೀ ಕೃಷ್ಣ ಮಠದ ಪರ್ಯಾಯ ಪೀಠಾರೋಹಣ ಶ್ರೀ ವಿಶ್ವೇಶತೀರ್ಥರ ಶಾಖಾ ಮಠವಾಗಿರುವ ಶ್ರೀ ರಘುಪತಿ ಮಠದ ಪರ್ಯಾಯ ಮಹೋತ್ಸವದ ಸಲುವಾಗಿ ಶ್ರೀ ಆಥವಾರು ಶ್ರೀ ಪುಟ್ಟಿಗೆ ಶಿಷ್ಯರ ಸ್ವಾಮಿಗಳವರು ತಾ 15ರಲ್ಲಿ ಬಂದು ಕಾರ್ಯಕ್ರಮಗಳನ್ನು ಏರ್ಪಡಿಸಿದ್ದಾರೆ.

ಶ್ರೀ ಯು ಶ್ರೀನಿವಾಸ ಮಲ್ಯರು ಆಲ ಇಂಡಿಯಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಗಳಾಗಿ ಶ್ರೀ ಯು ಶ್ರೀನಿವಾಸ ಮಲ್ಯರು, ಶ್ರೀ ಗಳಾದ ಕೆ. ಬಿ. ಶೆಟ್ಟಿ, ಎಸ್. ಜಿ. ಬಿ. ಎಲ್. ಕಕ್ಕೇರಿ ಮತ್ತು ಬಿ. ಬಿ. ಕಿಂಡಿಗೆ ಇವರನ್ನು ಆಯ್ಕೆಮಾಡಿರುವುದಕ್ಕಾಗಿ ಉಡುಪಿಗೆ ಇದೇ ತಾ 10 ರಂದು ಸಂಜೆ ಬಂದು ಸೇರಿದ ಸಾರ್ವಜನಿಕರ ಪರವಾಗಿ ಪುರಸಭಾ ಅಧ್ಯಕ್ಷರು ಸ್ವಾಗತ ಕೋರಿದರು. ಈ ಘಟನೆಯ ಅನು ಮೋದನಾರ್ಥ ಮತ್ತು ಕಾಂಗ್ರೆಸ್ ಸಂಸ್ಥೆಯನ್ನು ಒಲವಿನಿಂದ ಬೆಳೆಸುವ ವಿಷಯಗಳ ಕುರಿತು ಸಾರ್ವಜನಿಕ ಸಭೆಯೂ ಮಾರ್ಚ್ ೨ ರಾತ್ರಿ ಹಾಗೂ ಶ್ರೀ ಮಲ್ಯರ ಮತ್ತು ಶ್ರೀ ಹೆಗ್ಡೆ ಸಾಮರ್ಥ್ಯ ಗಳನ್ನು ಕೊಂಡಾಡಿ ಧನ್ಯವಾದಗಳನ್ನರ್ಪಿಸಲಾಯಿತು.

ನವಯುಗ ಪ್ರಚಾರರಾಜ್ಯ ವಿಶೇಷಾಂಕ

೧೯೫೩

ವಿವಿಧ ಬರಹಗಳು! ಹಲವಾರು ಚಿತ್ರಗಳು! ನೂರಾರು ಪುಟಿಗಳು!

ವಿಶೇಷ ರೀತಿಯಲ್ಲಿ ಪ್ರಕಟವಾಗುವ ಈ ಸಂಚಿಕೆಯ ಕೆಲವು ಲೇಖಕರು:

ಶ್ರೀ. ಆರ್. ಆರ್. ದಿವಾಕರ್, ಬಿಹಾರಿನ ಗವರ್ನರ್.
ಶ್ರೀ ಪಾಟೀಲ ಪುನುಂತ ರಾವ್, ಎಂ. ಎ., ಬಿ. ಕಾನೂ.
ಶ್ರೀ. ನೆಗಳೂರು ರಂಗನಾಥ, ಎಂ. ಎ., ಎಲ್ ಎಲ್, ಬಿ.
ಶ್ರೀ. ಬಿ. ಎ. ಕೃಷ್ಣಸ್ವಾಮಿ ರಾವ್, ಎಮ್. ಎಸ್. ಸಿ.
ಶ್ರೀ. ಬಿ. ಎಚ್. ಶ್ರೀಧರ, ಎಂ. ಎ.
ಶ್ರೀ. ಎಸ್. ಯು. ರಾಮಚಂದ್ರ ರಾವ್, ಎಂ. ಎ.
ಶ್ರೀ. ನೇವ ನಮಿರಾಜ ಮಲ್ಲ, ಎಂ ಎ., ಬಿ. ಎಲ್.
ಶ್ರೀ. ಕೆ. ಬಿ. ರಾಮಕೃಷ್ಣ ರಾವ್, ಬಿ ಎ (ಆನರ್ಸ್)
ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.

ಶ್ರೀ. ವಿಪರಾಮ ಕಾರಂತ.
ಶ್ರೀ. ಎಂ. ಗೋವಿಂದ ಪೈ.
ಶ್ರೀ. ರಂ. ಶ್ರೀ. ಮುಗಳಿ.
ಶ್ರೀ. ಸಂಜೀವ ಲಕ್ಷ್ಮೀಶ್ವರ.
ಶ್ರೀ. ರಾ. ವೆ. ಕರಗುದರಿ.
ಶ್ರೀ ಕೆ. ಟಿ. ಪಾಂಡುರಂಗಿ.
ಡಾ| ಎಂ. ಗೋಪಾಲಕೃಷ್ಣ ರಾವ್.
ಶ್ರೀ ಎ. ಎಸ್. ರಾಮಕೃಷ್ಣ.
ಶ್ರೀ. ಎಸ್. ವೆಂಕಟರಾಜ.

ಕವಿಭೂಷಣ ಕೆ. ಪಿ ವೆಂಕಪ್ಪ ಶೆಟ್ರು

ಭಾರತದ ಗುರುಕುಲ

(ಯಕ್ಷಗಾನ)

ಸಾಧನ ಭೂಮಿ ವಿಜಯ	0—೬—0
ಅತ್ಯಪಜಿತೆ	0—೬—0
ಜಗತ್ತೇಜ ದಿಗ್ವಿಜಯ	0—೫—0
ಪಾಲಿ ಸುಗ್ರೀವ	0—೫—0

ಬೆಲೆ: ೧ ೫ ೦

ಮದ್ರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ನವಭಾರತ ಪುಸ್ತಕ ಭಂಡಾರ,ಉಡುಪಿ

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No. 96/1952
R. E. P. 390/1953

ಮಂಜುಂಡ ಯಾನೆಸುಬ್ಬಪ್ಪ ಜ್ಯಾರಿ —ಆರ್ಜಿದಾರ

ಖಿದಿಟುಮ್ಮ ಸಹಾ ... .ಶ್ಪಾಂಡೆಂಟ್ರು.

1ನೇ ಶ್ಪಾಂಡೆಂಟಳು ಖಿದಿಟುಮ್ಮ ಮೈ ದಿಂಕಂಇಃ ಜ್ಯಾರಿ ಹೆಂಡ್ತಿ ಸ, ಅಂಡು ಜ್ಯಾರಿ ಮಗಳು ಕಾಸರಗೋಡು ತಾಲೂಕು ಶಿರಿಬಾಗಲು ಗ್ರಾಮದವಳಿರುವನಳು.

ಮೇಲ್ಕಂಡ ಆಮಲ್ ಜ್ಯಾನಿಯಲ್ಲಿ ಸ್ವಿರಾಸ್ತಿ ವಿಲಂಮ್ಮನ ಬಗ್ಗೆ ಆರ್ಜಿದಾರನು ಹಾಜ್ರು ಪಡ್ಸಿದ ವಿಲಂ ಯಿಸ್ತಿಹಾರು ಮಂಜೂರಾತಿ ಬಗ್ಗೆ ತಾ 3—2—1954 ಕ್ಕೆ—ಇಟ್ಟಿರುವ ಸಂಗ್ತಿ 1ನೇ ಶ್ಪಾಂಡೆಂಟಳಿಗೆ ತಿಳಿಸೋಣಾಗಿಯಿದೆ.

Sd/-P. Ahmad
Advocate for Petitioner

ಕಾಸರಗೋಡು 12-1-54

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No. 462 1953

1. K. ಅಮ್ಮಿಲ್ಲಿ ಹಾಲಿ. . . .ಪಾಡಿ.

ಸುಬ್ಬೈ.ಬಿ ರಾಯ. ಇಂಬಸ್ತ್ರ. ವಿಠೋಬ ರಾಯರ ಮಗ. ಕಾಸರಗೋಡು ತಾಲೂಕು ದೇವಸ್ಥ ಗ್ರಾಮದ ಕುಂಬಳ್ಳೆ ವಠ್ಠಮೆಯವ.

—ಪ್ರತಿವಾದಿ

ವಾದಿಯು ಪ್ರತಿವಾದಿಯಿಂದ—ವನೆ ಬರ ಬೇಕಾದ ಅಲ್ಲ ಬಡ್ಡಿ ಖರ್ಚಿಗೆ ಬಿನಾಡಿ ಕೊಳ್ಳುವರೆ ದಾಕ್ಕು ಮೂಡಿಪ ಆ ಜ್ಯಾಜ್ಯನ ತಾರೀಕು 15—1—1954 ಕ್ಕೆ ತಿಳಿಸಿರುವ ಸಂಗ್ತಿ ತಿಳಿಸಿಯಿದೆ

Sd/-P. Ahmad
Advocate for Plaintiff

ಕಾಸರಗೋಡು 12-1-1954